## ಅಖಿಲ ಭಾರತ ಪತ್ರಿಕೆ

## ಫೆಬ್ರವರಿ 2021



# ಶ್ರೀಮಾತೆಯ ಸಾನಿಧ್ಯ

**ಬೆಲೆ : 15/-**



ನನ್ನ ಈ ಸ್ನಿಗ್ಧ–ಮುಗ್ಧ–ಮೊಗ್ಗಗಳ ಯಾತನೆಯ ಘಾತಗಳನು
ನಾ ಸೆಳೆದುಕೊಳುವೆ ನನ್ನೆದೆಯ ತುಡಿತ–ಮಿಡಿತದಲಿ ಅವುಗಳನ್ನು

**– ಪುಟ್ಟು ಕುಲಕರ್ಣಿ**

**([ಸಾವಿತ್ರಿ; ದಳ 7 ರೇಣು 4 ಪುಟ 503)**

Photo: Imaging Savitri

**ಅಖಿಲ ಭಾರತ ಪತ್ರಿಕೆ**
**ಫೆಬ್ರವರಿ 2021**

ಸಂಪುಟ: 31 ಸಂಚಿಕೆ: 02

## ಪರಿವಿಡಿ

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# ಶ್ರೀಮಾತೆಯ ಸಾನಿಧ್ಯ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಶಾಶ್ವತ ಸಾನಿಧ್ಯದ ಸಂಜೀವಿನಿ** 5
ಅನು: ನಾಗಜ್ಯೋತಿ ಮಾನ್ವಿ

**ಚೈತ್ಯದ ದ್ವಾರ (ನಿಸರ್ಗಾತೀತ ದ್ವಾರ)** 14
ಅನು: ಡಾ॥ ಮಹಾದೇವ ಸಕ್ರಿ

**ಶ್ರೀಮಾತೆಯ ಸಾನಿಧ್ಯಕ್ಕೆ ಅರಳುವಿಕೆ** 31
ಅನು: ಪ್ರೊ. ವೀರಭದ್ರಪ್ಪ ಕೆ.

**ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು** 43
ಡಾ॥ ಶಂ.ಬಾ. ಜೋಶಿ

**ದಿವ್ಯ ಜೀವನ** 52
ಅನು: ಜಾನ್ವಿ

**ಭವಾನೀ ಭಾರತೀ** 61
ಅನು: ಪುಟ್ಟು ಕುಲಕರ್ಣಿ

## ಸಂಪಾದಕರ ಟಿಪ್ಪಣಿ

ಶ್ರೀ ಅರವಿಂದರ ಅತಿಮಾನಸದ ರೂಪಾಂತರಣದ ಪೂರ್ಣ ಯೋಗಕ್ಕೆ ಶ್ರೀಮಾತೆಯೇ ಪ್ರಧಾನ ಸೂತ್ರವಾಗಿದ್ದಾರೆ. ಹಾಗಾದರೆ ಈ ಸೂತ್ರವನ್ನು ಅರಸುವದಾದರೂ ಎಲ್ಲಿ? ಈ ಶ್ರೀಮಾತೆಯನ್ನು ದರ್ಶಿಸುವದರ ಸಲುವಾಗಿ ನಾವು ಏನನ್ನು ಮಾಡಬೇಕಿದೆ? ಕೇವಲ ನಮ್ಮ ಭೌತಿಕ ಅಸ್ತಿತ್ವದಲ್ಲಿ ಇರುವ ಈ ಭೂಮಿಯ ವಿಶಾಲವಾದ ಪ್ರದೇಶಗಳಲ್ಲಿ ಸಂಚರಿಸುವದರ ಮೂಲಕ ಅರಸಲಾಗುತ್ತದೆಯೇ? ಅಥವಾ ನಮ್ಮ ಅಂತರಂಗದಲ್ಲಿಯೇ ಪರಿಶೋಧನೆಯ ಮೂಲಕ ಕೈಕೊಳ್ಳುವ ನಮ್ಮ ಆತ್ಮದ ಅಂತರಂಗದಲ್ಲಿರುವ ಅವಕಾಶಗಳ ಮೂಲಕ ಕಂಡುಕೊಳ್ಳುವದೇ? ಅವಳನ್ನು ಸಂಪೂರ್ಣ ವಿಶ್ವಾಸದಿಂದ ಕಂಡುಕೊಳ್ಳುವದೇ ಅಥವಾ ನೇರಾನೇರ ಲಭ್ಯವಾಗುವ ದೃಷ್ಟಿಕೋನದ ಮೂಲಕ ನಮ್ಮನ್ನು ನಾವು ಅವಳೆಡೆಗೆ ತೆರೆದುಕೊಳ್ಳುವ ಮೂಲಕ, ಅವಳ ಮೂಲಕ ಲಭ್ಯವಾಗುವ ರೂಪಾಂತರಣದ ಸ್ಪರ್ಶವನ್ನು ಪಡೆದುಕೊಳ್ಳುವದೇ? ಅದರಲ್ಲೀ ಈ ದಿವ್ಯಮಾತೆಯ ಅವತರಣವು ಭೌತಿಕ ಆಕಾರವನ್ನು ಪಡೆದುಕೊಂಡು ಆಗಮಿಸಿರುವ ವಿಷಯದ ಕುರಿತು ಶ್ರೀ ಅರವಿಂದರು ಅಭಿಪ್ರಾಯ ನೀಡಿದ ನಂತರದಲ್ಲಿ ಈ ರೀತಿಯ ಹಲವಾರು ಪ್ರಶ್ನೆಗಳನ್ನು ಶಿಷ್ಯರು ಶ್ರೀ ಅರವಿಂದರಿಗೆ ಕೇಳಿದ್ದಾರೆ. ಶ್ರೀ ಅರವಿಂದರು ಕೊಟ್ಟಿರುವ ಉತ್ತರಗಳಲ್ಲಿ ಇರುವ ದಿವ್ಯ ಸೌಂದರ್ಯವು ನಿತ್ಯ ನೂತವಾಗಿದೆ. ಶ್ರೀಮಾತೆಯವರ 143 ನೇ ಜನ್ಮ ದಿನಾಚರಣೆಯ ನಿಮಿತ್ತ ಈ ಸಂಚಿಕೆಯನ್ನು, ಶ್ರೀ ಅರವಿಂದರು ಅಭಿವ್ಯಕ್ತಿಸಿರುವ ವಿಷಯಗಳಿಗೆ ಮತ್ತು ಈ ಪ್ರಶ್ನೆಗಳಿಗೆ ಶ್ರೀಮಾತೆಯವರು ನೀಡಿರುವ ಉತ್ತರಗಳಿಗೆ ರೂಪಿಸಲ್ಪಟ್ಟಿದೆ. [ಎಐಎಮ್]

*



## ತಾಯಿಗೆ

ದೇವನನ್ನು ನೆನೆಯಲೆಂದು ನಾನು ಧ್ಯಾನಗೈದ ಕ್ಷಣವೆ
ತಾಯೆ, ನಿನ್ನ ದಿವ್ಯಮೂರ್ತಿ ಮೂಡಿ ಬರುವದು ॥1॥

ನಿನ್ನ ಮೊಗದಿ ಮುಗುಳು ನಗೆಯು ಕಾಮಧೇನು ಕಲ್ಪತರುವು
ನಿನ್ನ ಕಣ್ಣ ನೋಟ ಅಮೃತ ಹೊಳೆಯು ಹರಿವುದು ॥2॥

ನನ್ನ ದೇಹದೊಡನೆ ದೇಹ ನನ್ನ ಜೀವದೊಡನೆ ಜೀವ
ನನ್ನ ಆತ್ಮದೊಡನೆ ಆತ್ಮವಾದ ತಾಯಿಯೇ! ॥3॥


ಒಂದು ಆಗಿ ಕಂದನೊಡನೆ ಅಂದ ಚೆಂದದಿಂದ ಬೆಳೆಸಿ
ಮುಂದೆ ತಂದ ತಾಯೆ, ನೀನೆ ದೇವರಲ್ಲವೇ? ॥4॥

ಕೈಯ ಮುಗಿವೆ ತಾಯೆ ನಿನಗೆ ಹರಸು ಕಂದನ
ನಿನ್ನ ವಿಮಲ ಪ್ರೇಮದಿಂದ ಬಾಳು ಚಂದನ! ॥5॥

**– ದ.ರಾ. ಹಾನಗಲ್ಲ (ಪುದುಚೇರಿ)**

(‘ಕೃಪಾದೃಷ್ಟಿ’ 2006, ಕವನ ಸಂಕಲನ)

(ಧಾರವಾಡ ಮೂಲದ, 77 ವರ್ಷದ ಶ್ರೀ ದತ್ತಾತ್ರೇಯ ರಾಘವೇಂದ್ರ ಹಾನಗಲ್ಲ ಇವರು 1961ರಿಂದಲೂ ಪಾಂಡಿಚೇರಿಯ ಶ್ರೀ ಅರವಿಂದಾಶ್ರಮದಲ್ಲಿ ಸಾಧಕರಾಗಿದ್ದು, ಬೇಕರಿ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕೃಪಾದೃಷ್ಟಿ ಅವರ ಏಕೈಕ ಕವನ ಸಂಕಲನವಾಗಿದೆ. [ಸಂ])



ಯಾವಾಗಲೂ ಪರಮಾತ್ಮ ಮತ್ತು ಜಗನ್ಮಾತೆಯ ನೋಟದ ಆಶ್ರಯದಲ್ಲಿರುವಂತೆ ಜೀವಿಸಿ. ದೈವೀ ಸಾನಿಧ್ಯಕ್ಕೆ ಅನಾರೋಗ್ಯಕರವಾದ ಯಾವುದನ್ನೂ ಮಾಡಬಾರದು, ವಿಚಾರಿಸಬಾರದು ಹಾಗೂ ಭಾವಿಸಬಾರದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/172 – ಶ್ರೀ ಅರವಿಂದರು**

**ಅನುವಾದ: ನಾಗಜ್ಯೋತಿ ಮಾನ್ವಿ**

# ಶಾಶ್ವತ ಸಾನಿಧ್ಯದ ಸಂಜೀವಿನಿ

**– ಅನುವಾದ: ನಾಗಜ್ಯೋತಿ ಮಾನ್ವಿ**

## ಸದಾ ಜೀವಂತದ ಸಾನಿಧ್ಯ

*ನೀವು ಹೇಳಿದ್ದೀರಿ; "ಶ್ರೀಮಾತೆಯು ನಿಮ್ಮನ್ನು ನೋಡುತ್ತಿರುವಂತೆ ಇರಲು ಯಾವಾಗಲೂ ವರ್ತಿಸಿ; ಏಕೆಂದರೆ ಅವಶ್ಯವಾಗಿ ಆಕೆ ಯಾವಾಗಲೂ ಇದ್ದಾಳೆ", ಇದರರ್ಥ ಶ್ರೀಮಾತೆಗೆ ನಮ್ಮ ಎಲ್ಲಾ ಅನುಪಯೋಗಕರ ವಿಚಾರಗಳು ಯಾವಾಗಲೂ ತಿಳಿದಿರುತ್ತವೆಯೋ?*

*ಶ್ರೀಮಾತೆಯು ಯಾವಾಗಲೂ ಇದ್ದಾಳೆ ಮತ್ತು ನಿಮ್ಮನ್ನು ನೋಡುತ್ತಿದ್ದಾಳೆ ಎಂದು ಹೇಳಲಾಗಿದೆ. ಇದರರ್ಥ ಆಕೆಯ ಭೌತಿಕ ಮನದಲ್ಲಿ ಯಾವಾಗಲೂ ನಿಮ್ಮ ಬಗ್ಗೆ ಯೋಚಿಸುತ್ತಿದ್ದಾಳೆ ಮತ್ತು ನಿಮ್ಮ ವಿಚಾರಗಳನ್ನು ನೋಡುತ್ತಿದ್ದಾಳೆ ಎಂದಾಗುವುದಿಲ್ಲ.*

ಆಕೆಯ ಸರ್ವವ್ಯಾಪ್ತಿಯಾಗಿದ್ದಾಳೆ ಮತ್ತು ಆಕೆಯ ವಿಶ್ವಾತ್ಮಕ ಜ್ಞಾನದಿಂದ ಎಲ್ಲಾ ಕಡೆಯೂ ಕ್ರಿಯೆ ಮಾಡುತ್ತಿರುವುದರಿಂದ ಅದರ ಅವಶ್ಯಕತೆಯಿಲ್ಲ.

*ಯಾವ ಅರ್ಥದಲ್ಲಿ ಶ್ರೀಮಾತೆಯು "ಸರ್ವವ್ಯಾಪ್ತಿ"ಯಾಗಿದ್ದಾಳೆ? ವಿಶ್ವಾತ್ಮಕದಲ್ಲಿ ಆಕೆಯು ಅವತರಣಗೊಂಡಿರುವದರಿಂದ ಮತ್ತು ಆ ಶಕ್ತಿಗಳು ಕೆಲಸ ಮಾಡುತ್ತಿರುವುದರಿಂದ ಇದರ ಸಂಪೂರ್ಣ ಜ್ಞಾನವಿದೆಯೇ? ವಿಶ್ವಾತ್ಮಕ ಅಥವಾ "ಸರ್ವವ್ಯಾಪ್ತಿ"ಯು ಭೌತಿಕ ಸ್ತರವನ್ನು ಒಳಗೊಂಡಿರುತ್ತದೆ. ಹೀಗಿದ್ದಾಗ, ಶ್ರೀಮಾತೆಯವರಿಗೆ ಭೌತಿಕ ಸ್ತರದ ಎಲ್ಲಾ ಆಗುಹೋಗುವಿಕೆಗಳು ಮತ್ತು ಘಟನೆಗಳು ತಿಳಿದಿವೆಯೇ?*

ಆ ದಿನ ಲೋಯ್ಡ್ ಜಾರ್ಜ ಯಾವ ಉಪಾಹಾರ ತಿಂದನು ಅಥವಾ ರೂಸವೆಲ್ಟ್ ತನ್ನ ಪತ್ನಿಗೆ ಕೆಲಸಗಾರರ ಬಗ್ಗೆ ಏನು ಹೇಳಿದನು ಎಂಬುದನ್ನು ಒಳಗೊಂಡು ಎಲ್ಲಾ ಗೊತ್ತಿರಬೇಕೆ? ಭೌತಿಕ ಸ್ತರದ ಅಂತಹ ಎಲ್ಲಾ ಆಗುಹೋಗುವಿಕೆಗಳನ್ನು ಮಾನವನ ರೀತಿಯಲ್ಲಿ ಶ್ರೀಮಾತೆಯು ಏಕೆ ತಿಳಿಯಬೇಕು? ಆಕೆಯು ಸಶರೀರವಾಗಿರುವುದರಲ್ಲಿ ಆಕೆಯ ಕೆಲಸವೆಂದರೆ ವಿಶ್ವಾತ್ಮಕ ಶಕ್ತಿಗಳ ಕಾರ್ಯವನ್ನು ತಿಳಿಯುವುದು ಮತ್ತು ಆಕೆಯ ಕೆಲಸಕ್ಕಾಗಿ ಅವುಗಳನ್ನು ಉಪಯೋಗಿಸುವುದು; ಉಳಿದಂತೆ, ಆಕೆ ಏನನ್ನು ತಿಳಿಯಬೇಕಾಗಿದೆಯೋ ಅದನ್ನು ಕೆಲವೊಮ್ಮೆ ಆಕೆಯ

ಅಂತರಂಗದಿಂದ, ಕೆಲವೊಮ್ಮೆ ಆಕೆಯ ಭೌತಿಕ ಮನದಿಂದ ತಿಳಿಯುತ್ತಾಳೆ. ಆಕೆಯ ವಿಶ್ವಾತ್ಮಕ ಅಸ್ತಿತ್ವದಲ್ಲಿ ಎಲ್ಲಾ ಜ್ಞಾನವು ಆಕೆಗೆ ಲಭ್ಯವಿದೆ, ಆದರೆ ಯಾವುದನ್ನು ಮುಂದೆ ತರುವುದರಿಂದ ಕೆಲಸ ಮಾಡಲಾಗುತ್ತದೆಯೋ ಅದನ್ನು ಆಕೆ ಮುಂದೆ ತರುತ್ತಾಳೆ.

**13 ಆಗಸ್ಟ್ 1933**

ಶ್ರೀಮಾತೆಯು ಯಾವಾಗಲೂ ನಿನ್ನ ಜೊತೆಗಿದ್ದಾಳೆ. ಪ್ರಾಣವು ಆಸೆಗಳನ್ನು ಹೊಂದಿರುವುದರಿಂದ, ಶ್ರೀಮಾತೆಯ ಸಾನಿಧ್ಯದಲ್ಲಿ ನಂಬಿಕೆ ಇರುವುದಿಲ್ಲ. ಪ್ರಾಣದ ಅನುಮಾನ ಮತ್ತು ಆಸೆಗಳನ್ನು ತೆಗೆದು ಹಾಕಲು ನೀವು ಶ್ರೀಮಾತೆಯ 'ಶಕ್ತಿ'ಯನ್ನು ಕೆಳಗೆ ಪ್ರಾಣದಲ್ಲಿರಿಸಬೇಕಾಗುತ್ತದೆ.

*

ಶ್ರೀಮಾತೆಯು ಯಾವಾಗಲೂ ನಿನ್ನ ಜೊತೆಗಿದ್ದಾಳೆ. ಆಕೆಯಲ್ಲಿನ ಶ್ರದ್ಧೆಯಿಡು, ಅಂತರಂಗದಲ್ಲಿ ನಿಶ್ಚಲವಾಗಿರು ಮತ್ತು ಆ ನಿಶ್ಚಲತೆಯಿಂದ ಏನು ಮಾಡಬೇಕಾಗಿದೆಯೋ ಅದನ್ನು ಮಾಡು. ಆಕೆಯ ಸತತ ಸಾನಿಧ್ಯದ ಬಗ್ಗೆ ನೀನು ಹೆಚ್ಚು ಹೆಚ್ಚು ಜಾಗೃತನಾಗುತ್ತೀಯ, ನಿಮ್ಮ ಹಿಂದಿರುವ ಆಕೆಯ ಕ್ರಿಯೆಯನ್ನು ಭಾವಿಸುತ್ತೀಯ ಮತ್ತು ನಿಮ್ಮ ಕೆಲಸದ ಭಾರವು ನಿಮಗೆ ಭಾರವೆನಿಸುವುದಿಲ್ಲ.

*

*ನೀವು ಬರೆದಿದ್ದೀರಿ: "ಶ್ರೀಮಾತೆಯು ನಿಮ್ಮನ್ನು ನೋಡುತ್ತಿರುವಂತೆ ಯಾವಾಗಲೂ ವರ್ತಿಸಿ; ಏಕೆಂದರೆ ಅವಶ್ಯವಾಗಿ ಆಕೆ ಯಾವಾಗಲೂ ಇದ್ದಾಳೆ,"* ಇನ್ನೊಂದು *ಕಡೆ ಇತ್ತೀಚ್ಚಿಗೆ ನೀವು ನನಗೆ ಬರೆದಿದ್ದೀರಿ ಏನೆಂದರೆ – ಎಲ್ಲಾ ಕಡೆಗೂ ದೈಹಿಕವಾಗಿ ಇರಲು ಆಕೆಗೆ ಸಾಧ್ಯವಿಲ್ಲ ಎಂದು. ಇದರ ಬಗ್ಗೆ ನಾನು ಶ್ರೀಮಾತೆಯವರಿಗೆ ಕೇಳಿದಾಗ, ಅವರು ಹೇಳಿದರು ತಾವು ಬಹಳಷ್ಟು ಸ್ಥಳಗಳಲ್ಲಿ ಇರಬಲ್ಲೆ ಎಂದು, ತದ್ವಿವಿರುದ್ಧವಾದ ಈ ಎರಡು ವಾಕ್ಯಗಳನ್ನು ಹೇಗೆ ಸಮನ್ವಯಗೊಳಿಸುವಿರಿ.*

ಭೌತಿಕವಾಗಿ ಅಂದರೆ ದೈಹಿಕವಾಗಿ ಎಂದೇ ಹೇಳುತ್ತಿದ್ದೀಯಾ? ಕಾಣುತ್ತಿರುವ ಅವರ ಸ್ಪಷ್ಟವಾದ ಭೌತಿಕ ದೇಹದಿಂದ ಖಂಡಿತವಾಗಿಯೂ ಅದನ್ನು ಮಾಡಲಾಗುವುದಿಲ್ಲ. ನೀನು ಶ್ರೀಮಾತೆಗೆ ಪ್ರಶ್ನೆ ಕೇಳಿದಾಗ ನಿನ್ನ ಈ ತರಹದ

ಅರ್ಥ ಅವರಿಗೆ ತಿಳಿಯದಿರಬಹುದು – ಆದರೂ ಅವರು ಹೇಳಿದ್ದೇನೆಂದರೆ, ತಾವು ಎಲ್ಲಾ ಕಡೆಗೂ ಇದ್ದೇನೆ ಎಂದೇ ಆಗಿದೆ. ಜೊತೆಗೆ ಅದರರ್ಥ, ಖಂಡಿತವಾಗಿ, ಆಕೆಯ ಪ್ರಜ್ಞೆಯಲ್ಲಿ ವಿನಾ ಆಕೆಯ ದೇಹವಲ್ಲ; ಪ್ರಜ್ಞೆಯ ಕಾರ್ಯಕ್ಕೆ ದೇಹವು ಆಕೆಗೆ ಪ್ರಜ್ಞೆಯ ಆಸರೆ ಮತ್ತು ಉಪಕರಣವಾಗಿರುತ್ತದೆ. ಶ್ರೀಮಾತೆಯು ವೈಯಕ್ತಿಕವಾಗಿ ತಮ್ಮ ಪ್ರಜ್ಞೆಯಲ್ಲಿರುತ್ತಾರೆ. ವಿಶ್ವಾತ್ಮಕ ಸಾನಿಧ್ಯವು ಅದು ಯಾವಾಗಲೂ ಇರುತ್ತದೆ ಮತ್ತು ವಿಶ್ವಾತ್ಮಕ ಹಾಗೂ ವೈಯಕ್ತಿಕ ಇವು ಒಂದೇ ಅಸ್ತಿತ್ವದ ಎರಡು ರೂಪಗಳಾಗಿವೆ.

**25 ಆಗಸ್ಟ್ 1936**

## ಶ್ರೀಮಾತೆಯ ಸತತ ಸಾನಿಧ್ಯ

ಶ್ರೀಮಾತೆಯ ಸತತ ಸಾನಿಧ್ಯವು ಅಭ್ಯಾಸದಿಂದ ಬರುತ್ತದೆ. ಸಾಧನದಲ್ಲಿ ಯಶಸ್ವಿಗಾಗಿ ದೈವೀ ಕೃಪೆಯು ಅತ್ಯವಶ್ಯಕವಾಗಿದೆ. ಆದರೆ 'ಕೃಪೆಯ', ಅವತರಣಿಕೆಯನ್ನು ಅಭ್ಯಾಸವು ಸಿದ್ಧಪಡಿಸುತ್ತದೆ. ನೀವು ಅಂತರಂಗದೊಳಗೆ ಲೀನಗೊಳ್ಳುವದನ್ನು ಕಲಿಯಬೇಕು, ಬಾಹ್ಯ ವಸ್ತುಗಳೊಂದಿಗೆ ಜೀವಿಸುವುದನ್ನು ಬಿಟ್ಟು, ಮನವನ್ನು ನಿಶ್ಚಲಗೊಳಿಸಿ ಮತ್ತು ಶ್ರೀಮಾತೆಯ ಕಾರ್ಯಗಳು ನಿಮ್ಮೊಳಗೆ ನಡೆಯುತ್ತಿರುವುದರ ಬಗ್ಗೆ ಜಾಗೃತರಾಗಲು ಅಭೀಪ್ಸಿಸಿ.

*

## ಶ್ರೀಮಾತೆಯ ಸಾನಿಧ್ಯವನ್ನು ಅನುಭವಿಸುವುದು

ಒಬ್ಬರು ಮೊದಲಿಗೆ 'ಸಾನಿಧ್ಯ'ವನ್ನು ಅನುಭವಿಸಬೇಕು ಮತ್ತು ನಂತರ ಮಾತ್ರ ಒಬ್ಬರು ಶ್ರೀಮಾತೆಯ ಸಾನಿಧ್ಯವನ್ನು ತಮ್ಮಷ್ಟಕ್ಕೆ ತಾವೇ ಭಾವಿಸುತ್ತಾರೆ ಎಂಬಂತಹ ಯಾವುದೇ ಅವಶ್ಯಕ ಪ್ರಾಧಾನ್ಯತೆಯಿಲ್ಲ; ಬಹಳಷ್ಟು ಸಾರಿ ತೀವ್ರ ಭಾವನೆಯು 'ಸಾನಿಧ್ಯ'ವನ್ನು ತರುತ್ತದೆ, ಭಾವನೆಗಳು ಚೈತ್ಯ ಪುರುಷನಿಂದ ಬರುತ್ತವೆ ಮತ್ತು ಅಂತಸ್ಥ ಪ್ರಜ್ಞೆಯಿಂದಲೂ ಬರುವುದೂ ಸತ್ಯವಾಗಿದೆ. ಅಸಿತ್ವದಲ್ಲಿ ಇಡೀಯಾಗಿ 'ಸಾನಿಧ್ಯ'ವು ತುಂಬಿಕೊಂಡಿರದ ಸ್ಥಿತಿಯಲ್ಲಿಯೂ ಬರುವ ಈ ಭಾವನೆಗಳು ಕಲ್ಪನೆಗಳಲ್ಲ; ಹಾಗಿರದೆ, ಅದು ಹೆಚ್ಚು ಬೆಳೆದು ಇಡೀ ಅಸ್ತಿತ್ವವು ಈ ಸತ್ಯದಿಂದ ತುಂಬಿಕೊಳ್ಳುತ್ತದೆ. ಅಂತರಂಗದ ಭಾವವು ಬಾಹ್ಯ ಪ್ರಜ್ಞೆಯನ್ನು ಹೆಚ್ಚು ಹೆಚ್ಚು

ಸ್ವಾಧೀನಪಡಿಸಿಕೊಳ್ಳುತ್ತದೆ. ಮತ್ತು ಅಲ್ಲಿಯೂ ಈ ಸತ್ಯವನ್ನು ಮರುರೂಪಿಸುತ್ತದೆ. ಇದು ಯೋಗಿಕ ರೂಪಾಂತರಗೊಳಿಸುವಿಕೆಯಲ್ಲಿರುವ ಕಾರ್ಯದ ಸ್ಥಿರ–ತತ್ವವಾಗಿ ಅಂತರಂಗದಲ್ಲಿರುವ ಸತ್ಯವು ಹೊರಬರುತ್ತದೆ ಮತ್ತು ಮನ ಮತ್ತು ಹೃದಯ ಮತ್ತು ಸಂಕಲ್ಪವನ್ನು ಸ್ವಾಧೀನಪಡಿಸಿಕೊಳ್ಳುತ್ತದೆ ಮತ್ತು ಅವುಗಳ ಮೂಲಕ ಬಾಹ್ಯ ಸದಸ್ಯರ ಅಜ್ಞಾನದ ಮೇಲೆ ಗೆಲವು ಸಾಧಿಸುತ್ತದೆ. ಮತ್ತು ಅಂತರಂಗದ ಸತ್ಯವನ್ನು ಅಲ್ಲಿಯೂ ತರುತ್ತದೆ.

*

**ಶ್ರೀಮಾತೆಯ ಸಾನಿಧ್ಯಕ್ಕೆ ತೆರೆದಿಟ್ಟುಕೊಳ್ಳುವುದು**

ನಿಮ್ಮನ್ನು ನೀವು ನಿಶ್ಚಲಗೊಳಿಸಿ ಮತ್ತು ತೆರಿದಿಟ್ಟುಕೊಳ್ಳಿ ಸಂಪೂರ್ಣ ಆತ್ಮವಿಶ್ವಾಸದಿಂದಿರಿ ಮತ್ತು ಶ್ರೀಮಾತೆಯ ಸಾನಿಧ್ಯ ನಿಮ್ಮೊಂದಿಗಿರುವುದನ್ನು ನೀವು ಅನುಭವಿಸುವಿರಿ.

**9 ಅಕ್ಟೋಬರ್ 1933**

ಸತತ ಸ್ಮರಣೆಮಾಡುವುದರಿಂದ ಅಸ್ತಿತ್ವವು ಸಂಪೂರ್ಣ ತೆರಿದಿಟ್ಟುಕೊಳ್ಳುವಿಕೆಗೆ ಸಿದ್ಧವಾಗುತ್ತದೆ. ಹೃದಯವು ತೆರೆಯುವುದರಿಂದ ಶ್ರೀಮಾತೆಯ ಸಾನಿಧ್ಯ ಭಾಸವಾಗಲಾರಂಭಿಸುತ್ತದೆ ಮತ್ತು ಆಕೆಯ ಮೇಲಿನ 'ಶಕ್ತಿಗೆ' ತೆರೆದಿಟ್ಟುಕೊಳ್ಳುವುದರಿಂದ ಉನ್ನತ ಪ್ರಜ್ಞೆಯ ಒಲವು ಕೆಳಗಿಳಿದು ದೇಹದೊಳಗೆ ಬರುತ್ತದೆ ಮತ್ತು ಇಡೀ ಪ್ರಕೃತಿಯನ್ನೇ ಬದಲಾಯಿಸಲು ಕೆಲಸ ಮಾಡುತ್ತದೆ.

**7 ಆಗಸ್ಟ್ 1934**

*ಶ್ರೀಮಾತೆಯವರು ಹೇಳುತ್ತಾರೆ, "ನನ್ನೆಡೆಗೆ ಯಾವಾಗಲೂ ನಿಮ್ಮನ್ನು ನೀವು ತೆರೆದಿಟ್ಟುಕೊಳ್ಳಿ, ಮತ್ತು ನಾನು ಯಾವಾಗಲೂ ನಿನ್ನೊಂದಿಗೆ ಮತ್ತು ನಿನ್ನ ಸುತ್ತಲೂ ಇದ್ದೇನೆ". ಹೇಗೆ ಭಾವಿಸಲಿ? ಹಾಗೆಯೇ, ಪ್ರಜ್ಞೆಯ ಅರ್ಥವೇನು ಮತ್ತು ಒಬ್ಬರು ಹೇಗೆ ಪ್ರಜ್ಞಾಪೂರ್ವಕರಾಗಬೇಕು?*

ಜಗನ್ಮಾತೆಯ ಸರ್ವವ್ಯಾಪ್ತಿಯಾಗಿದ್ದಾಳೆ ಮತ್ತು ಎಲ್ಲಾ ಸಮಯದಲ್ಲಿಯೂ ಆಕೆ ನಿನ್ನ ಜೊತೆಗಿದ್ದಾಳೆ. ಒಬ್ಬರು ತಮ್ಮನ್ನು ತಾವು ತೆರೆದಿಟ್ಟುಕೊಂಡರೆ ಮತ್ತು

ಪ್ರಜ್ಞಾಪೂರ್ವಕವಾಗಿದ್ದರೆ ಆಕೆಯ ಸಾನಿಧ್ಯದ ಅನುಭವವನ್ನು ಪಡೆಯಬಹುದು. ಪ್ರಕೃತಿಯು ಅಜ್ಞಾನಿಯಾಗಿರುವುದರಿಂದ, ಉನ್ನತನ ಮತ್ತು ತನ್ನ ಆಸೆಗಳನ್ನು ತುಂಬಿಕೊಂಡಿರುವುದರಿಂದ ಸಾನಿಧ್ಯವನ್ನು ಅನುಭವಿಸಲಾಗುವುದಿಲ್ಲ. ಒಬ್ಬರು ತನ್ನತನ ಮತ್ತು ಆಸೆಗಳಿಂದ ತಿರುಗಿದರೆ ಮತ್ತು ಅಂತರಂಗ ಮತ್ತು ಬಹಿರಂಗದಲ್ಲಿ ಪರಮಾತ್ಮನಿಗಾಗಿ ಬದುಕಿದರೆ ಆಗ ಅವರು ದೈವೀ 'ಸಾನಿಧ್ಯ'ವನ್ನು ಅನುಭವಿಸಲಾರಂಭಿಸುವರು.

**ನಿರಾಕಾರ ಮತ್ತು ಸಾಕಾರ**

ಕೇವಲ ಶ್ರೀಮಾತೆಯ ಸಾಕಾರದ ಸಾನಿಧ್ಯ ಮಾತ್ರವಲ್ಲದೆ, ನಿರಾಕಾರ ಸಾನಿಧ್ಯದ ಸಾಕ್ಷಾತ್ಕಾರವು ಅತ್ಯವಶ್ಯಕವಾಗಿದೆ.

*

*ಶ್ರೀಮಾತೆಯ ಸಾನಿಧ್ಯ ಮತ್ತು ದೈವೀ ಪ್ರಜ್ಞೆಯ ಮಧ್ಯೆ ಏನಾದರೂ ವ್ಯತ್ಯಾಸವಿದೆಯೇ?*

ಹೊಸ ಪ್ರಜ್ಞೆಯಾಗಿ ಮಾತ್ರ ದೈವೀ ಪ್ರಜ್ಞೆಯನ್ನು ಅನುಭವಿಸಬಹುದು. ಶ್ರೀಮಾತೆಯ 'ಸಾನಿಧ್ಯ' ಇನ್ನೂ ಹೆಚ್ಚಾಗಿ – ಆಕೆಯು ನಿಮ್ಮೊಳಗೆ ಅಥವಾ ಮೇಲೆ ಅಥವಾ ಆವರಿಸಿರುವ ಅಥವಾ ಇವೆಲ್ಲವುಗಳನ್ನೊಳಗೊಂಡಂತೆ ಅನುಭವವಾಗುತ್ತದೆ.

*

ನೀವು ಏನು ಬರೆಯುತ್ತೀರೋ ಅಥವಾ ಇಲ್ಲವೋ ಎಂಬುದರ ಮೇಲೆ ಶ್ರೀಮಾತೆಯ ಸಾನಿಧ್ಯದ ಅಥವಾ ಸಾಮೀಪ್ಯದ ಅನುಭವವು ಅವಲಂಬಿಸಿರುವುದಿಲ್ಲ. ಬಹಳಷ್ಟು ಜನರು ಬರೆಯುತ್ತಾರೆ ಆದರೂ ಅದನ್ನು ಅನುಭವಿಸುವುದಿಲ್ಲ, ಕೆಲವರು ವಿರಳವಾಗಿ ಬರೆದರೂ ಆಕೆಗೆ ಯಾವಾಗಲೂ ಹತ್ತಿರವಾಗಿರುತ್ತಾರೆ.

*

*ನೀವು ಬರೆದಿದ್ದೀರಿ; "ಒಬ್ಬರು ಕೇವಲ ಹೊಸ ಪ್ರಜ್ಞೆಯಾಗಿ ಮಾತ್ರ ದೈವೀ ಪ್ರಜ್ಞೆಯನ್ನು ನಿರ್ವೈಯಕ್ತಿಕವಾಗಿ ಅನುಭವಿಸುತ್ತಾರೆ" ಆದರೆ ಶ್ರೀಮಾತೆ ಸಾನಿಧ್ಯ ಇನ್ನೂ ಹೆಚ್ಚಾಗಿದೆ. ಹೃದಯದಲ್ಲಿರುವ ದೈವೀ ಸನ್ನಿದಾನವು ಪ್ರಜ್ಞೆಗಿಂತಲೂ ಹೆಚ್ಚೆಂದು ಇನ್ನೊಂದು ಪತ್ರದಲ್ಲಿ ಬರೆದಿದ್ದೀರಿ. ಯಾವ ರೀತಿಯಲ್ಲಿ ಸಾನಿಧ್ಯವು ಪ್ರಜ್ಞೆಗಿಂತ ಹೆಚ್ಚಾಗಿದೆ?*

ಅದರ ಅರ್ಥವೇನೆಂದರೆ ದೈವೀ ಸಾನಿಧ್ಯವನ್ನು ಅನುಭವಿಸದೇ ದೈವೀ ಪ್ರಜ್ಞೆಯನ್ನು ಒಂದು ವೈಕ್ತಿಕವಲ್ಲದ ಆಧ್ಯಾತ್ಮಿಕ ಸ್ಥಿತಿಯಾಗಿರಬಹುದು, ಶಾಂತಿಯ, ಬೆಳಕಿನ, ಆನಂದದ, ವಿಶಾಲತೆಯ ಸ್ಥಿತಿಯಾಗಿರಬಹುದು, ದೈವೀ ಸಾನಿಧ್ಯವು ಆ ಬೆಳಕಿನ ಸಾರ ಮತ್ತು ಜೀವಂತ ಮೂಲವೆಂದೆನಿಸುವುದು, ಹಾಗಾಗಿ ಅದು ಒಂದು "ಅಸಿತ್ವ", ಶ್ರೀಮಾತೆಯ ಸಾನಿಧ್ಯವು ಇನ್ನೂ ಹೆಚ್ಚು ನಿಶ್ಚಿತ, ನಿರ್ದಿಷ್ಟವಾಗಿ, ವೈಯಕ್ತಿಕವಾಗಿ ಇದು ಯಾರೊಬ್ಬರಿಗೂ ಗೊತ್ತಿರದ, ಒಂದು ಶಕ್ತಿಯ ಅಥವಾ "ಅಸ್ತಿತ್ವದ್ದಾಗಿರದೆ", ಒಬ್ಬರಿಗೆ ತಿಳಿದಿರುವ, ಆತ್ಮೀಯ ಪ್ರೀತಿಯ, ನಾವು ಯಾರಿಗೆ ಜೀವಂತ ನಿಶ್ಚಿತ ರೀತಿಯಲ್ಲಿ ಎಲ್ಲಾ ಅಸ್ತಿತ್ವವನ್ನು ಅರ್ಪಿಸಿಕೊಳ್ಳತ್ತವೆಯೋ ಅವರದ್ದಾಗಿರುತ್ತದೆ. ರೂಪ ಸಹಾಯಕವಾಗಿದೆಯಾದರೂ ಅತ್ಯವಶ್ಯತವೇನಲ್ಲ. ಅದಿಲ್ಲದೆಯೂ ಸಾನಿಧ್ಯವನ್ನು ಅಂತರಂಗದಲ್ಲಿ ಅನುಭವಿಸಬಹುದು.

*

**ಶ್ರೀಮಾತೆಯವರಿಗೆ ಪ್ರಣಾಮ ಮಾಡುವುದು**

*ಪ್ರಣಾಮ ಮಾಡಲು ಬರದೇ ಇರುವುದು ವಿರೋಧಿ ಶಕ್ತಿಯ ಪ್ರಭಾವವೇ?*

ಬಹುಶಃ ಅದು ಯಾವಾಗಲೂ ವಿರೋಧಿ ಭಾವದ ಸೂಚನೆಯೇ.

*ಪ್ರಣಾಮ ಮಾಡಲು ಬರದೇ ಇರುವುದನ್ನು ಅನೇಕರು ಹಾಗೆ ಮಾಡುತ್ತಾರೆ ಇದನ್ನು ಹೇಗೆ ಒಪ್ಪುವುದು?*

ಅದರಲ್ಲಿ ಅನೇಕ ಉದ್ದೇಶಗಳು ಕೂಡಿಕೊಂಡಿರುತ್ತವೆ. ಗರ್ವ, ಇತರರಂತೆ ಆಗಬಾರದೆಂಬ ಬಯಕೆ, ಶ್ರೀಮಾತೆಯ ಮೇಲೆ ಅವಲಂಬಿಸಬಾರದೆಂಬ ಭಾವ, ಶ್ರೀಮಾತೆಯವರ ಹಿಡಿತಕ್ಕೆ ಸಿಲುಕಿದಂತೆ ತಪ್ಪು ಕ್ರಿಯೆಯನ್ನು ಕಾಪಾಡಿಕೊಳ್ಳುವುದು, ತನ್ನದೇ ಆದ ದಾರಿಯಲ್ಲಿ , ಸತ್ಯದ ಒತ್ತಡ ಕೂಡ ಇಲ್ಲದಂತೆ ಮುಕ್ತವಾಗಿ ಸಾಧನೆ ಮಾಡಬೇಕೆಂಬ ಆಲೋಚನೆ.

*

*ಪ್ರಾಣಕ್ಕೆ ಬಾರದಿರುವಂತೆ ನನಗೆ ಮನಸ್ಸಾಯಿತು, ಒಂದು ರೀತಿಯ ಶುಷ್ಕ, ಅನಾಸಕ್ತ ಭಾವ, ಯಾವುದರಲ್ಲೂ ರುಚಿ ಇಲ್ಲದಿರುವುದು, ಶ್ರೀಮಾತೆಯವರ ಮೇಲೆ ಪ್ರೀತಿ ಇಲ್ಲದಾಗಿ ಬಿಡುವುದು ಇಂಥವೆಲ್ಲ ಆದವು. ಪ್ರಣಾಮ ಸಲ್ಲಿಸಲು*

*ಹೋಗುವುದರಿಂದೇನಾಗುವುದು? ಈ ರೀತಿ ಶುಷ್ಕವಾಗಿ, ಅಥವಾ ಶಾಂತಿ ಸಮಾಧಾನ ಕಾಯ್ದುಕೊಳ್ಳುವ ಸಲುವಾಗಿ, ಅಥವಾ ಇಂಥ ಸ್ವಾರ್ಥ ಉದ್ದೇಶದಿಂದಲೇ?*

ಅಂಥ ವಿರೋಧೀ ಭಾವವನ್ನು ಪೂರ್ಣತಃ ತೆಗೆದುಬಿಡಬೇಕು. ಅದು ಹೆಚ್ಚಾಗಿ ಭೌತಿಕ ಪ್ರಜ್ಞೆಯ ಮೇಲೆ ಈ ರೀತಿ ಶುಷ್ಕತನದಿಂದ, ಖಿನ್ನತೆಯಿಂದ ಹಿಡಿತ ಸಾಧಿಸಲು ಪ್ರಯತ್ನ ಮಾಡುತ್ತದೆ.

*

**ನಿದ್ರೆಯಲ್ಲಿ ಕೂಡ ಶ್ರೀಮಾತೆಯವರ ಸಾನ್ನಿಧ್ಯದ ಅನುಭವ**

ತನ್ನ ಕವನದಲ್ಲಿ ಹೇಳುತ್ತಾರಲ್ಲ. ಅದು ಸಾಧ್ಯವೇ? ಅವರು ಹೇಳುವಂತೆ, ನಿದ್ರೆಯ ಆಳಾತಿ ಆಳದಲ್ಲೂ ನಾನು ನಿನ್ನ ದಿವ್ಯ ಮಧುರ ಸಾನ್ನಿಧ್ಯಕ್ಕೆ ಸದಾ ಎಚ್ಚರಾಗಿರುತ್ತೇನೆ.

ಸಹಸಾ ಇದು ಸಾಧ್ಯವಾಗುವುದಿಲ್ಲ. ಆದರೆ ಅಂತರಾತ್ಮ ಸಂಪೂರ್ಣ ಕ್ರಿಯಾಶೀಲರಾಗಿದ್ದರೆ ಸಾಧ್ಯವಾಗುತ್ತದೆ.

*

ಅದು ನಿದ್ರೆಯಲ್ಲೂ ಶ್ರೀಮಾತೆಯ ಸಾನ್ನಿಧ್ಯವನ್ನುನುಭವಿಸುವುದು, ಎಚ್ಚರಿರುವಾಗ ಸಾನ್ನಿಧ್ಯವನ್ನನುಭವಿಸುವುದನ್ನೇ ಅನುಸರಿಸಿ ಬರುತ್ತದೆ. ಆದರೆ ಅದಕ್ಕೆ ತುಸು ಸಮಯ ಬೇಕಾಗುತ್ತದೆ.

***ಶ್ರೀಮಾತೆಯ ಸಾನ್ನಿಧ್ಯವನ್ನೂ, ತಾವು ಕೆಲಸ ಮಾಡುತ್ತಿರುವಾಗಲೂ ಅನುಭವಿಸುವುದು ಬಹಳ ಜನರಿಗೆ ಸುಲಭವಾಗಿರುವುದಿಲ್ಲ – ತಾನೇ ಕೆಲಸ ಮಾಡುತ್ತಿರುವುದಾಗಿ ಅವರಿಗೆ ಅನಿಸುತ್ತದೆ, ಮನಸ್ಸು ಅದರಲ್ಲಿ ಮಗ್ನವಾಗಿ ಬಿಡುತ್ತದೆ, ಸರಿಯಾದ ಅಥವಾ ಬೇಕಾಗಿರುವ ತಟಸ್ಥ ಭಾವ ಅಥವಾ ಶಾಂತಭಾವ ಇರುವುದಿಲ್ಲ.***

**– ಶ್ರೀಮಾತೆ**



*ಶ್ರೀಮಾತೆಯ ಚಿತ್ರಪಟದ ಎದುರಲ್ಲಿ ಅಥವಾ ಆಕೆಯ ಪಾದಗಳ ಚಿತ್ರದ ಎದುರಲ್ಲಿ ಕುಳಿತು ಧ್ಯಾನ ಮಾಡುವಾಗ ನನಗೆ ಹೆಚ್ಚಿನ ಶಕ್ತಿಯ ಅನುಭವವಾಗುತ್ತದೆ; ತುಸು ದೂರದಲ್ಲಿ ಕುಳಿತು, – ಅಂದರೆ ಆರಾಮ ಕುರ್ಚಿಯ ಮೇಲೆ ಕುಳಿತು ಧ್ಯಾನ ಮಾಡುವಾಗ ಅಷ್ಟು ಪ್ರಮಾಣದಲ್ಲಿ ಅನಿಸುವುದಿಲ್ಲ. ಇದು ತಪ್ಪದೇ ಅವಶ್ಯವಾಗಿ ಆಗೇ ಆಗುತ್ತದೆ, ನನಗನಿಸುವಂತೆ, ಇದು ಕೇವಲ ವ್ಯಕ್ತಿಗತ ಅನುಭವ ಅಲ್ಲ. ಆದರೆ ನಿಜವಾದ ಸತ್ಯ ಏನೆಂಬುದನ್ನು ನಿಮ್ಮಿಂದಲೇ ತಿಳಿಯಬೇಕೆಂದು ನಾನು ಬಯಸುತ್ತೇನೆ.*

ಅದು ಕೇವಲ ವ್ಯಕ್ತಿಗತ ಅನುಭವ ಅಲ್ಲ. ಅವುಗಳ ಸಮೀಪ ಕುಳಿತು ಧ್ಯಾನ ಮಾಡುವಾಗ ನೀನು ಅವುಗಳ ಮೂಲಕ ಶ್ರೀಮಾತೆಯ ಜೊತೆ ಸಂಪರ್ಕ ಸಾಧಿಸುವಿ. ಆಕೆಯ ಸಾನ್ನಿಧ್ಯ ಮತ್ತು ಶಕ್ತಿ ಎಲ್ಲ ಹೆಚ್ಚು ಕಡಿಮೆ ಇದ್ದೇ ಇರುತ್ತದೆ.

ಚಿತ್ರದ ಬಗೆಗಿನ ನಿನ್ನ ಅನುಭವ ನಿಜವಾಗಿ ತುಂಬ ಸುಂದರವಾಗಿದೆ ಮತ್ತು ನಿಜವೂ ಆಗಿದೆ. ಯಾರೇ ಆಗಲಿ ಶ್ರೀಮಾತೆಯ ಚಿತ್ರವನ್ನು ಭಕ್ತಿಯಿಂದ ಗೌರವದಿಂದ ನೋಡಿದ್ದೇನೆ ಆದರೆ ಆಕೆಯ ಸಾನ್ನಿಧ್ಯವನ್ನು ಅವಶ್ಯವಾಗಿ ಅನುಭವಿಸಲು ಸಾಧ್ಯವಿದೆ. ಆಕೆಯ ನಿಜವಾದ ಸಾನ್ನಿಧ್ಯ ಅಲ್ಲಿ ಇದ್ದೇ ಇರುತ್ತದೆ. ನಿನಗೆ ಆಕೆಯ ಸೂಕ್ಷ್ಮ ಭೌತಿಕದ ಅನುಭವವಾದದ್ದು ನಿಜವಾಗಿಯೂ ವಾಸ್ತವ. ಇದರಿಂದ ನಿನ್ನ ಭೌತಿಕ ಮನವು ನಿಜವಾದ ಪ್ರಜ್ಞೆಗೆ ತೆರೆದುಕೊಳ್ಳುತ್ತಿದೆ ಎನ್ನುವುದು ಗೊತ್ತಾಗುವುದು. ಇದು ಖಂಡಿತವಾಗಿಯೂ ಬೆಳೆಯುವುದು, ಹಳೆಯ ಸಂಸ್ಕಾರಗಳಲ್ಲಿ ತಾವಾಗಿ ಇಲ್ಲದಾಗುವುದು.

*

ಮನೆಯಲ್ಲೇ ಕುಳಿತು, ನಿಮ್ಮ ಕೆಲಸಗಳ ಮಧ್ಯೆ ಕೂಡ ನೀವು ಸಾಧನೆ ಮಾಡಬಹುದು – ಅನೇಕರು ಹಾಗೆ ಮಾಡುತ್ತಾರೆ. ಆರಂಭದ ಅವಶ್ಯಕತೆ ಏನೆಂದರೆ ಶ್ರೀಮಾತೆಯವರನ್ನು ಸಾಧ್ಯವಾದಷ್ಟು ಹೆಚ್ಚಿಗೆ ಸ್ಮರಿಸುತ್ತಿರಬೇಕು. ಹೃದಯದಲ್ಲಿ ಆಕೆಯ ಮೇಲೆ ದಿನಾಲು ತುಸು ಹೊತ್ತು ಏಕಾಗ್ರತೆ ಸಾಧಿಸಬೇಕು, ಪರಾಮಾತೆ ಎಂದು ಭಾವಿಸಲು ಕಲಿಯಬೇಕು, ನಿಮ್ಮೊಳಗೆ ಆಕೆಯ ಸಾನ್ನಿಧ್ಯವನ್ನು ಅನುಭವಿಸಲೆತ್ನಿಸಬೇಕು. ನಿಮ್ಮೆಲ್ಲ ಕೆಲಸ ಕಾರ್ಯಗಳನ್ನು ಆಕೆಗೆ ಸಮರ್ಪಿಸಿ ಆಕೆಯ ಆಂತರಿಕ ಮಾರ್ಗದರ್ಶನಕ್ಕಾಗಿ ಪ್ರಾರ್ಥಿಸಬೇಕು. ಇದು ಪ್ರಾಥಮಿಕ ಹಂತವೇ, ಆದರೆ ಇದು ಕೆಲಸಲ ದೀರ್ಘಕಾಲ ಬೇಕಾಗುವುದು; ನಿರಂತರವಾಗಿ ಶ್ರದ್ಧೆಯಿಂದ ಇದನ್ನು ಸಾಧಿಸಿದರೆ, ಮನೋಸತ್ವ ಹಂತಹಂತವಾಗಿ ಬದಲಾಗುತ್ತ ಬರುವುದು. ಸಾಧಕನಲ್ಲಿ ಹೊಸ ಪ್ರಜ್ಞೆ ಆವಿಷ್ಕಾರವಾಗುವುದು. ಆದರಿಂದ ಶ್ರೀಮಾತೆಯ ಸಾನ್ನಿಧ್ಯದ ಅರಿವು, ಆಕೆಯೇ ಪ್ರಕೃತಿಯಲ್ಲಿ ಎಲ್ಲ ಕೆಲಸ ಮಾಡುತ್ತಿರುವುದರ ಅರಿವು, ಶ್ರೀಮಾತೆಯ ಸಾನ್ನಿಧ್ಯ ಅಂತರಂಗದಲ್ಲಿರುವದರ ಅರಿವು, ಎಲ್ಲೆಡೆ ಆಕೆಯೇ ಕೆಲಸ ಮಾಡುವುಳೆಂಬ, ಬದುಕಿನಲ್ಲಿ ಆಧ್ಯಾತ್ಮಿಕ ಅನುಭವದ ಗುರಿ ಸ್ವಚ್ಛವಾಗಿ ಆತ್ಮಸಾಕ್ಷಾತ್ಕಾರದೆಡೆಗೆ ಸಾಗುವುದು.

*

# ಚೈತ್ಯದ ದ್ವಾರ (ನಿಸರ್ಗಾತೀತ ದ್ವಾರ)

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

## ಚೈತ್ಯ ಮತ್ತು ಶ್ರೀಮಾತೆಯವರ ಸಾನಿಧ್ಯ

ಶ್ರೀಮಾತೆಯವರ ಸಾನಿಧ್ಯ ಯಾವಾಗಲೂ ಅಲ್ಲಿರುತ್ತದೆ; ಆದರೆ ನಿಮ್ಮ ಸ್ವಂತದ ಮೇಲೆ ಕೆಲಸ ಮಾಡಲು ನಿಶ್ಚಯಿಸಿದರೆ – ನಿಮ್ಮ ಸ್ವಂತ ಅಭಿಪ್ರಾಯದ (ಆಶಯ), ವಿಷಯಗಳ ನಿಮ್ಮ ಸ್ವಂತ ಆಭಿಮತದ, ನಿಮ್ಮ ಸ್ವಂತ ಇಚ್ಛೆ ಮತ್ತು ವಿಷಯಗಳ ಬೇಡಿಕೆಯ ಮೇಲೆ ಕೆಲಸ ಮಾಡಲು ನಿಶ್ಚಯಿಸಿದರೆ, ಅವರ ಸಾನಿಧ್ಯವು ಮರೆಯಾಗುವ ಸಂಭವವು ಹೆಚ್ಚಾಗುತ್ತದೆ; ಅವರು ನಮ್ಮಿಂದ ಹಿಂದೆ ಸರಿಯುವುದಿಲ್ಲ, ಆದರೆ ನೀವು ಅವರಿಂದ ಹಿಂದೆ ಸರಿಯುತ್ತೀರಿ. ಆದರೆ ನಿಮ್ಮ ಮನಸ್ಸು ಮತ್ತು ನಿಮ್ಮ ಪ್ರಾಣ ಅದನ್ನು ಒಪ್ಪುವುದಿಲ್ಲ, ಯಾಕೆಂದರೆ ಅವುಗಳು ಯಾವಾಗಲೂ ತಮ್ಮ ಸ್ವಂತ ಚಲನೆಯನ್ನು ಸಮರ್ಥಿಸಿಕೊಳ್ಳುವಲ್ಲಿ ತಲ್ಲೀನವಾಗಿರುತ್ತವೆ. ಒಂದು ವೇಳೆ ಚೈತ್ಯನು ತನ್ನ ಪೂರ್ಣ ಪ್ರಾಬಲ್ಯ ತೋರಲು ಬಿಟ್ಟರೆ ಹೀಗೆ ಸಂಭವಿಸುವುದಿಲ್ಲ; ಮುಸುಕಿನ ಅನುಭವ ಅದಕ್ಕಾಗುತ್ತದೆ, ಆದರೆ "ನನ್ನಲ್ಲಿ ಸ್ವಲ್ಪ ತಪ್ಪು ಇರಲಿಕ್ಕೇ ಬೇಕು, ಒಂದು ಅಸ್ಪಷ್ಟತೆ ನನ್ನಲ್ಲಿ ಹುಟ್ಟಿಕೊಂಡಿರಬಹುದು" ಎಂದು ಅದು ಒಮ್ಮೆ ಹೇಳಿರಬಹುದು, ಮತ್ತು ಅದು ನೋಡಿಕೊಂಡು ಕಾರಣವನ್ನು ಕಂಡುಕೊಂಡಿರಬೇಕು.

*

*ನಾನು ಏಕಾಂಗಿಯಾಗಿದ್ದಾಗ, ಶ್ರೀಮಾತೆಯವರಿಗಾಗಿ ಒಂದು ಮಧುರ ಪ್ರೀತಿಯ ಹರಿವನ್ನು ಅನುಭವಿಸುತ್ತೇನೆ ಮತ್ತು ನನ್ನ ಹೃದಯದಿಂದ, ಹಿತಕ್ಕಾಗಿ ಶರಣಾಗತನಾಗುತ್ತೇನೆ. ಅವರ ಭೌತಿಕ ಸನ್ನಿಧಿಯಲ್ಲಿದ್ದಾಗ ನಾನು ಈ ಪ್ರೇಮವನ್ನು ಅನುಭವಿಸುತ್ತೇನೆ. ಇದು ಹೀಗೇಕಾಗುತ್ತದೆ?*

ನೀವು ಚೈತ್ಯನಲ್ಲಿದ್ದಾಗ ಈ ಅನುಭವವಾಗುತ್ತದೆ – ಆದರೆ ಪ್ರಸ್ತುತದಲ್ಲಿ ಚೈತ್ಯನು ಮನಸ್ಸಿನ ಮತ್ತು ಪ್ರಾಣದ ಅಂಶವನ್ನು ಮಾತ್ರ ನಿರ್ದೇಶಿಸುತ್ತಿದ್ದಾನೆ – ಅತ್ಯಂತ ಬಾಹ್ಯ ಭಾಗಗಳನ್ನು ಅದು ಇನ್ನೂ ನಿಯಂತ್ರಿಸುತ್ತಿಲ್ಲ, ಆದುದರಿಂದ ಶ್ರೀಮಾತೆಯವರ ಸಾನಿಧ್ಯದಲ್ಲಿ ಅದನ್ನು ನೀವು ಅನುಭವಿಸುತ್ತಿಲ್ಲ.

*

ಶ್ರೀಮಾತೆಯವರ ಸಾನಿಧ್ಯವನ್ನು ನೀವು ದಿನದ ಹೆಚ್ಚಿನ ಸಮಯ ಅನುಭವಿಸುತ್ತಿದ್ದರೆ ಅದರ ಅರ್ಥ ನಿಮ್ಮ ಚೈತ್ಯನು ಕ್ರಿಯಾಶೀಲನಾಗಿದ್ದಾನೆ ಮತ್ತು ಆ ರೀತಿ ಅನುಭವಿಸುತ್ತಿದ್ದಾನೆ – ಚೈತ್ಯನ ಚಟುವಟಿಕೆಯು ಇರದಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ಆದುದರಿಂದ ನಿಮ್ಮ ಚೈತ್ಯ ಪುರುಷನು ಅಲ್ಲಿದ್ದಾನೆ ಮತ್ತು ನಿಮ್ಮಿಂದ ದೂರದಲ್ಲಿಲ್ಲ.

*

ನೀವು ಏನನ್ನು ಅನುಭವಿಸುತ್ತೀರೋ ಅದು ಕಲ್ಪನೆಯಲ್ಲ. ನೀವು ನಿಮ್ಮ ಆಂತರಿಕ ಆಳದಲ್ಲಿಯ ಚೈತ್ಯ ಪ್ರಜ್ಞೆಯಲ್ಲಿ ಹೆಚ್ಚು–ಹೆಚ್ಚು ಹೋಗುತ್ತಿದ್ದೀರಿ. ಚೈತ್ಯದಲ್ಲಿದ್ದಾಗ ನಾವು ಶ್ರೀಮಾತೆಯವರ ಸಾನಿಧ್ಯವನ್ನು ಯಾವಾಗಲೂ ಅನುಭವಿಸಲು ಪ್ರಾರಂಭಿಸುತ್ತೇವೆ ಮತ್ತು ಚೈತ್ಯನು ತನ್ನ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಿದ್ದ ಹಾಗೆ ಅದು ಹೆಚ್ಚು–ಹೆಚ್ಚು ಪುನರಾವರ್ತನೆಯಾಗುತ್ತದೆ, ಹೆಚ್ಚು ಸ್ಪಷ್ಟ ಮತ್ತು ನೈಜವಾಗುತ್ತದೆ. ಈ ಸಾನಿಧ್ಯವು ಬೇರೆ ಬೇರೆ ಸಾಧಕರಿಗೆ ಬೇರೆ ಬೇರೆ ರೀತಿಗಳಲ್ಲಿ ಅನುಭವಕ್ಕೆ ಬರುತ್ತದೆ, ಆದರೆ ಅದು ಸಾಧನೆಯ ನಿಜವಾದ ಅನುಭವ. ಸಾಧಕನು ತನ್ನ ಹೃದಯಲ್ಲಿ ಅಥವಾ ತನ್ನ ಆಂತರ್ಯದಲ್ಲಿ ಶ್ರೀಮಾತೆಯವರ ಸಾನಿಧ್ಯವನ್ನು ಯಾವಾಗಲೂ ಅನುಭವಿಸುತ್ತಾನೆ ಎಂದು ನಾವು ಹೇಳಿದಾಗ, ನಮ್ಮ ಅರ್ಥ ಇದಾಗಿದೆ (ಮೇಲಿನ ವಾಕ್ಯದಲ್ಲಿ ಹೇಳಿದಂತೆ). ವಾಸ್ತವವಾಗಿ ಅವರು ಯಾವಾಗಲೂ ಅಲ್ಲಿದ್ದಾರೆ, ಅವರ ಸಾನಿಧ್ಯವು ಮಾತ್ರ ಸಾಮಾನ್ಯ ಮನಸ್ಸಿನ, ಪ್ರಾಣದ ಮತ್ತು ಭೌತಿಕ ಚಲನೆಗಳಿಂದ ಮರೆಮಾಚಲ್ಪಟ್ಟಿದೆ, ಆದರೆ ಇವುಗಳೆಲ್ಲವೂ ಶಾಂತವಾದಾಗ ಚೈತ್ಯನು ತನ್ನಷ್ಟಕ್ಕೆ ತಾನು ಅನಾವರಣ–ಗೊಳಿಸಿಕೊಳ್ಳುತ್ತಾನೆ, ಆಗ ನಾವು ನಮ್ಮ ಆಂತರ್ಯದಲ್ಲಿ ದೈವೀ ಸಾನಿಧ್ಯವನ್ನು ಅನುಭವಿತ್ತೇವೆ.

*

ತಾನು ತನ್ನಲ್ಲಿ ಹೋಗಲೇಬೇಕು ಮತ್ತು ದಿವ್ಯಮಾತೆಯವರ ಸಾನಿಧ್ಯವನ್ನು ತನ್ನ ಆಂತರ್ಯದಲ್ಲಿ ಮತ್ತು ಚೈತ್ಯವನ್ನು ಹೃದಯದ ಹಿಂಭಾಗದಲ್ಲಿ ಕಂಡುಕೊಳ್ಳಬೇಕು. ಆಗ ಅಲ್ಲಿಂದ ಜ್ಞಾನವು ಬರುತ್ತದೆ ಹಾಗೂ ಅಡತಡೆಗಳನ್ನು ಕರಗಿಸುವಂಥ ಸಾಮರ್ಥ್ಯವೂ ಸಹ ಬರುತ್ತದೆ.

*

ನೀವು ಕೆಟ್ಟ ಪರಿಸ್ಥಿತಿಯಿಂದ ಹೊರಗೆ ಬಂದಿರುವುದು ಒಳ್ಳೆಯ ಸಂಗತಿ. ದರ್ಶನಕ್ಕಿಂತ ಮೊದಲು ಅಥವಾ ಆ ಸಮಯದಲ್ಲಿನ ಆಕ್ರಮಣಗಳು ಸ್ವಲ್ಪ ಹೆಚ್ಚು ಹಿಂಸಾತ್ಮಕವಾಗಿರುವುದು ಸತ್ಯವಾಗಿದೆ – ವಿರೋಧಿಸುವ ಶಕ್ತಿಗಳು ಜಾಗೃತವಾಗಿರುತ್ತವೆ ಮತ್ತು ಅವುಗಳು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ದರ್ಶನವನ್ನು ಹಾಳುಮಾಡಲು ಉಪಯೋಗಿಸುತ್ತವೆ. ನಾವು ಸಂಪಾದಿಸಿಕೊಳ್ಳ–ಬೇಕಾದುದೇನೆಂದರೆ – ಯಾವಾಗಲೂ ಶ್ರೀಮಾತೆಯವರ ಅರಿವಿರುವಂಥ ಆಭಾಗದ ಸ್ಥಿರ ಪ್ರಾಮುಖ್ಯತೆಯನ್ನು – ಸಹಜವಾಗಿಯೇ ಅದು ಚೈತ್ಯವಾಗಿರುತ್ತದೆ – ಅದಕ್ಕಾಗಿ, ಅದನ್ನು ಸದ್ಯಕ್ಕೆ ಮರೆಮಾಚುವುದರಿಂದ ವಿರುದ್ಧವಾದ ಸಲಹೆಗಳಿಂದ ದಾರಿತಪ್ಪಿಸಲಾಗುವುದಿಲ್ಲ. ಒಮ್ಮೆ ಅದು ಜಾಗೃತವಾದರೆ, ಮಬ್ಬು ಕತ್ತಲೆಯಿಂದ ಅದು ಯಾವಾಗಲೂ ಪುನಃ ಹೊರ ಹೊಮ್ಮುತ್ತದೆ – ಅದು ಲಕ್ಷ್ಯಕ್ಕೆ ಅಂತಿಮ ಬರುವಿಕೆಯ ಭರವಸೆ, ಆದರೆ ಅದನ್ನು ಮುಂದುಗಡೆಯಿಂದ ನಿರ್ವಹಣೆ ಮಾಡುವುದಾದರೆ ಅಥವಾ ಎಲ್ಲ ಸಂದರ್ಭಗಳಲ್ಲಿ ಹಿಂದುಗಡೆ ಪ್ರಜ್ಞಾಪೂರ್ವಕವಾಗಿ ಅನುಭವಿಸಿದರೆ, ಆಗ ಪಥದ ಹಂತಗಳು ತುಲನಾತ್ಮಕವಾಗಿ ಸುರಕ್ಷಿತವಾಗುತ್ತವೆ ಮತ್ತು ಹೆಚ್ಚು ನೆಮ್ಮದಿಯಿಂದ ಹಾಗೂ ನಿರ್ಭಯತೆಯಿಂದ ಪಾರಾಗಬಹುದು.

*

ಚೈತ್ಯನ ಮತ್ತು ಚೈತ್ಯನ ಸ್ಥಿತಿಯ ಹಿಂದೆ ಯಾವುದೇ ತನ್ನತನ ಇರುವುದಿಲ್ಲ. ಆದಾಗ್ಯೂ, ಚೇತನದಿಂದ ಬರುತ್ತಿರುವ ತನ್ನತನವು ಚೈತ್ಯನೊಡನೆ ಜೊತೆಗೂಡಲು ಪ್ರಯತ್ನಿಸುತ್ತದೆ. ಈ ರೀತಿಯ ಸ್ವಭಾವನ್ನು ನೀವೇನಾದರು ಗಮನಿಸಿದರೆ, ಅದನ್ನು ಸ್ವೀಕರಿಸಬೇಡಿ, ಅದರಿಂದ ಬಿಡುಗಡೆ ಹೊಂದಲು ಅದನ್ನು ಶ್ರೀಮಾತೆಯವರಿಗೆ ಒಪ್ಪಿಸಿ ಬಿಡಿ. ಚೈತ್ಯನ ಮಾರ್ಗವು ನೇರ ಪಥವಾಗಿದೆ; ಶರಣಾಗತಿಯ ಸಾಮರ್ಥ್ಯದ ಮೇಲೆ ಮತ್ತು ನೈಜ ದೂರದೃಷ್ಟಿಯ ಬೆಳಕಿನಲ್ಲಿ ಅದು ಸುತ್ತಿಕೊಳ್ಳದೆ ಮೇಲೆ ಹೋಗುತ್ತದೆ; ಮನಸ್ಸಿನ ನಿಗ್ರಹ ಪಥವು ಸ್ವಲ್ಪ ನೇರ, ಸ್ವಲ್ಪ ಸುತ್ತುಬಳಸಿನದಾಗಿದೆ ಮತ್ತು ಚೈತನ್ಯನ ಪಥವು ಬಯಕೆಗಳಿಂದ ತುಂಬಿದ ಮತ್ತು ಜ್ಞಾನದಲ್ಲಿನ ಕೊರತೆಯಿಂದ ಸಂಪೂರ್ಣವಾಗಿ ತಿರುಚುಮುರುಚಾಗಿದೆ; ಹಾಗಿದ್ದರೂ ಚೈತನ್ಯದ ಹತ್ತಿರ ನೈಜ ಹಂಬಲವಿರುವುದರಿಂದ ಆ ಮಾರ್ಗದಿಂದ ಹೋಗಲು ಸಾಧ್ಯ.

**ಬೆಂಗಾಲಿ ಬರವಣಿಗೆಗಳು**

## ಶ್ರೀಮಾತೆಯವರನ್ನು ಅವಲಂಬಿಸುವ ಅವಶ್ಯಕತೆ

ನೀವು ಒಂದು ಅಪೇಕ್ಷೆಯನ್ನು ಸತ್ಕರಿಸಿದರೆ, ಸಾಧನೆಯ ಫಲಗಳಿಗಾಗಿ ಹಾತೊರೆದರೆ, ನೀವು ನೆಮ್ಮದಿಯಿಂದ ಮತ್ತು ಮೌನವಾಗಿರಲು ಹೇಗೆ ಸಾಧ್ಯ? ಮನುಷ್ಯನ ಸ್ವಭಾವವನ್ನು ಪರಿವರ್ತನೆ ಮಾಡುವಂಥ ಒಂದು ಶ್ರೇಷ್ಠವಾದ ಕೆಲಸವನ್ನು ಒಂದು ಕ್ಷಣದಲ್ಲಿ ಮಾಡಬಹುದೆ?ಮೌನವಾಗಿರಿ, ಶ್ರೀಮಾತೆಯವರ ಬಲವು ನಿಮ್ಮಲ್ಲಿ ಕಾರ್ಯಮಾಡಲು ಬಿಡಿ, ಆಗ ಇರುವ ಸಮಯದಲ್ಲಿ ಎಲ್ಲವನ್ನೂ ಸಾಧಿಸಲಾಗುತ್ತದೆ. ನಿಮ್ಮ ಆಂತರ್ಯದಲ್ಲಿ ನೀವು ಶಾಂತವಾಗಿದ್ದರೆ, ಶರಣಾಗತಿಯ ಹಂತದಲ್ಲಿದ್ದರೆ, ಅಡೆತಡೆಗಳು ಮತ್ತು ಕಷ್ಟಗಳು ನಿಮಗೆ ತೊಂದರೆ ಕೊಡಲಾರವು. ದುಃಖ ಹಾಗೂ ಆಂತಕ ಮತ್ತು “ಇದು ಏಕೆ ಸಂಭವಿಸುತ್ತಿಲ್ಲ? ಯಾವಾಗ ಸಂಭವಿಸಬಹುದು?”, ಈ ಭಾವನೆಗಳನ್ನು ನಿಮ್ಮನ್ನು ಸೇರಲು ಅನುಮತಿಸಿದರೆ, ಅಡೆತಡೆಗಳು ಮತ್ತು ಕಷ್ಟಗಳು ಇನ್ನಷ್ಟು ಬಲವನ್ನು ಪಡೆದುಕೊಳ್ಳುತ್ತವೆ. ನೀವು ಅವುಗಳಿಗೆ ಅಷ್ಟೊಂದು ಲಕ್ಷ್ಯವನ್ನು ಏಕೆ ಕೊಡಬೇಕು? ಶ್ರೀಮಾತೆಯವರ ಮೇಲೆ ಕೇಂದ್ರೀಕರಿಸಿ. ಆಂತರ್ಯದಲ್ಲಿ ಶಾಂತವಾಗಿರಿ ಮತ್ತು ಶರಣಾಗತರಾಗಿರಿ. ನಿಮ್ಮ ಸ್ವಭಾವದ ಕ್ಷುಲ್ಲಕ ಲೋಪಗಳಿಂದ ಸುಲಭವಾಗಿ ತಪ್ಪಿಸಿಕೊಳ್ಳಲಾಗುವುದಿಲ್ಲ. ಅವುಗಳ ಮೇಲೆ ಕ್ಷೋಭೆಗೊಳ್ಳುವುದು ನಿಷ್ಪ್ರಯೋಜಕ. ಶ್ರೀಮಾತೆಯವರ ಶಕ್ತಿಯು ಪುರುಷನನ್ನು ಆವರಿಸಿಕೊಂಡಾಗ (ಉಪ ಪ್ರಜ್ಞೆಯವರೆಗೆ) ಅವುಗಳು ಹೋಗಿಬಿಡುತ್ತವೆ. ಅದಕ್ಕಾಗಿ ಬೇಕಾದ ಸಮಯವು ಪ್ರಮುಖವೆನಿಸುವುದಿಲ್ಲ. ಪೂರ್ಣ ಪರಿವರ್ತನೆಗೆ ಸಮಯ ಬೇಕಾಗುತ್ತದೆ.

**ಬೆಂಗಾಲಿ ಬರವಣಿಗೆಗಳು: 377**

ನಾವು ನಿಮ್ಮಿಂದ ದೂರವೂ ಸರಿದಿಲ್ಲ ಅಥವಾ ನಿಮ್ಮನ್ನು ತ್ಯಜಿಸಿಯೂ ಇಲ್ಲ. ನಿಮ್ಮ ಮನಸ್ಸು ಮತ್ತು ಚೇತನಗಳು ತೊಂದರೆಗೀಡಾದಾಗ ಈ ತಪ್ಪು ಕಲ್ಪನೆಗಳು ನಿಮ್ಮ ಮನಸ್ಸನ್ನು ಪ್ರವೇಶಿಸುತ್ತವೆ. ತನ್ನತನವು ಮೇಲೆದ್ದು ತೊಂದರೆಗಳು ಬಂದಾಗ, ನೀವು ಶ್ರೀಮಾತೆಯವರಲ್ಲಿ ನಂಬಿಕೆಯನ್ನು ಕಳೆದುಕೊಳ್ಳಬಾರದು. ಮೆದುವಾಗಿ ಶ್ರೀಮಾತೆಯವರನ್ನು ಕರೆಯುತ್ತಿರಬೇಕು ಮತ್ತು ಶಾಂತವಾಗಿರಬೇಕು, ಆಗ ತೊಂದರೆಗಳು ಮತ್ತು ತನ್ನತನವು ನಿಮ್ಮನ್ನು ಬಿಟ್ಟುಬಿಡುತ್ತವೆ.

**ಬೆಂಗಾಲಿ ಬರವಣಿಗೆಗಳು: 377**

ನಾವು ಈ ರೀತಿಯ ಭಾವನೆಯನ್ನು ಮತ್ತು ಪ್ರಶ್ನಾತೀತ ನಂಬುಗೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಸಾಧಕನಲ್ಲಿಯ ಈ ಶ್ರದ್ಧೆ, ವಿಶ್ವಾಸ ಮತ್ತು ಗಟ್ಟಿ ನಿರ್ಧಾರಗಳು ಶ್ರೀಮಾತೆಯವರ ಶಕ್ತಿಯು ಹೆಚ್ಚು ಕೆಲಸ ಮಾಡಲು ಸಹಾಯಕವಾಗುತ್ತದೆ.

*

ಸ್ಥಿರ ಹಾಗೂ ಶಾಂತ ಮನಸ್ಸಿನಿಂದ ಮತ್ತು ಅಚಲವಾದ ಶ್ರದ್ಧೆಯಿಂದ ಮತ್ತು ಶ್ರೀಮಾತೆಯವರ ಮೇಲೆ ಭರವಸೆಯಿಂದ ಆಧ್ಯಾತ್ಮಿಕ ಅಭ್ಯಾಸವನ್ನು ಮಾಡಲೇಬೇಕು. ನಿರುತ್ಸಾಹವು ಅಲ್ಲಿ ಸ್ಥಾನವನ್ನು ಕಂಡುಕೊಳ್ಳಲೇಬಾರದು. ಅದು ಒಂದು ವೇಳೆ ಬಂದರೆ, ಅದನ್ನು ನಿರಾಕರಿಸಬೇಕು ಮತ್ತು ಪಕ್ಕಕ್ಕೆ ಎಸೆಯಬೇಕು. "ನಾನು ಅಲ್ಪ ಮತ್ತು ಮಧ್ಯಮ, ನನ್ನಿಂದ ಏನನ್ನೂ ಮಾಡಲಾಗದು. ಶ್ರೀಮಾತೆಯವರು ನನ್ನನ್ನು ದೂರ ಹೋಗಲು ಒತ್ತಾಯಿಸಿದ್ದಾರೆ. ನಾನು ದೂರ ಹೋಗುತ್ತೇನೆ." ಯಾವಾಗ ಈ ರೀತಿಯ ಕಲ್ಪನೆಗಳು ಬರುತ್ತವೆಯೋ, ಆಗ ಅವುಗಳು ನಿಮ್ಮ ಸ್ವಭಾವದ ಸಲಹೆಗಳೆಂದು ಮತ್ತು ಯೋಗದ ಸತ್ಯಕ್ಕೆ ವಿರುದ್ಧವಾದದ್ದೆಂದು ನೀವು ತಿಳಿಯಬೇಕು. ಇಂತಹ ಕಲ್ಪನೆಗಳಿಗೆ ಎಡೆಗೊಡಬೇಡಿ.

*

ನೀವೇಕೆ ಕೊರಗುವಿರಿ? ನೀವು ಶ್ರೀಮಾತೆಯವರ ಮೇಲೆ ಅವಲಂಬಿತವಾಗಿದ್ದರೆ ಮತ್ತು ಎಲ್ಲ ಸಂದರ್ಭಗಳಲ್ಲೂ ವ್ಯಾಕುಲಗೊಳ್ಳದೆ ಇದ್ದರೆ ದುಃಖದ ಪ್ರಶ್ನೆಯೇ ಅಲ್ಲಿರುವುದಿಲ್ಲ. ಮನುಷ್ಯನು ವ್ಯರ್ಥವಾಗಿ ತನ್ನ ಸಹಜೀವಿಗಳಿಂದ ಸಂತೋಷವನ್ನು ಮತ್ತು ಶಾಂತಿಯನ್ನು ಅಪೇಕ್ಷಿಸುತ್ತಾನೆ.

*

ಒಮ್ಮೆ ಶ್ರೀಮಾತೆಯವರೊಂದಿಗೆ ಆಂತರಿಕ ಕೂಡುವಿಕೆ ರೂಪುಗೊಂಡರೆ, ಈ ಆಲೋಚನೆ ಮತ್ತು ಭಯದ ಬದಲಿಗೆ, ಸಾವಿರಾರು ತೊಂದರೆಗಳಿದ್ದರೂ, ಅಸಂಖ್ಯಾತ ತಪ್ಪುಗಳಿದ್ದರೂ ಮತ್ತು ಬಾಹ್ಯ ಪ್ರಕೃತಿಯಲ್ಲಿ ಎಲ್ಲ ಅಸ್ಪಷ್ಟತೆ ಇದ್ದರೂ ಶ್ರೀಮಾತೆಯವರ ವಿಜಯವನ್ನು ತಪ್ಪಿಸಲಾಗದು ಎಂದು ಶ್ರೀಮಾತೆಯವರಲ್ಲಿ ದೃಢನಂಬಿಕೆ ಮತ್ತು ಶ್ರದ್ಧೆಯನ್ನು ನಾವು ಇಡಬೇಕು.

*

ನಾವು ಯಾವಾಗಲೂ ಶ್ರೀಮಾತೆಯವರ ಕರಗಳಲ್ಲಿದ್ದೇವೆ ಮತ್ತು ಅವರ ಸಾಮರ್ಥ್ಯದಿಂದ ಎಲ್ಲವೂ ಮಾಡಲ್ಪಡುವುದು ಎಂದು ಸಂಪೂರ್ಣ ಶ್ರದ್ಧೆಯನ್ನು ಅವರಲ್ಲಿ ಇಡಬೇಕು. ಅದರಿಂದ ಅಡಚಣೆಯು ಯಾವುದೇ ದುಃಖ ಮತ್ತು ಹತಾಶೆಯನ್ನು ಸೃಷ್ಟಿಸಲಾಗುವುದಿಲ್ಲ.

*

**ಗಲಭೆಗಳು ಮತ್ತು ತೊಂದರೆಗಳು**

ಸತ್ಯವೇನೆಂದರೆ, ನೀವು ನಿಮ್ಮ ಅಹಮಿಕೆಗೆ ಅಥವಾ ನಿಮ್ಮ ಕಾರ್ಯದಲ್ಲಿನ ಬಾಹ್ಯ ಸ್ವರೂಪಕ್ಕೆ ವಸ್ತುವಾಗಲೇಬಾರದು. ಒಂದು ವೇಳೆ ಹಾಗಾದರೆ, ಕಾರ್ಯವು ನಿಮ್ಮ ಸಾಧನೆಯ ಭಾಗವಾಗಲಾರದು; ಬದಲಿಗೆ ಅದು ಅಲ್ಪ ಮತ್ತು ಸಾಧಾರಣ ಕಾರ್ಯಕ್ಕೆ ಸಮವಾಗಿಬಿಡುತ್ತದೆ. ಕಾರ್ಯವನ್ನೂ ಸಹ ಶರಣಾಗತಿಯ ಉಲ್ಲಾಸದಲ್ಲಿ ಆಂತರ್ಯದಿಂದ ಮಾಡಬೇಕು.

**ಬೆಂಗಾಲಿ ಬರವಣಿಗೆಗಳು: 377–378**

ಈ ಗಲಭೆಗಳು ಈಗ ಕೆಲವು ಜನರಲ್ಲಿ ಪದೇ ಪದೇ ಸಂಭವಿಸುತ್ತಿವೆ. ಒಂದು ರೋಗದಂತೆ, ಅವುಗಳು ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ಹೋಗುತ್ತವೆ, "ನಾನು ಸಾಯಬೇಕು, ನಾನು ಈ ದೇಹವನ್ನು ಇರಗೊಡಲು ಬಯಸುವುದಿಲ್ಲ," ಎಂಬ ಅನುಭವವು ಬಲವಾಗಿದೆ. ಅದೇನಿದ್ದರೂ, "ದೇಹವನ್ನು ಬಿಡುವುದರಿಂದ ನಾನು ಮತ್ತೊಂದು ದೇಹದಲ್ಲಿ ಯಾವುದೇ ತೊಂದರೆ ಇಲ್ಲದೆ ಯೋಗದಲ್ಲಿ ಸಾಕ್ಷಾತ್ಕಾರವನ್ನು ಪಡೆದುಕೊಳ್ಳುತ್ತೇನೆ" ಎಂಬುದು ಅತ್ಯಂತ ತಪ್ಪಾದ ಕಲ್ಪನೆ. ಈ ರೀತಿಯಾಗಿ ನೀವು ದೇಹವನ್ನು ಬಿಟ್ಟುಕೊಟ್ಟರೆ ಮುಂದಿನ ಜನ್ಮದಲ್ಲಿ ಇನ್ನೂ ಹೆಚ್ಚಿನ ತೊಂದರೆಗಳಿರುವವು ಮತ್ತು ಶ್ರೀಮಾತೆಯವರೊಡನೆ ನೀವು ಯಾವುದೇ ಸಂಬಧವನ್ನು ಹೊಂದುವುದಿಲ್ಲ. ಇದೆಲ್ಲವೂ ಅಸುರೀ ಶಕ್ತಿಗಳ ದಾಳಿ. ಅವುಗಳ ಉದ್ದೇಶ, ಸಾಧಕನ ಸಾಧನೆಯನ್ನು ಭಂಗಗೊಳಿಸುವುದು, ಶ್ರೀಮಾತೆಯವರ ಆರೋಗ್ಯವನ್ನು ಹಾಳು ಮಾಡುವುದು, ಆಶ್ರಮವನ್ನು ಮತ್ತು ನಮ್ಮ ಕೆಲಸವನ್ನು ಹಾಳು ಮಾಡುವುದು. ನಿಮ್ಮನ್ನು ನೀವು ಕಾಪಾಡಿಕೊಳ್ಳಬೇಕು. ಅವುಗಳು ನಿಮ್ಮನ್ನು ಪ್ರವೇಶಿಸಲು ಬಿಡಬೇಡಿ.

**ಬೆಂಗಾಲಿ ಬರವಣಿಗೆಗಳು: 381**

ಕಷ್ಟಗಳು, ಮನುಷ್ಯ ಜೀವಿಗಳ ಬಾಹ್ಯ ಪ್ರಕೃತಿಯ ಪರಿಣಾಮಗಳು. ಈ ಸ್ವಭಾವವು ಮಹಾನ್ ಸಾಧಾಕರಲ್ಲಿಯೂ ಸಹ ಒಂದು ದಿನದಲ್ಲಿ ಅಥವಾ ಕೆಲವು ದಿನಗಳಲ್ಲಿ ಬದಲಾಗುವುದಿಲ್ಲ. ಆದರೆ ನೀವು ಸಂಪೂರ್ಣವಾಗಿ ಶ್ರೀಮಾತೆಯವರ ಮೇಲೆ ಅವಲಂಬಿಸಿದರೆ ಮತ್ತು ಮೌನದಲ್ಲಿ ಹಾಗೂ ಅಚಲತೆಯಲ್ಲಿ ಅವರನ್ನು ಹಂಬಲಿಸಿದರೆ ಮತ್ತು ಆತಂಕವಿಲ್ಲದೆ ಮುಂದುವರೆದರೆ ನಿಮ್ಮ ಪಥದಲ್ಲಿ ಬರುವಂಥ ಕಷ್ಟಗಳು ಏನನ್ನೂ ಮಾಡುವುದಿಲ್ಲ. ಕೆಲ ಸಮಯದಲ್ಲಿ ಅವುಗಳ ಶಕ್ತಿಯು ಕುಂದುತ್ತದೆ, ನಾಶವಾಗುತ್ತದೆ ಮತ್ತು ಮುಂದೆ ಅಸ್ತಿತ್ವದಲ್ಲಿರುವುದಿಲ್ಲ.

*

ಈ ರೀತಿಯ ಕಷ್ಟವು ಪ್ರತಿಯೊಬ್ಬರಲ್ಲೂ ಇರುತ್ತದೆ. ಪ್ರತಿ ಕ್ಷಣವೂ ಶ್ರೀಮಾತೆ–ಯವರೊಂದಿಗೆ ಗುರುತಿಸಿಕೊಳ್ಳುವುದನ್ನು ಸುಲಭವಾಗಿ ಮಾಡಲಾಗುವುದಿಲ್ಲ. ಅದನ್ನು ಸತತ ಆಧ್ಯಾತ್ಮಿಕ ಅಭ್ಯಾಸದಿಂದ ಮಾಡಬಹುದು.

*

ಕಷ್ಟಗಳು ಅಷ್ಟು ಪ್ರಮುಖವೆನಿಸುವುದಿಲ್ಲ. ಕಷ್ಟಗಳೆಂದರೆ, ಮನುಷ್ಯ ಜೀವಿಗಳ ಬಾಹ್ಯ ಪ್ರಕೃತಿಯಲ್ಲಿ ಇರುವಂಥವುಗಳು. ಶ್ರೀಮಾತೆಯವರ ಶಕ್ತಿಯಿಂದ ನಿಧಾನವಾಗಿ ಅವುಗಳನ್ನು ಹೊರ ಹಾಕಬಹುದು. ಆದ್ದರಿಂದ ಆತಂಕಪಡುವ ಅಥವಾ ಕೊರಗುವ ಕಾರಣವಿಲ್ಲ.

*

ಶ್ರೀಮಾತೆಯವರನ್ನು ಯಾವಾಗಲೂ ಸ್ಮರಿಸುತ್ತಿರು. ಸಹಾಯವನ್ನು ಬೇಡು. ಆಗ ಕಷ್ಟಗಳು ತೊಲಗುತ್ತವೆ. ಹೆದರಬೇಡ, ಕಷ್ಟಗಳಿಂದ ವ್ಯಾಕುಲಗೊಳ್ಳಬೇಡ. ಅವಿರತವಾಗಿ ಶ್ರೀಮಾತೆಯವರನ್ನು ಯಾಚಿಸು.

*

ಕಷ್ಟಗಳು ಎಷ್ಟೇ ಅನಂತವಾಗಿ ತೋರಿದರೂ, ಅದು ನಿಜ ತೋರಿಕೆಯಲ್ಲ. ಅದು ಬರೀ ಪೈಶಾಚಿಕ ಭ್ರಾಂತಿ. ಸತ್ಯದ ಮಾರ್ಗವನ್ನು ತುಳಿಯುತ್ತ ಹೋದಂತೆ ಕೊನೆಯಲ್ಲಿ ಪಥವು ಸ್ಪಷ್ಟವಾಗುತ್ತದೆ.

*

ಆದರೆ ಕಷ್ಟಗಳು ಅಷ್ಟು ಸುಲಭವಾಗಿ ಯಾರನ್ನೂ ಬಿಡಲಾರವು; ಒಬ್ಬ ಶ್ರೇಷ್ಠ ಯೋಗಿಯನ್ನೂ ಸಹ. ಚೇತನದ ಮತ್ತು ಭೌತಿಕ ಕಷ್ಟಗಳಿಗಿಂತ ಮಾನಸಿಕ ಕಷ್ಟಗಳಿಂದ ಮುಕ್ತಿ ಹೊಂದುವುದು ಸುಲಭ. ಚೇತನದ ಮತ್ತು ಭೌತಿಕ ತೊಂದರೆಗಳಿಂದ ಬಿಡುಗಡೆಗೆ ಸಮಯ ಬೇಕಾಗುತ್ತದೆ.

*

ಅದು ಎಷ್ಟು ಮುಖ್ಯ? ಶ್ರೇಷ್ಠ ಸಾಧಕರೂ ಸಹ ತೊಂದರೆಗಳಿಗೀಡಾಗುತ್ತಾರೆ. ನಾವು ಚೈತ್ಯ ಸ್ಥಿತಿಯಲ್ಲಿ ಇರುವಂತಾದರೆ, ಶ್ರೀಮಾತೆಯವರೊಡನೆ ಒಂದುಗೂಡಿದರೆ, ಆಗ ಈ ಕಷ್ಟಗಳು ನಿರುಪಯುಕ್ತವೆನ್ನಿಸುತ್ತವೆ.

**ಬೆಂಗಾಲಿ ಬರವಣಿಗೆಗಳು**

ಆ ವಿಷಯದಲ್ಲಿ ಚಿಂತೆಮಾಡುವುದು ಬೇಡ. ಶ್ರೀಮಾತೆಯವರ ಸಾನಿಧ್ಯವನ್ನು ಯಾವಾಗಲೂ ಸ್ಮರಿಸುವುದು ಸುಲಭವಲ್ಲ. ಸಮಸ್ತ ಜೀವಿಯು ಶ್ರೀಮಾತೆಯವರ ಸಾನಿಧ್ಯದಿಂದ ತುಂಬಿದಾಗ, ಅವರನ್ನು ನೀವು ಸ್ವಯಂ ಆಗಿ ಸ್ಮರಿಸಿಕೊಳ್ಳುವಿರಿ, ಮತ್ತು ಅವರನ್ನು ಯಾವುದೇ ಕಾರಣದಿಂದ ಮರೆಯುವುದಿಲ್ಲ.

*

ನೀವು ಪ್ರಶಾಂತವಾಗಿ ನಿಮ್ಮ ಸಾಧನೆಯೊಂದಿಗೆ ಮುನ್ನಡೆಯಿರಿ. ದುಃಖ ಅಥವಾ ಹತಾಶೆ ನಿಮ್ಮಲ್ಲಿ ಎಂದಿಗೂ ಇರುವುದಿಲ್ಲ, ದೀರ್ಘಾವಧಿಯಲ್ಲಿ ಎಲ್ಲ ಕತ್ತಲೆಯು ಕಳೆದು ಹೋಗುವುದು.

*

ತಾಮಸಿಕ ಸ್ಥಿತಿಯು ಅಜಾಗೃತದಿಂದ ಆರೋಹಣವಾಗುವಾಗ ದೇಹವನ್ನು ಆಕ್ರಮಣ ಮಾಡುತ್ತದೆ, ಆಗ ನಮಗೆ ಬೇನೆಯಿಂದ ಬಳಲುವ ಅನುಭವವಾಗುತ್ತದೆ. ಆ ಸಮಯದಲ್ಲಿ ಶ್ರೀಮಾತೆಯವರ ಶಕ್ತಿಯನ್ನು ನಿಮ್ಮ ದೇಹದಲ್ಲಿ ಕರೆತಂದಾಗ ಇದೆಲ್ಲವೂ ಹೊರಟು ಹೋಗುತ್ತದೆ.

*

ಅಜಾಗೃತ ತೊಂದರೆಗಳಿಂದ ಮುಕ್ತಿ ಹೊಂದಬೇಕಾದರೆ, ಮೊದಲು ಅವುಗಳನ್ನು ಗುರುತಿಸಬೇಕು, ನಂತರ ಅವುಗಳನ್ನು ತಿರಸ್ಕರಿಸಬೇಕು. ಮತ್ತು ಕೊನೆಯದಾಗಿ

ಆಂತರಿಕ ಅಥವಾ ಶ್ರೀಮಾತೆಯವರ ಉನ್ನತ ಬೆಳಕನ್ನು ದೇಹ ಪ್ರಜ್ಞೆಯಲ್ಲಿ ತರಬೇಕು. ಆಗ ಅಜಾಗೃತದ ಅಜ್ಞಾನ ಚಲನವಲಗಳು ಓಡಿಸಲ್ಪಡುವವು ಮತ್ತು ಜಾಗೃತದ ಚಲನವಲಗಳು ಸ್ಥಾಪಿಸಲ್ಪಡುವವು. ಆದರೆ ಇದನ್ನು ಸುಲಭದಲ್ಲಿ ಮಾಡಲಾಗುವುದಿಲ್ಲ; ನೀವು ಅದನ್ನು ತಾಳ್ಮೆಯಿಂದ ಮಾಡಬೇಕು; ಅದಕ್ಕೆ ಒಂದು ನಿರ್ಧಾರಿತ ತಾಳ್ಮೆಯು ಬೇಕಾಗುತ್ತದೆ. ಶ್ರೀಮಾತೆಯವರಲ್ಲಿಯ ಭರವಸೆಯೊಂದೇ ಸಾಧನ. ಒಂದು ವೇಳೆ ನಾವು ಆಂತರ್ಯದಲ್ಲಿದ್ದು ಅಂತರ್‌ದೃಷ್ಟಿ ಮತ್ತು ಪ್ರಜ್ಞೆಯನ್ನು ಕಾಪಾಡಿಕೊಂಡರೆ ಆಗ ಅಷ್ಟೊಂದು ಬಳಲುವಿಕೆ ಮತ್ತು ಶ್ರಮವಿರುವುದಿಲ್ಲ – ಆದರೆ ಇದನ್ನು ಯಾವಾಗಲೂ ಮಾಡಲು ಸಾಧ್ಯವಿಲ್ಲ, ಮತ್ತು ಆ ಸಮಯದಲ್ಲಿ ಶ್ರದ್ಧೆ ಮತ್ತು ತಾಳ್ಮೆಗಳು ಅವಶ್ಯಕವಾಗುತ್ತವೆ. ಭೌತ ಪ್ರಜ್ಞೆಯು ಶಕ್ತಿಯುತವಾದಾಗ, ಅದು ಎಲ್ಲವನ್ನೂ ಆವರಿಸುತ್ತದೆ ಮತ್ತು ಎಲ್ಲ ಜೀವಿಯ ಮೇಲೆ ವ್ಯಾಪಿಸಲು ಪ್ರಯತ್ನಿಸುತ್ತದೆ. ಭೌತ ಪ್ರಜ್ಞೆಯು ತನ್ನ ವಿಶಿಷ್ಟ ಸ್ವರೂಪದಲ್ಲಿ ಪ್ರಕಟಗೊಳ್ಳುವಿಕೆಯಿಂದ ಎಲ್ಲವೂ ಜಡತ್ವ ಮತ್ತು ಅಸ್ಪಷ್ಟತೆಯಿಂದ ತುಂಬಿಕೊಂಡಂತೆ ತೋರುತ್ತದೆ (ಜ್ಞಾನದ ಬೆಳಕಿನ ಮತ್ತು ಬಲದ ಚಲನೆಯ ಶೂನ್ಯದಿಂದ). ಈ ಪರಿಸ್ಥಿತಿಗೆ ನೀವು ಅನುಮತಿಸಬೇಡಿ – ಅದು ಒಂದು ವೇಳೆ ಬಂದರೆ ಶ್ರೀಮಾತೆಯವರ ಅನುಗ್ರಹ ಮತ್ತು ಶಕ್ತಿಯು ನಿಮ್ಮ ದೇಹ ಪ್ರಜ್ಞೆಯನ್ನು ಪ್ರವೇಶಿಸಲು ಕರೆಯಿರಿ ಮತ್ತು ಅದನ್ನು ದೇದಿಪ್ಯಮಾನ ಹಾಗೂ ಪ್ರಬಲವನ್ನಾಗಿ ಮಾಡಿರಿ.

**ಬೆಂಗಾಲಿ ಬರವಣಿಗೆಗಳು**

ತೊಂದರೆಗಳು ಅಷ್ಟು ಸುಲಭವಾಗಿ ತೊಲಗಿ ಹೋಗಲಾರವು. ಒಬ್ಬ ಶ್ರೇಷ್ಠ ಸಾಧಕನ ಎಲ್ಲ ತೊಂದರೆಗಳೂ ಸಹ ಒಂದು ನಿಶ್ಚಿತ ದಿನದಂದು, ಒಂದು ಕ್ಷಣದಲ್ಲಿ ಕಣ್ಮರೆಯಾಗಲಾರವು. ನಾವು ಶಾಂತವಾಗಿರಬೇಕು ಹಾಗೂ ಉದ್ವಿಗ್ನಗೊಳ್ಳಬಾರದು ಮತ್ತು ಶ್ರೀಮಾತೆಯವರಲ್ಲಿ ಶ್ರದ್ಧೆಯನ್ನಿಟ್ಟು ಮುನ್ನಡೆಯಬೇಕು ಎಂದು ನಾನು ಹಲವು ಬಾರಿ ಹೇಳಿದ್ದೇನೆ – ಅದನ್ನು ಕ್ಷಣದಲ್ಲಿ ಮಾಡಲಾಗದು. "ನನಗೆಲ್ಲವೂ ಇಂದೇ ಬೇಕು": ಈ ಬೇಡಿಕೆಯನ್ನಿಟ್ಟರೆ, ಅದು ಇನ್ನೂ ಹೆಚ್ಚು ತೊಂದರೆಗಳನ್ನು ಸೃಷ್ಟಿಸಬಹುದು. ನಾವು ಶಾಂತ ಮತ್ತು ಸ್ಥಿರವಾಗಿರಬೇಕು.

*

ಮೊದಲು ಬರುವುದು ಶಾಂತಿ; ಸಂಪೂರ್ಣ ದೇಹವು ಶಾಂತಿಯಿಂದ ತುಂಬದೆ ಹೋದರೆ, ಜ್ಞಾನಕ್ಕೆ ಇಳಿದು ಬರುವುದು (ಅವರೋಹಣವಾಗುವುದು) ಕಷ್ಟವಾಗುತ್ತದೆ. ಒಂದೊಮ್ಮೆ ಶಾಂತಿಯು ಪ್ರತಿಷ್ಠಾಪಿಸಲ್ಪಟ್ಟರೆ, ಶ್ರೀಮಾತೆಯವರ ಅನಂತ ಪ್ರಜ್ಞೆಯು ತಾನೇ ತಾನಾಗಿ ಪ್ರಕಟಗೊಳ್ಳುತ್ತದೆ; ಅದರಲ್ಲಿ ಅಹಮಿಕೆಯು ಮುಳುಗಿ ಹೋಗುತ್ತದೆ. ಆ ಅನಂತೆಯಲ್ಲಿಯೇ ಶ್ರೀಮಾತೆಯವರು ಮತ್ತು ಅವರ ಅನಂತ ಅಂಶವು ಮಾತ್ರ ಉಳಿದುಕೊಳ್ಳುತ್ತದೆ. ಇದು ಬಹಳೇ ಉತ್ತಮವಾದ ಮತ್ತು ಒಂದು ಯಥಾರ್ಥ ಅನುಭವ. ಸಂಪೂರ್ಣ ಪುರುಷನಲ್ಲಿ ಈ ಶಾಂತಿಯು ಪಸರಿಸಿದಾಗ ಮತ್ತು ಸ್ಥಿರವಾದಾಗ, ಭದ್ರ ಮತ್ತು ಶಾಶ್ವತವಾದಾಗ, ಆಧ್ಯಾತ್ಮ ಪ್ರಜ್ಞೆಯ ಪ್ರಥಮ ಅಡಿಪಾಯವು (ಬುನಾದಿಯು) ಸ್ಥಾಪಿಸಲ್ಪಡುತ್ತದೆ. ನರಗಳನ್ನು ಗಟ್ಟಿಗೊಳಿಸಲು ನರಮಂಡಲ ವ್ಯವಸ್ಥೆಯಲ್ಲಿ ಶಾಂತಿ ಮತ್ತು ಬಲಗಳನ್ನು ಕೆಳ ತರುವುದೊಂದೇ ಮಾರ್ಗ.

**ಬೆಂಗಾಲಿ ಬರವಣಿಗೆಗಳು**

**ಆಂತರ್ಯದಲ್ಲಿಂದ ನಿಮಗೆ ಹೇಳಿದ್ದೆಲ್ಲವೂ ಸತ್ಯ**

ಬರೀ ತಪ್ಪುಗಳು, ಪ್ರಮಾದಗಳು, ಹುಸಿತನ ಮತ್ತು ಯಾತನೆಗಳು ಚಿಕ್ಕ ಅಹಮಿಕೆಯ ಆಟಕ್ಕೆ ಮೈದಾನವಾದ ಬಾಹ್ಯ ಪ್ರಜ್ಞೆಯಿಂದ ಬರುತ್ತವೆ. ನಾವು ಅಂತರ್ಮುಖಿಯಾಗಬೇಕು – ನಿಜ ಅನುಭವ, ಮತ್ತು ನಿಜ ದೃಷ್ಟಿಕೋನ ಹೊಂದಿದ ಮತ್ತು ಅಹಮಿಕೆಯ ಕಳಂಕದಿಂದ ಮುಕ್ತವಾದ ನಿಜ ಪ್ರಜ್ಞೆಯನ್ನು ಬೆಳೆಯಲು ಬಿಡಿ.

ಆಗ ಶ್ರೀಮಾತೆಯವರ ಪ್ರಜ್ಞೆಯು ನಿಮ್ಮಲ್ಲಿ ಪ್ರತಿಷ್ಠಾಪಿಸಲ್ಪಡುವುದು.

ಮನುಷ್ಯ ಸ್ವಭಾವದ ಹೆಮ್ಮೆ, ಸಂಘರ್ಷ ಮತ್ತು ಕಷ್ಟಗಳು ಕೊನೆಗಾಣುತ್ತವೆ.

ನಾವು ಅಡಚಣೆಗಳ ಬಗ್ಗೆ ಹೆಚ್ಚು ಯೋಚಿಸಿದಷ್ಟು ನಮ್ಮ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ. ನಾವು ನಮ್ಮನ್ನು ಶ್ರೀಮಾತೆಯವರಿಗೆ ಹೆಚ್ಚು ತೆರೆದುಕೊಳ್ಳಬೇಕು ಮತ್ತು ದೈವದ ಬಗ್ಗೆ, ಬೆಳಕಿನ ಬಗ್ಗೆ, ಶಾಂತಿಯ ಬಗ್ಗೆ ಮತ್ತು ಆನಂದದ ಬಗ್ಗೆ ಹೆಚ್ಚು ಯೋಚಿಸಬೇಕು. ಈ ಸೀಮಾತೀತ ಆನಂದವು ಹೆಚ್ಚು ಬೆಳೆದಷ್ಟು ಉತ್ತಮ. ಶಾಂತಿಯು ಯೋಗದ ಬುನಾದಿ.

ಈ ಶೂನ್ಯ ಸ್ಥಿತಿಯು ಬಂದಾಗ, ಶಾಂತವಾಗಿರಿ ಮತ್ತು ಶ್ರೀಮಾತೆಯವರ ಮೊರೆ ಹೋಗಿ. ಪ್ರತಿಯೊಬ್ಬರಲ್ಲೂ ಈ ಶೂನ್ಯ ಸ್ಥಿತಿ ಇರುತ್ತದೆ, ಅದು ಶಾಂತಿಯಿಂದ ಪೂರ್ತಿ ತುಂಬಿದಾಗ ಮಾತ್ರ ಲಾಭವಾಗುತ್ತದೆ. ಒಂದು ವೇಳೆ ಅಶಾಂತಿ ಇದ್ದರೆ ಅದು ಯಾವುದೇ ಪರಿಣಾಮ ಕೊಡುವುದಿಲ್ಲ.

**ಬೆಂಗಾಲಿ ಬರವಣಿಗೆಗಳು**

*

ಈ ಅನುಭವವು ಉತ್ತಮವಾಗಿದೆ. ಆಂತರ್ಯದಲ್ಲಿ ಶ್ರೀಮಾತೆಯವರು ಏನನ್ನು ಕೊಡುತ್ತಾರೋ, ಅದನ್ನು ನಾವು ಅನುಭವಿಸಬೇಕು – ಬಾಹ್ಯ ತೋರಿಕೆಯ ಕಡೆಗೆ ನೋಡುತ್ತ ಜನರು ಬಹಳಷ್ಟು ತಪ್ಪುಗಳನ್ನು ಮಾಡುತ್ತಾರೆ. ಆಂತರಿಕ ಕಾಣಿಕೆಯನ್ನು ಸ್ವೀಕರಿಸಲು ಅವರು ಮರೆಯುತ್ತಾರೆ ಅಥವಾ ಅದನ್ನು ಪಡೆದುಕೊಳ್ಳಲು ಅಸಮರ್ಥರಾಗಿರುತ್ತಾರೆ.

*

ವಜ್ರದ ಬೆಳಕು ತನ್ನ ಪ್ರಭಲತೆಯಲ್ಲಿ ಶ್ರೀಮಾತೆಯವರ ಬೆಳಕಾಗಿದೆ. ಈ ರೀತಿ ಶ್ರೀಮಾತೆಯವರ ದೇಹದಿಂದ ಹೊರಬಂದು ಸಾಧಕನ ಮೇಲೆ ಬೀಳುವುದು (ಅವನು ಉತ್ತಮ ಪರಿಸ್ಥಿತಿಯಲ್ಲಿದ್ದರೆ) ಈ ಬೆಳಕಿಗೆ ಮಾತ್ರ ಸ್ವಾಭಾವಿಕ.

*

ಒಂದು ಹೊಮ್ಮುವಿಕೆ ಅಥವಾ ಅವರ ಉಪಸ್ಥಿತಿಯ ಒಂದು ಅಂಶ ಮತ್ತು ಪ್ರಜ್ಞೆ ಶ್ರೀಮಾತೆಯವರಿಂದ ಪ್ರತಿಯೊಬ್ಬ ಸಾಧಕನಿಗೆ ಹೊರಬರುತ್ತದೆ ಮತ್ತು ಅವರ ಬಿಂಬವಾಗಿ ಮತ್ತು ಪ್ರತಿನಿಧಿಯಾಗಿ ಅವನ ಜೊತೆಗೆ ಇರುತ್ತದೆ ಹಾಗೂ ಸಹಾಯ ಮಾಡುತ್ತದೆ. ವಾಸ್ತವವೇನೆಂದರೆ, ಶ್ರೀಮಾತೆಯವರೇ ಆ ರೂಪದಲ್ಲಿ ಹೊರಬರುತ್ತಾರೆ.

*

ಅದು ಕಲ್ಪನೆಯಲ್ಲ. ಶ್ರೀಮಾತೆಯವರು ಬಹಳಷ್ಟು ವ್ಯಕ್ತಿತ್ವಗಳನ್ನು ಹೊಂದಿದ್ದಾರೆ, ಪ್ರತಿಯೊಂದಕ್ಕೂ ಒಂದು ಬೇರೆ ರೂಪವಿದೆ. ಸಮಯಕ್ಕನುಗುಣವಾಗಿ ಅವುಗಳು ಅವರ ದೇಹದಲ್ಲಿ ತಮ್ಮಿಷ್ಟಕ್ಕೇ ಪ್ರಕಟವಾಗುತ್ತವೆ. ಶ್ರೀಮಾತೆಯವರು ತಮ್ಮ

ಸೀರೆಯ ಅನುಗುಣವಾಗಿ, ಬೆಳಕಿನೊಂದಿಗೆ ಮತ್ತು ಪ್ರಭಾವದೊಂದಿಗೆ ಕೆಳಗಿಳಿದು ಬರುತ್ತಾರೆ. ಪ್ರತಿಯೊಂದು ಬಣ್ಣವೂ ಒಂದು ಶಕ್ತಿಯನ್ನು ಪ್ರತಿನಿಧಿಸುತ್ತದೆ.

**ಬೆಂಗಾಲಿ ಬರವಣಿಗೆಗಳು**

## ಶ್ರೀಮಾತೆಯವರ ಮೇಲೆ ಅವಲಂಬನೆ

"ನಾನೆಷ್ಟು ದೂರ ಬಂದಿದ್ದೇನೆ, ನಾನೆಷ್ಟು ದೂರ ಹೋಗಬೇಕು?" – ಈ ಪ್ರಕಾರದ ಪ್ರಶ್ನೆಗಳು ಅಷ್ಟು ಉಪಯುಕ್ತವಲ್ಲ. ಶ್ರೀಮಾತೆಯವರ ಮಾರ್ಗದರ್ಶನದಲ್ಲಿ ಪ್ರವಾಹದ ಜೊತೆ ಈಜು. ಅವರು ನಿನ್ನನ್ನು ಉದ್ದೇಶಿತ ನೆಲೆಗೆ ಒಯ್ಯುತ್ತಾರೆ.

*

ಶ್ರೀಮಾತೆಯವರು ಮಾತ್ರ ನಿನ್ನ ಗಮ್ಯಸ್ಥಾನ. ಅವರು ಎಲ್ಲವನ್ನೂ ತಮ್ಮಲ್ಲಿ ಒಳಗೊಂಡಿದ್ದಾರೆ. ಅವರನ್ನು ಪಡೆದುಕೊಂಡರೆ ಎಲ್ಲವನ್ನೂ ಪಡೆದುಕೊಂಡಂತೆ. ನೀವು ಅವರ ಪ್ರಜ್ಞೆಯಲ್ಲಿ ಇದ್ದರೆ ಉಳಿದೆಲ್ಲವುಗಳಲ್ಲಿ ವಿಕಸನವು ತಾನಾಗಿಯೇ ಆಗುತ್ತದೆ.

*

ಶ್ರೀಮಾತೆಯವರ ನಿಲುವು ಎಂದಿಗೂ ಬದಲಾಗುವುದಿಲ್ಲ. ಅದು ಯಾವಾಗಲೂ ಒಂದೇ ಆಗಿರುತ್ತದೆ. ಒಬ್ಬ ಸಾಧಕನು ತನ್ನ ಮಾನಸಿಕ ಕಲ್ಪನೆಗಳಂತೆ ನೋಡಿದರೆ, ಅವರ ನಿಲುವು ಬದಲಾದಂತೆ ಭಾವಿಸುತ್ತಾನೆ. ಆದರೆ ಅದು ಸತ್ಯವಲ್ಲ.

*

ದಿವ್ಯಮಾತೆಯವರಿಲ್ಲದೆ ನೀವಿಲ್ಲ. ನಿಜವಾಗಿಯೂ ಶ್ರೀಮಾತೆಯವರು ನಿಮ್ಮೊಂದಿಗಿದ್ದಾರೆ. ಸಾಧಕನನ್ನು ಅಂಧತ್ವದ ಕಡೆಗೆ ಹೋಗುವುದನ್ನು ತಪ್ಪಿಸಲು, ಉನ್ನತ ಬೆಳಕು ಮತ್ತು ಶ್ರೇಷ್ಠ ಪ್ರಜ್ಞೆಯನ್ನು ಕೆಳ ತರಬೇಕಾಗಿದೆ. ಈ ವಿಶ್ವಾಸದಿಂದ, ಗಟ್ಟಿಯಾದ ಹೃದಯದಿಂದ ಮುನ್ನಡೆಯಿರಿ. ಬೆಳಕು ಮತ್ತು ಪ್ರಜ್ಞೆಗಳು ಖಚಿತವಾಗಿಯೂ ಅವರೋಹಣಗೊಳ್ಳುತ್ತವೆ.

*

ಶ್ರೀಮಾತೆಯವರ ಜಯವು ಖಚಿತವಾಗಿ ಸಂಭವಿಸುವುದೆಂಬ ದೃಢವಾದ ವಿಶ್ವಾಸದೊಂದಿಗೆ ಮೌನವಾಗಿ, ಶಾಂತಿಯುತವಾಗಿ, ಭಯರಹಿತವಾಗಿ ಆಧ್ಯಾತ್ಮಿಕತೆಯನ್ನು ನಾವು ಅಭ್ಯಾಸ ಮಾಡಬೇಕು.

*

ಯಾರು ದೂರ ಹೋಗುತ್ತಾರೆ? ಶ್ರೀಮಾತೆಯವರಲ್ಲಿ ಶ್ರದ್ಧೆ, ಪ್ರಾಮಾಣಿಕತೆ ಮತ್ತು ನಂಬಿಕೆ ಇಲ್ಲದವರು; ಶ್ರೀಮಾತೆಯವರ ಸಂಕಲ್ಪಕ್ಕಿಂತ ತಮ್ಮ ಸ್ವಂತ ಕಲ್ಪನೆಯೇ ಶ್ರೇಷ್ಠವೆಂದು ತಿಳಿಯುವವರು, ಅವರು ದೂರ ಹೋಗಬಹುದು. ಆದರೆ ಯಾರು ಸತ್ಯವನ್ನು ಆಶಿಸುತ್ತಾರೋ, ಯಾರಲ್ಲಿ ನಂಬಿಕೆ ಮತ್ತು ವಿಶ್ವಾಸಗಳಿವೆಯೋ ಯಾರು ಶ್ರೀಮಾತೆಯವರನ್ನು ಬೇಡುತ್ತಾರೋ ಅವರು ಹೆದರುವ ಅವಶ್ಯಕತೆಯಿಲ್ಲ; ಸಾವಿರಾರು ತೊಂದರೆಗಳಿದ್ದರೂ ಅವನು ಅವೆಲ್ಲವನ್ನೂ ಮೆಟ್ಟಿ ನಿಲ್ಲುತ್ತಾನೆ; ಅವನ ಸ್ವಭಾವದಲ್ಲಿ ಸಾವಿರಾರು ದೋಷಗಳಿದ್ದರೂ ಅವನು ಅವುಗಳನ್ನು ಸರಿಪಡಿಸಿಕೊಳ್ಳುತ್ತಾನೆ; ಅವನು ಕೆಳಗೆ ಬಿದ್ದರೂ ಸಹ ಮತ್ತೆ ಮೇಲೆಳುತ್ತಾನೆ ಮತ್ತು ಕೊನೆಗೆ ತನ್ನ ಸಾಧನೆಯ ಗುರಿಯನ್ನು ತಲುಪುತ್ತಾನೆ.

*

ಇದು ಸರಿಯಾದ ನಿಲುವಲ್ಲ, ನಿಮ್ಮ ಸಾಧನೆಯನ್ನು ಹಾಳು ಮಾಡಿಲ್ಲ; ಶ್ರೀಮಾತೆಯವರು ನಿಮ್ಮನ್ನು ಬಿಟ್ಟುಕೊಟ್ಟಿಲ್ಲ; ಶ್ರೀಮಾತೆಯವರು ನಿಮ್ಮಿಂದ ದೂರವೂ ಹೋಗಿಲ್ಲ ಅಥವಾ ನಿಮ್ಮ ಜೊತೆ ಅಸಮಾಧಾನವೂಗೊಂಡಿಲ್ಲ – ಇವುಗಳೆಲ್ಲವೂ ಚೇತನದ ಕಲ್ಪನೆಗಳು ಮತ್ತು ಅವುಗಳಿಗೆ ಯಾವುದೇ ಸ್ಥಳಾವಕಾಶವನ್ನು ಕೊಡಲೇಬಾರದು. ಸರಳ ಹಾಗೂ ಸ್ಥಿರವಾದ ವಿಶ್ವಾಸವನ್ನು ಶ್ರೀಮಾತೆಯವರ ಮೇಲಿಡಿ. ತೊಂದರೆಗಳಿಗೆ ಹೆದರಿಕೊಳ್ಳದೆ ಶ್ರೀಮಾತೆಯವರ ಶಕ್ತಿಯನ್ನು ಆಹ್ವಾನಿಸಿ. ನೀವು ಪಡೆದುಕೊಂಡಿದ್ದೆಲ್ಲವೂ ಒಳಗಡೆ ಇದೆ; ಇನ್ನೂ ಹೆಚ್ಚಿನ ಪ್ರಗತಿ ಅಲ್ಲಿರುತ್ತದೆ.

*

ಜಾಗೃತವಾಗಿರು, ಪ್ರಶಾಂತವಾಗಿರು, ಶ್ರೀಮಾತೆಯವರನ್ನು ಕೂಗು, ಒಳ್ಳೆಯ ಸ್ಥಿತಿಯು ಮರಳಿ ಬರುವುದು. ಪೂರ್ಣ ಶರಣಾಗತಿಗೆ ಸಮಯ ಬೇಕಾಗುತ್ತದೆ. ಉಳಿದೆಲ್ಲವನ್ನೂ ಸಮರ್ಪಿಸು. ಅದನ್ನು ನಿರಂತರವಾಗಿ ಅಭ್ಯಾಸ ಮಾಡಿದಾಗ ಮಾತ್ರ ಸಮರ್ಪಣೆಯು ಪೂರ್ಣವಾಗುತ್ತದೆ.

*

ಯಾವಾಗಲೂ ಶಾಂತವಾಗಿರು. ಶ್ರೀಮಾತೆಯವರ ಉನ್ನತ ಪ್ರಜ್ಞೆಯು ನಿನ್ನಲ್ಲಿ ಇಳಿಯಲಿ – ಇದು ಮಾತ್ರ ನಿನ್ನ ಬಾಹ್ಯ ಪ್ರಜ್ಞೆಯನ್ನು ನಿಧಾನವಾಗಿ ಪರಿವರ್ತಿಸುತ್ತದೆ.

*

ದೈವ ಶಿಶುವಾಗಿದ್ದಾಗಿಯೂ ತನ್ನ ಸಹಜ ಗುಣದಲ್ಲಿ ಅಸಂಖ್ಯ ಸಣ್ಣ ದೋಷಗಳಿರದ ಸಾಧಕನಿಲ್ಲ. ನಮಗೆ ಅವುಗಳ ಅರಿವಾಗುತ್ತಿದ್ದಂತೆಯೇ ಅವುಗಳನ್ನು ನಿರಾಕರಿಸಬೇಕು; ಶ್ರೀಮಾತೆಯವರ ಶಕ್ತಿಯು ನಮ್ಮ ಸ್ವಭಾವದಲ್ಲಿರುವ ಈ ಸಣ್ಣ ದೋಷಗಳನ್ನು ನಿಧಾನವಾಗಿ ತೊಡೆದುಹಾಕಲು ನಾವು ಪ್ರಖರವಾಗಿ ಹಂಬಲಿಸಬೇಕು; ಆದರೆ ಶ್ರೀಮಾತೆಯವರ ಮೇಲಿನ ಭರವಸೆ, ಶರಣಾಗತಿ ಮತ್ತು ಅವಲಂಬನೆ ಯಾವಾಗಲೂ ಅಖಂಡವಾಗಿರಬೇಕು. ಈ ದೋಷಗಳಿಂದ ಮುಕ್ತಿ ಹೊಂದುವುದು ಪೂರ್ಣತಃ ಸಮಯದ ಮೇಲೆ ಅವಲಂಬಿಸಿದೆ; ದೋಷಗಳು ಅಲ್ಲಿರುವುದರಿಂದ ನಾವು ವಿಚಲಿತರಾಗಬಾರದು.

*

ಇದು ನಿಮ್ಮನ್ನು ನಿರಾಶೆಗೊಳಿಸಬಾರದು. ಯೋಗದ ಪಥದಲ್ಲಿ ಮತ್ತು ಅಚೇತನದಲ್ಲಿ ಇಳಿಯುವ ಸಮಯದಲ್ಲಿ ಇಂತಹ ಪರಿಸ್ಥಿತಿಯು ಸಹಜವಾಗಿಯೇ ಬರುತ್ತದೆ – ಮತ್ತು ಇದು ಬಹಳ ಸಮಯದವರೆಗೆ ಮುಂದುವರೆಯಬಹುದು. ತೆರೆಯ ಹಿಂದೆ ಶ್ರೀಮಾತೆಯವರಿದ್ದಾರೆ ಮತ್ತು ನಂತರದಲ್ಲಿ ಅವರು ತಮ್ಮನ್ನು ತಾವು ಪ್ರಕಟಪಡಿಸಿಕೊಳ್ಳುತ್ತಾರೆ; ಈ ನಿಮ್ಮ ಸಾಮ್ರಾಜ್ಯವು ಉನ್ನತದಲ್ಲಿರುವ ಬೆಳಕಿನ ಸಾಮ್ರಾಜ್ಯದಲ್ಲಿ ರೂಪಾಂತರಗೊಳ್ಳುವುದು – ಈ ಗಟ್ಟಿಯಾದ ಭರವಸೆಯನ್ನಿಟ್ಟುಕೊಂಡು ಮತ್ತು ನಿರಂತರವಾಗಿ ಎಲ್ಲವನ್ನೂ ಸಮರ್ಪಿಸುತ್ತ, ತೊಂದರೆರಹಿತವಾದ ಈ ಹಂತದವರೆಗೆ ಮುನ್ನಡೆಯಿರಿ.

*

ಬಾಹ್ಯ ಜಗತ್ತಿನೊಡನೆ ಸಂಪರ್ಕವನ್ನು ಹೊಂದಿರಬೇಕು, ಆದರೆ ಅದು ಹೊರ ಮೇಲ್ಮೈಯಲ್ಲಿ ಮಾತ್ರ ಇರಬೇಕು. ನೀವು ನಿಮ್ಮ ಆಂತರ್ಯದಲ್ಲಿರಬೇಕು, ಶ್ರೀಮಾತೆಯವರ ಹತ್ತಿರದಲ್ಲಿದ್ದು ಎಲ್ಲವನ್ನೂ ಗಮನಿಸುತ್ತಿರಿ – ಇದು ಅವಶ್ಯವಾಗಿ ಬೇಕು. ಇದು ಕರ್ಮ ಯೋಗದ ಪ್ರಥಮ ಹೆಜ್ಜೆ. ಆಗ ಒಳಗಡೆಯಿಂದ ಮತ್ತು

ಶ್ರೀಮಾತೆಯವರ ಬಲದ ಸಹಾಯದಿಂದ ಎಲ್ಲ ಬಾಹ್ಯ ಕಾರ್ಯವನ್ನು ನಿರ್ವಹಿಸಿರಿ. ಇದು ಎರಡನೆಯ ಹೆಜ್ಜೆ. ಇದನ್ನೊಂದು ವೇಳೆ ಮಾಡಿದರೆ, ನಿಮಗೆ ಯಾವುದೇ ತೊಂದರೆಗಳು ಇರಲಾರವು.

*

ಶ್ರೀಮಾತೆಯವರಲ್ಲಿ ಸಂಪೂರ್ಣ ಭರವಸೆಯಿಂದ ಮುನ್ನಡೆದರೆ, ಯಾವುದೇ ಸಂದರ್ಭಗಳಿರಲಿ ಮತ್ತು ತೊಂದರೆಗಳಿರಲಿ, ಎಷ್ಟೇ ದೀರ್ಘ ಸಮಯ ಬೇಕಾಗಲಿ, ನೀವು ನಿಮ್ಮ ಗುರಿಯನ್ನು ನಿಶ್ಚಿತವಾಗಿಯೂ ಸೇರುವಿರಿ ಎಂಬ ವಿಷಯವನ್ನು ಯಾವಾಗಲೂ ನೆನಪಿರಲಿ – ಯಾವುದೇ ಅಡತಡೆ, ವಿಳಂಬ ಅಥವಾ ಪ್ರತಿಕೂಲ ಪರಿಸ್ಥಿತಿಯು ಪರಮ ವಿಜಯವನ್ನು ನಾಶಪಡಿಸಲಾರದು.

*

ನಮಸ್ಕರಿಸುವಾಗ ಅಥವಾ ದರ್ಶನ ವೇಳೆಯಲ್ಲಿ ಶ್ರೀಮಾತೆಯವರ ಬಾಹ್ಯ ತೋರಿಕೆಯಿಂದ ಅವರು ಸಂತುಷ್ಟಗೊಂಡಿದ್ದಾರೋ ಅಥವಾ ಇಲ್ಲವೋ ಎನ್ನುವುದನ್ನು ಊಹಿಸಿಕೊಳ್ಳುವುದು ಸರಿಯಲ್ಲ. ಶ್ರೀಮಾತೆಯವರು ಸಂತುಷ್ಟರಾಗಿಲ್ಲ, ಶ್ರೀಮಾತೆಯವರು ಕಠೋರವಾಗಿದ್ದಾರೆ, ಶ್ರೀಮಾತೆಯವರಿಗೆ ನಾನು ಬೇಕಾಗಿಲ್ಲ, ಅವರು ತಮ್ಮಿಂದ ನನ್ನನ್ನು ದೂರವಿಡುತ್ತಿದ್ದಾರೆ, ಎಂಬಿತ್ಯಾದಿ ಮತ್ತು ಇತರೆ ತಪ್ಪು ಕಲ್ಪನೆಗಳಿಂದ ಜನರು ಸತತವಾಗಿ ತಪ್ಪನ್ನು ಮಾಡುತ್ತಿದ್ದಾರೆ; ನಂತರ ಹತಾಶೆಗಳಿಗೆ ಮಣಿದು, ಮಾರ್ಗದಲ್ಲಿ ಅವರು ತಮ್ಮ ಸ್ವಂತ ತೊಂದರೆಗಳನ್ನು ಸೃಷ್ಟಿಸಿಕೊಳ್ಳುತ್ತಾರೆ. ಇದೆಲ್ಲವನ್ನು ಮಾಡುವ ಬದಲು, ಒಂದು ಅಚಲವಾದ ಭರವಸೆಯನ್ನು ಶ್ರೀಮಾತೆಯವರ ಪ್ರೇಮದಲ್ಲಿ ಮತ್ತು ಸಹಾಯದಲ್ಲಿ ಉಳಿಸಿಕೊಳ್ಳಿರಿ ಮತ್ತು ಸಾಧನೆಯ ಪಥದಲ್ಲಿ ಶಾಂತ ಮತ್ತು ಉಲ್ಲಾಸದ ಮನಸ್ಸಿನಿಂದ ಮುನ್ನಡೆಯಿರಿ. ಯಾರು ಇದನ್ನು ಮಾಡುತ್ತಾರೋ ಅವರು ಕ್ಷೇಮ. ತೊಂದರೆಗಳಿಂದ ಅಹಮಿಕೆಯು ಮೇಲೆದ್ದಾಗ, ಅವುಗಳು ಸ್ಪರ್ಶಿಸುವುದಿಲ್ಲ; ಅವುಗಳು ಹೇಳುತ್ತವೆ, "ಶ್ರೀಮಾತೆಯವರು ಇದ್ದಾರೆ, ಮಾಡುವುದೆಲ್ಲವೂ ಸರಿಯಾಗಿದೆ; ಸದ್ಯಕ್ಕೆ ನಾನು ಅವರನ್ನು ನೋಡದಿರಬಹುದು, ಆದರೂ ಅವರು ನನ್ನ ಜೊತೆಗಿದ್ದಾರೆ, ನನ್ನ ಸುತ್ತ; ನಾನು ಹೆದರುವ ಕಾರಣವಿಲ್ಲ." ನೀವು ಮಾಡಬೇಕಾದ್ದು ಇದನ್ನು. ಈ ಭರವಸೆಯನ್ನು ಕಾಯ್ದುಕೊಂಡು ಸಾಧನೆ ಮಾಡುತ್ತ ಮುಂದುವರೆಯಬೇಕು.

*

ನೀಲ ವರ್ಣ ನನ್ನದು, ಶ್ವೇತ ವರ್ಣ ಶ್ರೀಮಾತೆಯವರದ್ದು. ಉನ್ನತ ಪ್ರಜ್ಞೆಯು ತನ್ನ ವಿಶ್ವಾತ್ಮಕದೊಂದಿಗೆ ಮೊದಲು ಪುರುಷನಲ್ಲಿ ಇಳಿಯಲು ಪ್ರಾರಂಭಿಸಿದಾಗ ನೀಲ ವರ್ಣವನ್ನು ನೋಡುವುದು ಸ್ವಾಭಾವಿಕ.

*

ಶ್ವೇತ ಗುಲಾಬಿಯು ಶ್ರೀಮಾತೆಯವರಿಗೆ ಪ್ರೀತಿಯ ಶರಣಾಗತಿಯನ್ನು ಸೂಚಿಸುತ್ತದೆ. ಆದರ ಪರಿಣಾಮವಾಗಿ ಬೆಳಕು ಮತ್ತು ಸತ್ಯಗಳು ನಿಮ್ಮ ಆಧಾರದಲ್ಲಿ ಹರಡಿಕೊಳ್ಳುತ್ತವೆ. ಶ್ವೇತ ತಾವರೆ ಎಂದರೆ ನಿಮ್ಮ ಮಾನಸಿಕ ಸ್ತರದ ಮೇಲೆ ಪೂರ್ಣವಾಗಿ ಜಾಗೃತವಾದ ಶ್ರೀಮಾತೆಯವರ ಪ್ರಜ್ಞೆ, ಹೊಂಬಣ್ಣವು ಭೌತಿಕದಲ್ಲಿ ಸುಪ್ರಮಾನಸದ ಕಾಂತಿಯ ಪ್ರತೀಕ.

*

**ಭಕ್ತಿ – ವಿಶ್ವಾಸ – ಆಧಾರ**

ಸ್ಥಿರವಾಗಿ, ಶಾಂತಚಿತ್ತರಾಗಿ ಕುಳಿತುಕೊಂಡು ಶ್ರೀಮಾತೆಯರನ್ನು ಸ್ಮರಿಸಿರಿ, ಮತ್ತು ನಿಮ್ಮನ್ನು ನೀವು ಅವರಿಗೆ ತೆರೆದುಕೊಳ್ಳಿರಿ.

*

ಎರಡನ್ನೂ ಮಾಡುವುದು ಉತ್ತಮ. ದೂರವಿದ್ದುಕೊಂಡು ಸಾಧನೆಯನ್ನು ಮಾಡುವುದು ಸಾಧ್ಯವಾದರೆ ಅದು ಉತ್ತಮ, ಆದರೆ ಅದನ್ನು ಯಾವಾಗಲೂ ಮಾಡಲಾಗದು. ವಾಸ್ತವವೇನೆಂದರೆ, ನಿಮ್ಮ ಸಾಧನೆಯನ್ನು ನೀವು ಒಂದು ಸುರಕ್ಷಿತ ಸ್ಥಳವನ್ನು ಅಥವಾ ಒಂದು ಕವಚವನ್ನು ನಿರ್ಮಿಕೊಂಡು (ಚೈತ್ಯದಲ್ಲಿ) ಮಾಡಬೇಕು. ಚಂಚಲಗೊಳ್ಳದೆ, ಸ್ತಬ್ದವಾಗಿ ಮತ್ತು ಮೌನವಾಗಿ ಶ್ರೀಮಾತೆಯವರ ಮೇಲೆ ಭರವಸೆ ಇಡಿ, ಅವರು ಹೇಳುವುದೆಲ್ಲವೂ ಸರಿ ಎಂದು ಉತ್ಸಾಹದಿಂದ ಹೇಳಿರಿ. ಇಂತಹ ಸಣ್ಣ ಕೊರತೆಗಳು ದೊಡ್ಡವುಗಳಿಗಿಂತ ದೊಡ್ಡ ಅಡಚಣೆಗಳು. ಆದರೆ ಅವೆಲ್ಲವುಗಳನ್ನು ನಿಧಾನವಾಗಿ ಹೊರತರಬೇಕು ಮತ್ತು ಕೊರತೆಗಳನ್ನು ಪರಿಪೂರ್ಣವಾಗಿ ಪರಿವರ್ತಿಸಬೇಕು. ಇದನ್ನು ಒಡನೆಯೆ ಮಾಡಲಾಗದು.

*

ಸತ್ಯಕ್ಕೆ ನೇರ ಮಾರ್ಗವು ಹೃದಯದಲ್ಲಿ ತೆರೆದಿದೆ. ಅರ್ಪಿತವಾಗಿದ್ದೆಲ್ಲವೂ ಶ್ರೀಮಾತೆಯವರ ಕಡೆಗೆ ಹೋಗುತ್ತದೆ ಮತ್ತು ಅವರ ಸತ್ಯದಲ್ಲಿ ವಿಲೀನಗೊಳ್ಳುತ್ತದೆ ಮತ್ತು ಎಲ್ಲವೂ ಸತ್ಯವಾಗುತ್ತದೆ.

*

ಹೆದರಬೇಡಿ, ನಿರಾಶರಾಗಬೇಡಿ. ಇದು ಯೋಗದ ಮಾರ್ಗ. ಅಂಥ ಸ್ಥಿತಿಯಿಂದ ನೀವು ಪಾರಾಗಬೇಕು; ಗಾಢಾಂಧತೆಯಲ್ಲೂ ನೀವು ನಿಶ್ಚಿಂತರಾಗಿರಬೇಕು.

*

ಶಾಂತಚಿತ್ತರಾಗಿರುವುದು, ಶ್ರೀಮಾತೆಯವರನ್ನು ಆಹ್ವಾನಿಸುವುದು, ಹತಾಶೆ, ಬಯಕೆ ಮತ್ತು ಕಾಮನೆಗಳನ್ನು ತ್ಯಜಿಸುವುದು; ಇದು ತಪಸ್ಸು.

*

ಇದು ನಿಮಗೆ ಮಾತ್ರ ಸಂಭವಿಸುತ್ತಿರುವುದು ಒಂದು ಹೆಗ್ಗಳಿಕೆಯಲ್ಲವೆ? "ನಾನು ತುಂಬಾ ಒಳ್ಳೆಯವ, ಬಹಳ ಸಮರ್ಥ, ಎಲ್ಲವೂ ನನ್ನಿಂದಲೇ ಮಾಡಲ್ಪಟ್ಟಿದೆ, ನಾನಿಲ್ಲದೆ ಶ್ರೀಮಾತೆಯವರ ಕಾರ್ಯ ಆಗದು." ಇದೊಂದು ನಿರಾಕರಿಸಲಾಗದ ಒಣ ಹೆಮ್ಮೆ. "ನಾನು ಕೆಟ್ಟವರಿಗಿಂತ ಕೆಟ್ಟವ. ನನ್ನ ವಿರೋಧಕ್ಕೆ ಬದ್ಧನಾಗಿರುವುದರಿಂದ ಎಲ್ಲವೂ ತಟಸ್ಥ ಸ್ಥಿತಿಗೆ ಬಂದಿದೆ. ಭಗವಂತನು ತನ್ನ ಕಾರ್ಯವನ್ನು ನಿರ್ವಹಿಸಲಾರ." ಇದು ವಿರುದ್ಧವಾದ ದಿಶೆಯಲ್ಲಿ ಒಂದು ಒಣ ಪ್ರತಿಷ್ಠೆ.

*

ಎಲ್ಲ ಚಿಂತೆಯನ್ನು ಬದಿಗೊತ್ತಿ ಶಾಂತಿಯುತವಾಗಿ ಶ್ರೀಮಾತೆಯವರ ಬಲವನ್ನು ಕರೆಯುವಲ್ಲಿ ಯಾವಾಗಲೂ ಪ್ರಶಾಂತವಾಗಿರು.

*

ಪ್ರಜ್ಞೆಯು ವಿಶಾಲವಾದಾಗ ಮತ್ತು ವಿಶ್ವವ್ಯಾಪಿಯಾದಾಗ ಮತ್ತು ಶ್ರೀಮಾತೆಯವರನ್ನು ಇಡೀ ವಿಶ್ವದಲ್ಲಿ ನೋಡಿದಾಗ ಅಹಮಿಕೆಯು ಅಂಟಿಕೊಳ್ಳುವುದಿಲ್ಲ. ಶ್ರೀಮಾತೆಯವರ ಮಗುವಾದ ಮತ್ತು ಅವರ ಅಂಶವಾದ ನಿನ್ನ ನಿಜ ಪುರುಷನು ಮಾತ್ರ ಶ್ರೀಮಾತೆಯವರ ಮಡಿಲಲ್ಲಿ ವಿಶ್ರಮಿಸುವನು.

*

# ಶ್ರೀಮಾತೆಯ ಸಾನಿಧ್ಯಕ್ಕೆ ಅರಳುವಿಕೆ

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

## ಅರಳುವಿಕೆಯ ಅಥವಾ ತೆರೆದುಕೊಳ್ಳುವಿಕೆಯ ಅರ್ಥ

*ನಿಜವಾಗಿ ತೆರೆದುಕೊಳ್ಳುವಿಕೆ ಯಾವುದು?*

ಅದು ಶ್ರೀಮಾತೆಯ ಸಾನಿಧ್ಯ ಮತ್ತು ಆಕೆಯ ಶಕ್ತಿಗಳನ್ನು ಗ್ರಹಿಸುವುದೇ ಆಗಿದೆ. ಯಾವುದು ಸರಿಯಾದ ಮತ್ತು ಪರಿಪೂರ್ಣವಾದ ನಿಲುವು ತೆರೆದುಕೊಳ್ಳುವಿಕೆಗೆ?

ಅಭೀಪ್ಸೆ, ಶಾಂತತೆ, ಪಡೆದುಕೊಳ್ಳುವುದಕ್ಕಾಗಿ ತಮ್ಮನ್ನು ವಿಶಾಲಗೊಳಿಸುವಿಕೆ ಮತ್ತು ಇಲ್ಲಿ ಯಾವುದು ನಿಮ್ಮನ್ನು ದೈವತ್ವದಿಂದ ವಿಮುಖಗೊಳಿಸುವುದು ಅದನ್ನು ನಿರಾಕರಿಸುವುದು.

*ಶ್ರೀಮಾತೆಗಲ್ಲದೆ ಬೇರೆ ಶಕ್ತಿಗಳಿಗೆ ನನ್ನನ್ನು ತೆರೆದಿಟ್ಟುಕೊಂಡಿಲ್ಲವೆಂದು ನಾ ಹೇಗೆ ತಿಳಿದುಕೊಳ್ಳುವುದು?*

ನೀನು ಬಹಳ ಎಚ್ಚರದಿಂದಿರಬೇಕು ಮತ್ತು ಕ್ಷೋಭೆ, ಆಸೆ ಮತ್ತು ಅಹಂಕಾರಕಗಳ ಚಲನೆ ಇಲ್ಲದಂತೆ ನೋಡಿಕೊಳ್ಳಬೇಕು.

*ಶ್ರೀಮಾತೆಯವರಿಗೆ ನಿಜವಾಗಿ ತೆರೆದಿಟ್ಟುಕೊಂಡದ್ದಕ್ಕೆ ಕುರುಹುಗಳು ಯಾವವು?*

ಅದೊಂದು ಸಲ ತನ್ನಷ್ಟಕ್ಕೆ ತೋರಿಸುತ್ತದೆ – ದೈವೀ ಶಾಂತಿ, ಸಮತ್ವ, ವಿಶಾಲತೆ, ಪ್ರಕಾಶ, ಆನಂದ, ಜ್ಞಾನ ಶಕ್ತಿಗಳೆಲ್ಲ, ನೀವು ಯಾವಾಗ ಅವಗಳೊಡನೆ ಸಂವೇದಿಸುತ್ತಾರೊ, ಯಾವಾಗ ನಿಮಗೆ ಶ್ರೀಮಾತೆಯ ಸಾಮಿಪ್ಯದ ಅರಿವಾಗುತ್ತದೆಯೊ ಅಥವಾ ಸಾನಿಧ್ಯ ಪ್ರಾಪ್ತವಾಗುತ್ತದೆಯೋ ಆಗ. ಅಥವಾ ಆಕೆಯ ಶಕ್ತಿಯ ಕೆಲಸ ಇತ್ಯಾದಿ ಇತ್ಯಾದಿ.

ಇವುಗಳಲ್ಲಿ ಯಾವುದಾದರೊಂದನ್ನು ಸಂವೇದಿಸಿದ್ದೆ ಆದರೆ, ಅದೇ ತೆರೆದುಕೊಳ್ಳುವಿಕೆ – ಹೆಚ್ಚು ಸಂವೇದಿಸಿದರೆ, ಹೆಚ್ಚು ಸಂಪೂರ್ಣ ತೆರೆದುಕೊಳ್ಳುವಿಕೆ.

*ನಮ್ಮ ಸತ್ತೆಯ ಎಲ್ಲಾ ಗಂಟು(ಬಂಧನ)ಗಳನ್ನು ಬಿಡಿಸಿಕೊಳ್ಳುವಿಕೆಯ ಬಗೆ ಹೇಗೆ?*

ಅಭೀಪ್ಸೆಯಿಂದ, ದೈವಿಶಕ್ತಿ ಸತ್ತೆಯಲ್ಲಿ ಕೆಲಸ ಮಾಡಲು ಅನುಮತಿ ಕೊಡುವ ಮೂಲಕ, ಆ ಶಕ್ತಿ ಅವರೋಹಣ ಮಾಡಿ ಸತ್ತೆಯಲ್ಲಿ ಕೆಲಸ ಮಾಡುವ ಮೂಲಕ.

**25 ಏಪ್ರಿಲ್ 1933**

*"ತೆರೆದುಕೊಳ್ಳುವಿಕೆ"(ಅರಳುವಿಕೆಯ) ಅರ್ಥವೇನು? ಅಂದರೆ ಶ್ರೀಮಾತೆಯವರಿಂದ ಯಾವುದನ್ನೂ ರಹಸ್ಯವಾಗಿಡದಿರುವಿಕೆಯೇನು?*

ಅದು ತೆರೆದುಕೊಳ್ಳುವಿಕೆಗೆ ಮೊದಲನೆ ಹೆಜ್ಜೆ.

*

**ಹೇಗೆ ತೆರೆದುಕೊಳ್ಳಬೇಕು**

*ಯಾವ ರೀತಿ ನಾವು "ತೆರೆದುಕೊಳ್ಳಬೇಕು"?*

ನಂಬಿಕೆಯಿಂದ ಮತ್ತು ಶಾಂತ ಮನಸ್ಸಿನಲ್ಲಿ ಶರಣಾಗುವುದರ ಮೂಲಕ.

*

ಸರಳವಾಗಿ ತೆರೆದುಕೊಳ್ಳುವುದೆಂದರೆ ಶ್ರೀಮಾತೆಯವರತ್ತ ನಮ್ಮನ್ನು ತಿರುಗಿಸಿಕೊಳ್ಳುವುದು ಆಗ ಆಕೆಯ ಶಕ್ತಿಗಳು ನಮ್ಮ ಸತ್ತೆಯಲ್ಲಿ ಯಾವುದೇ ನಿರಾಕರಣೆ ಮತ್ತು ಅಡೆತಡೆಯಿಲ್ಲದೆ ಕೆಲಸ ಮಾಡಲು ಅನುವು ಮಾಡಿಕೊಡುವುದು. ಮನಸ್ಸು ತನ್ನದೆ ಆದ ಕಲ್ಪನೆಯಲ್ಲಿ ಮುಳುಗಿದ್ದರೆ ಮತ್ತು ಆಕೆಯ ಪ್ರಕಾಶ ಮತ್ತು ಸತ್ಯವನ್ನು ತರಲು ನಿರಾಕರಣೆ ಮಾಡಿದರೆ, ಪ್ರಾಣ ತನ್ನ ಆಸೆಗೆ ಜೋತುಬಿದ್ದು ಶ್ರೀಮಾತೆಯ ಶಕ್ತಿ ನಿಜ ಪ್ರಾರಂಭ ಮತ್ತು ತುಡಿತಗಳು ಪ್ರವೇಶ ಮಾಡುವುದನ್ನು ತಡೆಹಿಡಿದರೆ. ಭೌತಿಕವು ತನ್ನ ಆಸೆ, ಹವ್ಯಾಸ ಮತ್ತು ಜಡತ್ವದಲ್ಲಿ ಮುಳುಗಿ ಮತ್ತು ಪ್ರಕಾಶ ಮತ್ತು ಶಕ್ತಿ ತನ್ನೊಳಗೆ ಕೆಲಸ ಮಾಡಲು ಬಿಡದೆ ಇದ್ದರೆ, ತೆರೆದುಕೊಂಡಿಲ್ಲವೆಂದೇ ಅರ್ಥ. ಎಲ್ಲಾ ಕ್ರಿಯೆಗಳಲ್ಲಿ ಒಂದೇ ಸಲಕ್ಕೆ ತೆರೆದುಕೊಳ್ಳುವುದು ಅಸಾಧ್ಯ ಆದರೆ ಎಲ್ಲಾ ಭಾಗಗಳಲ್ಲಿನ ಕೇಂದ್ರಿಯ ಭಾಗ ತೆರೆದುಕೊಳ್ಳಬೇಕು ಮತ್ತು ಒಂದು ಪ್ರಭಲವಾದ ಅಭಿಪ್ಸೆ ಅಥವಾ ಎಲ್ಲಾ ಭಾಗಗಳಲ್ಲಿ ಒಂದು ಸಂಕಲ್ಪ(ಬರೀ ಮನಸ್ಸಿನಲ್ಲಿ ಮಾತ್ರವಲ್ಲಾ)ದಿಂದ

ಶ್ರೀಮಾತೆಯ ಕೆಲಸವನ್ನು ಮಾಡಲು ಮಾತ್ರ ಪ್ರವೇಶಕ್ಕೆ ಒಪ್ಪುವುದು ಮಿಕ್ಕದ್ದೆಲ್ಲಾ ಹಂತ ಹಂತವಾಗಿ ಆಗುವುದು.

*

ಶ್ರೀಮಾತೆಗೆ ತೆರೆದುಕೊಳ್ಳುವುದೆಂದರೆ ಯಾವಾಗಲೂ ಶಾಂತವಾಗಿರುವುದು, ಸಂತೋಷವಾಗಿರುವುದು ಮತ್ತು ವಿಶ್ವಾಸದಿಂದಿರುವುದು. ಅಶಾಂತತೆಯಿಂದ, ದುಖಃದಿಂದ ಅಥವಾ ನಿರಾಶಾದಾಯಕದಿಂದ ಇರದೆ ಆಕೆಯ ಶಕ್ತಿ ನಿಮ್ಮಲ್ಲಿ ಕೆಲಸ ಮಾಡಲು ಅನುವು ಮಾಡಿಕೊಡಬೇಕು. ನಿಮಗೆ ಜ್ಞಾನವನ್ನು ಕೊಡಬೇಕು ನಿಮ್ಮನ್ನು ತೆರೆದುಕೊಳ್ಳಲು ಸಾಧ್ಯವಾಗದಿದ್ದರೆ, ಸತತವಾಗಿ ಅಭಿಪ್ಸೆ ಪಡಬೇಕು ಆದರೆ ಶಾಂತತೆಯಿಂದ ಆಗ ನೀವು ತೆರೆದುಕೊಳ್ಳಬಹುದು.

*

**ಸಾಧನೆ ಮಾಡುವುದಕ್ಕಾಗಿ ಶ್ರೀಮಾತೆಯವರಿಂದ ಮಾರ್ಗದರ್ಶನ**

*ದಿವ್ಯಮಾತೆಯವರೆ, ಈ ಕೆಳಗಿನ ಅಂಶಗಳ ಬಗ್ಗೆ ನೀವು ಬೆಳಕು ಚೆಲ್ಲಿರಿ ಈ ಹಾದಿಯಲ್ಲಿ ಹೋಗಲು ನನ್ನಲ್ಲಿ ಆ ಶಕ್ತಿ ಮತ್ತು ಸಾಮರ್ಥ್ಯ ಇದೆಯೆ?*

ಇದು ಪ್ರಶ್ನೆಯಲ್ಲಾ, ಪ್ರಶ್ನೆ ಯಾವುದೆಂದರೆ ಅವಶ್ಯಕವಾದ ಅಭಿಪ್ಸೆ ಇದೆಯೆನು, ದೃಢ ನಿರ್ಧಾರ ಮತ್ತು ಅವಿರತ ಯತ್ನ ಮತ್ತು ತೀವ್ರ ಮತ್ತು ಒತ್ತಾಯದ ನಿಮ್ಮ ಅಭಿಪ್ಸೆಯಿಂದ ನಿಮ್ಮ ಸತ್ತೆಯ ಎಲ್ಲಾ ಭಾಗಗಳನ್ನು ಈ ಕರೆಗೆ ಉತ್ತರಿಸುವ ಹಾಗೆ ಮಾಡಬೇಕು ಮತ್ತು ಈ ಪವಿತ್ರೀಕರಣದಲ್ಲಿ ಒಂದಾಗುವುದು.

*ನಾನು ಮನೆಗೆ ಬಂದ ಮೇಲೆ ನನ್ನ ಸಾಧನೆಯನ್ನು ಹೇಗೆ ಮುಂದುವರೆಸಬೇಕು?*

ನಿನ್ನಷ್ಟಕ್ಕೆ ಶಾಂತವಾಗಿರು ಮತ್ತು ಆ ಶಾಂತತೆಯಲ್ಲಿ ಶ್ರೀಮಾತೆಯನ್ನು ಕಂಡು ಸಂವೇದಿಸಬೇಕು.

*ನಾನು ಹೇಗೆ ಧ್ಯಾವಿಸಬೇಕು, ತೆರೆದುಕೊಳ್ಳುವಿಕೆ ಅಂದರೆ ಏನರ್ಥ? ನಾನು ಎಲ್ಲಿ ತೆರೆದುಕೊಳ್ಳಬೇಕು?*

ಒಂದು ಅಂತರಂಗದ ಶುದ್ಧತೆ ಮತ್ತು ಶ್ರೀಮಾತೆಯ ಪ್ರಭಾವವನ್ನು ಸ್ವಿಕರಿಸುವಿಕೆ ಹೃದಯದಿಂದ ಪ್ರಾರಂಭಿಸಿ.

*ನಾನು ತಲೆಯ ಮೇಲಿಂದಲೇ (ಪೂರ್ತಿ ತನ್ಮಯನಾಗದೇ) ಉನ್ನತ ಜೀವನಕ್ಕಾಗಿ ಅಭೀಪ್ಸೆ ಪಡುತ್ತೇನೆ; ಆದರೆ ಹಣೆಯ ಮದ್ಯಭಾಗಲ್ಲಿ ಭಾಗದಲ್ಲಿ ಯಾವಾಗಲೂ ಆಯಾಸಗೊಂಡಂತೆ ಅನಿಸುತ್ತದೆ, ನಾನು ಏನು ಮಾಡಬೇಕು?*

ನಿನ್ನಷ್ಟಕ್ಕೆ ನೀನೇ ಆಯಾಸ ಪಡಬಾರದು.

*ಅಂತರಾತ್ಮ ಹೇಗೆ ತಿಳಿದುಕೊಳ್ಳಬೇಕು? ಆಧಾರದಲ್ಲಿ ಅಂತರಾತ್ಮ ಮತ್ತು ಪ್ರಾಣದ ಅಸ್ತಿತ್ವವನ್ನು ಹೇಗೆ ತಿಳಿದುಕೊಳ್ಳಬೇಕು?*

ಅಭೀಪ್ಸೆಯ ಶಕ್ತಿಯಿಂದ ಮತ್ತು ಶ್ರೀಮಾತೆಯ ಅನುಗ್ರಹದಿಂದ, ಅಂತರಾತ್ಮ: ನಿಮ್ಮ ನಿಜ ಅಸ್ತಿತ್ವ ಹೃದಯದಲ್ಲಿರುವ ಅಸ್ತಿತ್ವ ಮತ್ತು ಶ್ರೀಮಾತೆಯ ಸ್ವಯಂ ಪ್ರಜ್ಞೆಯ ಕಿಡಿಅದು, ಪ್ರಾಣ: ಈ ಭಾಗದಿಂದ ಆಸೆ ಮತ್ತು ಹಸಿವು ಮತ್ತು ಕ್ರಿಯಾತ್ಮಕ ಚಟುವಟಿಕೆಗಳು ಪ್ರಾರಂಭವಾಗುತ್ತವೆ ಭೌತಿಕ ತಳಹದಿ ಹೊಕ್ಕಳ ಸುತ್ತ ಮುತ್ತ ಇರುತ್ತದೆ.

*ನನ್ನ ಕುಟುಂಬವೆಂದರೆ ನನ್ನ ಹೆಂಡತಿ ಇದಕ್ಕೆ ಒಪ್ಪುತ್ತಿಲ್ಲಾ ನಾನು ಏನು ಮಾಡಬೇಕು?*

ಬೇರ್ಪಡುವಿಕೆ.

*ನಾನು ಈಗ ಏನು ಓದಬೇಕು?*

ಶ್ರೀ ಅರವಿಂದರ ಪುಸ್ತಕಗಳನ್ನು.

ಶ್ರೀಮಾತೆಯವರಿಗೆ ತೆರೆದುಕೊಳ್ಳುವುದು ಹೇಗೆ ಈ ಕೆಳಗಿನವುಗಳು ಕೆಲವೊಂದು ವಿಧಾನಗಳು:

1) ನಿಮ್ಮನ್ನು ಸದಾಕಾಲ ನೆನಪಿಸಿಕೊಳ್ಳುವುದು ಅಥವಾ ಆವಾಗಾವಾಗ – ಒಳ್ಳೆಯದು

2) ನಿಮ್ಮ ಹೆಸರನ್ನು ಜಪದ ಮೂಲಕ ತೆಗೆದುಕೊಳ್ಳುವುದರಿಂದ – ಸಹಾಯಕ

3) ಧ್ಯಾನದ ಸಹಾಯದಿಂದ – ಧ್ಯಾನದ ಹವ್ಯಾಸವಿಲ್ಲದವರಿಗೆ ಬಹಳ ಕಷ್ಟಕರ.

4) ನಿಮ್ಮನ್ನು ಪ್ರೀತಿಮಾಡುವವರು ಮತ್ತು ನಿಮಗೆ ಗೌರವ ಕೊಡುವವರೊಂದಿಗೆ ಸಂವಾದ ಮಾಡುವುದರಿಂದ – ಅಪಾಯಕಾಯಕಾರಿ ಏಕೆಂದರೆ,

ಮಾತನಾಡುವಾಗ, ಕೆಲಸಲ ಅಸಂಭದ್ದ ಅಥವಾ ಕೆಲಸಕ್ಕೆ ಬಾರದ ಮಾತುಗಳನ್ನು ಆಡಬಹುದು.

5) ನಿಮ್ಮ ಪುಸ್ತಕಗಳನ್ನು ಓದುವುದರಿಂದ – ಒಳ್ಳೆಯದು.

6) ನಿಮ್ಮದೇ ಚಿಂತನದಲ್ಲಿ ಸದಾ ಕಾಲ ಇರುವದು – ಬಹಳ ಒಳ್ಳೆಯದು.

7) ಪ್ರಾಮಾಣಿಕ ಪ್ರಾರ್ಥನೆಯಿಂದ – ಒಳ್ಳೆಯದು.

*

ನಮ್ಮ ಮನುಷ್ಯ ಪ್ರಜ್ಞೆಯು ಕಿಡಕಿಗಳನ್ನು ಹೊಂದಿದ್ದು ಅವು ಅನಂತನೆಡೆಗೆ ತೆರೆದಿರುತ್ತದೆ. ಆದರೆ ಸಾಮಾನ್ಯವಾಗಿ ಮನುಷ್ಯರು ಬಹಳ ಜಾಗರುಕತೆಯಿಂದ ಅವನ್ನು ಮುಚ್ಚಿರುತ್ತಾರೆ. ಅವುಗಳನ್ನು ವಿಶಾಲವಾಗಿ ತೆರೆಯಬೇಕು ಮತ್ತು ಅನಂತನು ಸ್ವತಂತ್ರವಾಗಿ ನಮ್ಮೊಳಗೆ ಪ್ರವೇಶಿಸಿ ನಮ್ಮನ್ನು ರೂಪಾಂತರಿಸುತ್ತಾನೆ.

ಈ ಕಿಡಕಿಗಳನ್ನು ತೆರೆಯಲು ಎರಡು ನಿಯಮಗಳ ಅವಶ್ಯಕತೆಯಿದೆ:

1) ಪ್ರಭಲ ಅಭಿಪ್ಸೆ

2) ಹಂತಹಂತವಾಗಿ ಅಹಂನ್ನು ವಿಸರ್ಜಿಸುವುದು ಯಾರು ಪ್ರಾಮಾಣಿಕವಾಗಿ ಸಾಧನೆ ಮಾಡುತ್ತಾರೆಯೋ ಅವರಿಗೆ ದೈವಿ ಸಹಾಯದ ಭರವಸೆಯಿಂದ ನಮ್ಮಲ್ಲಿರುವ ಮತ್ತು ಎಲ್ಲಾ ವಸ್ತುಗಳಲ್ಲಿರುವ.

*

*ದೈವವನ್ನು ಕಂಡುಕೊಳ್ಳಲು ಇರುವ ಉತ್ತಮ ವಿಧಾನ ಯಾವುದು?*

ಅಭಿಪ್ಸೆ ಮತ್ತು ಮೌನ.

ಸೌರ ನರಗಳ ಕ್ಷೇತ್ರದಲ್ಲಿ ಏಕಾಗ್ರತೆ ಸಾಧಿಸಬೇಕು. ಸಾಧ್ಯವಾದರೆ, ದೈವವನ್ನು ಉದ್ದೇಶಿಸಿ ಒಂದು ಪ್ರಾರ್ಥನೆ: ನಾನು ನಿನಗೆ ಸೇರಿದ್ದೆನೆ ಮತ್ತು ನಾನು ನಿನ್ನನ್ನು ತಿಳಿದುಕೊಳ್ಳಲು ಬಯಸುತ್ತೆನೆ ಅದನ್ನೆ ನಾನು ಮಾಡುತ್ತೆನೆ ಬೇರೆನೂ ಅಲ್ಲಾ.

*

ಯಾವುದು ವೇಗವಾಗಿ ದೈವದ ಕಡೆಗೆ ಮತ್ತು ದೈವದ ಉದ್ದೆಶವನ್ನಷ್ಟೆ ಈಡೇರಿಸಲು ಸಹಾಯ ಮಾಡುತ್ತದೆಯೋ ಅದನ್ನಷ್ಟೆ ಪ್ರೋತ್ಸಾಹಿಸಬೇಕು.

*

## ಶ್ರೀಮಾತೆಗೆ ತೆರೆದುಕೊಳ್ಳುವಿಕೆ ಮತ್ತು ಪೂರ್ಣಯೋಗ

> *ನಾನು ಯೋಗ ಮಾಡುತ್ತಿದ್ದೆನೆಂದು ನನಗೆ ಗೊತ್ತಾಗುತ್ತಿಲ್ಲಾ ನಾನು ಪೂರ್ಣ ಯೋಗ ಮಾಡುತ್ತಿದ್ದೆನೆಂದು ನನಗೆ ಗೊತ್ತಾಗುತ್ತಿಲ್ಲಾ ನಾನು ಪೂರ್ಣ ಯೋಗ ಮಾಡುತ್ತಿದ್ದೆನೆಂದು ಅನ್ನಬಹುದೇ?*

ಯಾರೆಲ್ಲಾ ಶ್ರೀಮಾತೆ ಕಡೆಗೆ ತಿರುಗಿಕೊಂಡಿದ್ದಾರೋ ಅವರೆಲ್ಲಾ ನನ್ನ ಯೋಗವನ್ನು ಮಾಡುತ್ತಿದ್ದಾರೆ. ಪೂರ್ಣ ಯೋಗವನ್ನು ಅದರ ಎಲ್ಲಾ ಆಯಾಮಗಳನ್ನು ಸ್ವಂತ ಪ್ರಯತ್ನದಿಂದ ಮಾಡುತ್ತೆನೆನ್ನುವುದು ದೊಡ್ಡ ತಪ್ಪು ತಿಳುವಳಿಕೆಯೆನಿಸುತ್ತದೆ. ಮಾನವರಿಂದ ಅದು ಅಸಾಧ್ಯ ನನ್ನನ್ನು ಏನು ಮಾಡಬೇಕೆಂದರೆ ನನ್ನನ್ನು ಶ್ರೀಮಾತೆಯ ಕರದಲ್ಲಿ ಒಪ್ಪಿಸಿಕೊಳ್ಳಬೇಕು ಮತ್ತು ಸೇವೆ, ಭಕ್ತಿ ಅಭಿಪ್ಸೆ ಮೂಲಕ ಆಕೆಗೆ ತೆರೆದುಕೊಳ್ಳಬೇಕು; ತದನಂತರ ಶ್ರೀಮಾತೆ ತನ್ನ ಪ್ರಕಾಶ ಮತ್ತು ಶಕ್ತಿಯ ಮೂಲಕ ನಮ್ಮಲ್ಲಿ ಕೆಲಸ ಮಾಡುವ ಮೂಲಕ ನಮ್ಮಲ್ಲಿ ಸಾಧನೆ ಆಗುತ್ತದೆ. ಪೂರ್ಣಯೋಗಿ ಆಗಬೇಕೆಂಬುವ ಹಂಬಲ ಅಥವಾ ಸುಪ್ರಮಾನಸ ಜೀವಿ ಅಂದುಕೊಳ್ಳುವುದು ಮತ್ತು ಆ ದಾರಿಯಲ್ಲಿ ನಾನು ಎಷ್ಟರಮಟ್ಟಿಗೆ ಮುಟ್ಟಿದ್ದೇನೆ ಎಂದು ನನ್ನಷ್ಟಕ್ಕೆ ಅಂದುಕೊಳ್ಳುವುದು ಕೂಡಾ ಪ್ರಮಾದವಾಗುತ್ತದೆ. ಸರಿಯಾದ ನಿಲುವು ಏನೆಂದರೆ ಶ್ರೀಮಾತೆಗೆ ಪ್ರಾರ್ಥಿಸಿ ಆಕೆಗೆ ಅರ್ಪಿಸಿಕೊಂಡು ಮತ್ತು ಆಕೆಯ ಅಭಿಲಾಷೆ ಅನುಸಾರವಾಗಿ ನಾವೇನಾಗಬೇಕೆಂದು ಆಕೆಯೆ ನಿರ್ಧರಿಸಲೆಂದು ಮಿಕ್ಕದ್ದೆಲ್ಲ ಶ್ರೀಮಾತೆ ನಿರ್ಧರಿಸಿ ಮತ್ತು ನಮ್ಮಲ್ಲಿ ಮಾಡಲಿ.

**ಏಪ್ರಿಲ್ 1929**

ನಿನ್ನ ಪತ್ರಕ್ಕೆ ಉತ್ತರವಾಗಿ ಶ್ರೀ ಅರವಿಂದರು ನಿನ್ನ ಹೃದಯದಲ್ಲಿ ಧ್ಯಾನಿಸುತ್ತಾ ಶ್ರೀಮಾತೆಯವರನ್ನು ಕರೆಯಬೇಕು – ಆಕೆಯನ್ನು ನೆನೆಯುತ್ತಾ ಮತ್ತು ಸಮರ್ಪಿಸುತ್ತಾ ಅಥವಾ ನಿಮ್ಮ ಜೀವನ ಆಲೋಚನೆ ಮತ್ತು ಕ್ರಿಯೆಗಳನ್ನೆಲ್ಲಾ ಅರ್ಪಣೆ ಮಾಡಬೇಕು. ನೀನು ಬಯಸಿದರೆ ಆಕೆಯ ಹೆಸರ ಮೇಲೆ ಜಪ ಮಾಡಬೇಕು. ನಿನ್ನ ಸತ್ತೆಯನ್ನು ಶುದ್ದಗೊಳಿಸಲು ಮತ್ತು ನಿನ್ನ ಪ್ರಕೃತಿಯನ್ನು ಬದಲಾಯಿಸಲು ಆಕೆಯನ್ನು ಕರೆಯಬಹುದು.

ನಿನ್ನೊಳಗೆ ದೈವವನ್ನು ಸಂವೇದಿಸುವುದೇ ನಿನಗೆ ಸತ್ಯ, ಶ್ರೀಮಾತೆಗೆ ತೆರೆದುಕೊಳ್ಳಿರಿ ಮತ್ತು ನಿಮ್ಮ ಎಲ್ಲಾ ಕ್ರಿಯೆಗಳಲ್ಲಿ ಆಕೆ ಇದ್ದಾಳೆಂಬ

ಅರಿವಾಗುವವರೆಗೆ ದೈವಕ್ಕಾಗಿ ಕೆಲಸ ಮಾಡಬೇಕು. ಇಲ್ಲಿ ಭೌತಿಕ ಸಾನಿದ್ಯ ಮಾತ್ರ ಸಾಕಾಗವುದಿಲ್ಲ; ದೈವೀ ಸಾನಿಧ್ಯ ನಿನ್ನ ಹೃದಯದಲ್ಲಿ ಮತ್ತು ದೈವೀ ಮಾರ್ಗದರ್ಶನ ನಿನ್ನ ಕ್ರಿಯೆಗಳಲ್ಲಿ ಈ ದೈವೀ ಸಾನಿಧ್ಯದ ಪ್ರಜ್ಞೆ ನಿನ್ನಲ್ಲಿ ಇರಬೇಕು ಇದನ್ನು ಸುಲಭವಾಗಿ, ತೀವ್ರವಾಗಿ, ಆಳವಾಗಿ, ನಿನ್ನ ಅಂತರಾತ್ಮ ಎಚ್ಚೆತ್ತಿದ್ದರೆ ಸಂವೇದಿಸಬಹುದು; ಒಂದು ಸಲ ಅಂತರಾತ್ಮ ಸಂವೇದಿಸಿದರೆ, ಅದು ಮನಸ್ಸಿಗೆ ಮತ್ತು ಪ್ರಾಣಕ್ಕೆ ಕೂಡಾ ವಿಸ್ತರಿಸಬಹುದು.

**16 ಫೆಬ್ರವರಿ 1932**

ಅಥವಾ ನೀನು ಏಕಾಗ್ರತೆಯಿಂದ ನಿಮ್ಮ ಮೇಲಿರುವ(ಅದು ಯಾವಾಗಲೂ ಅಲ್ಲೆ ಇರುವುದು)ದನ್ನು ಕೆಳಗೆ ಕರೆಯಿರಿ ಮೊದಲಿಗೆ ಆಕೆಯ ಶಾಂತಿ ಮತ್ತು ನೆಮ್ಮದಿ, ನಂತರ ಆಕೆಯ ಶಕ್ತಿ, ಮತ್ತು ಬೆಳಕು (ಜ್ಞಾನ) ಮತ್ತು ಆಕೆಯ ಆನಂದವನ್ನು ಅದು ಯಾವಾಗಲೂ ತಲೆಯ ಮೇಲೆಯೆ ಇರುತ್ತದೆ – ಆದರೆ ಮನುಷ್ಯನ ಮನಸ್ಸಿಗೆ ಅತಿಚೇತನವಾಗಿರುತ್ತದೆ – ಅಭಿಪ್ಸೆಯಿಂದ ಮತ್ತು ಏಕಾಗ್ರತೆಯಿಂದ ಅದು ಪ್ರಜ್ಞೆಗೆ ಬರುತ್ತದೆ ಮತ್ತು ಆಧಾರ ಅದಕ್ಕೆ ತೆರೆದುಕೊಳ್ಳುತ್ತದೆ ಹಾಗಾಗಿ ಅದು ಇಳಿದು ಬರುತ್ತದೆ ಮತ್ತು ಮನಸ್ಸಿನೊಳಗೆ, ಪ್ರಾಣದೊಳಗೆ ಮತ್ತು ದೇಹದೊಳಕ್ಕೆ ಪ್ರವೇಶಿಸುತ್ತದೆ.

ನಿಮ್ಮನ್ನು ತೆರೆದಿಟ್ಟುಕೊಳ್ಳಿ, ಶ್ರೀಮಾತೆಯನ್ನು ಯಾವಾಗಲೂ ನೆನಪಿಸಿಕೊಳ್ಳಿ – ಆಕೆಯ ಸಹಾಯಕ್ಕಾಗಿ ಕರೆಯಿರಿ ಮತ್ತು ನಿಮ್ಮ ಕೆಲಸದಲ್ಲಿ ಮಾರ್ಗದರ್ಶನ ಪಡೆಯಿರಿ ನೀವು ಯಾವಾಗಲೂ ಶಾಂತ ರೀತಿಯಿಂದ ಇರುವಂತಹ ಸ್ಥಿತಿಗೆ ತಲುಪುವುದು ಮತ್ತು ವಿಶ್ರಾಮದಲ್ಲಿ ಧ್ಯಾನದಲ್ಲಿ ಕೂಡ ಸಾಧನೆ ಮಾಡಬೇಕು.

ತೆರೆದುಕೊಳ್ಳುವಿಕೆ ಮೊದಲನೆ ಸಲಕ್ಕೆ ಸಂಪೂರ್ಣವಾಗುವುದಿಲ್ಲಾ – ಸತ್ತೆಯ ಒಂದು ಭಾಗ ತೆರೆದುಕೊಳ್ಳುತ್ತದೆ, ಬೇರೆ ಭಾಗಗಳ ಪ್ರಜ್ಞೆಯು ಇನ್ನು ಮುಚ್ಚಿರುತ್ತದೆ ಅಥವಾ ಅರ್ಧ ಮಾತ್ರ ತೆರೆದಿರುತ್ತದೆ. ನಿನ್ನ ಕ್ರಿಯೆಗಳನ್ನು ಆಕೆಯ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಪ್ರಾರ್ಥಿಸಬೇಕು. ಪ್ರೀತಿಸಿ ಮತ್ತು ಪೂಜಿಸಿ ಪೂರ್ತಿ ತೆರೆದುಕೊಳ್ಳುವುದರಿಂದ ಶ್ರೀಮಾತೆ ಪ್ರಜ್ಞೆಗೆ ಬರುವುದರ ಅವಶ್ಯಕತೆಯಿದೆ. ಇದೆಲ್ಲಾ ತೆರೆಯುವಿಕೆಯನ್ನು ತರುತ್ತವೆ. ಸಮಯ ತೆಗೆದುಕೊಂಡರೂ ಸಹಿತ ನೀನು ಖಿನ್ನತೆಗೊಳಗಾಗಬಾರದು, ನಿರಾಶೆಗೊಳ್ಳಬಾರದು ಅಥವಾ ಪ್ರತಿಭಟಿಸಬಾರದು

ಇವೆಲ್ಲಾ ತೆರೆಯುವಿಕೆಯ ದಾರಿಯಲ್ಲಿ ಅಡ್ಡಿಯಾಗುತ್ತವೆ. ಎಲ್ಲಾ ರೀತಿಯಿಂದ ನಿನ್ನನ್ನು ಶ್ರೀಮಾತೆಗೆ ತೆರೆದುಕೊಂಡಿರಬೇಕು. ನಿರ್ಣಾಯಕ ಅನುಭವಕ್ಕಾಗಿ ಸ್ವಭಾವದ ತಯಾರಿಗಾಗಿ ಯಾವಾಗಲೂ ಸಮಯವನ್ನು ತೆಗೆದುಕೊಳ್ಳುತ್ತದೆ ಮತ್ತು ಸತತವಾಗಿ ಸ್ವಯಂ ತೆರೆಯುವಿಕೆಯಾಗಬೇಕು ತತ್ಕ್ಷಣದ ಪರಿಣಾಮಕ್ಕಾಗಿ ಯಾವುದೇ ನಿರುತ್ಸಾಹ ಅಥವಾ ಅಸಹನೆ ತೋರದೆ ಸತತವಾದ ನೆನೆಯುವಿಕೆಯಿಂದ ಸತ್ತೆಯು ಸಂಪೂರ್ಣವಾದ ತೆರೆಯುವಿಕೆಗೆ ತಯಾರಾಗುತ್ತದೆ ಹೃದಯದ ತೆರೆಯುವಿಕೆಯಿಂದ ಆಕೆಯ ಸಾನಿಧ್ಯದ ಸಂವೇದನೆಯು ಪ್ರಾರಂಭ ಶುರುವಾಗುತ್ತದೆ. ಮತ್ತು ಆಕೆಯ ಶಕ್ತಿಗೆ ತೆರೆದುಕೊಳ್ಳುವುದರಿಂದ ಉನ್ನತ ಪ್ರಜ್ಞೆಯ ಶಕ್ತಿ ದೇಹದೊಳಕ್ಕೆ ಇಳಿದು ಬರುತ್ತದೆ ಮತ್ತು ಸಂಪೂರ್ಣ ಸ್ವಭಾವವನ್ನು ಬದಲಾಯಿಸಲು ಕೆಲಸ ಮಾಡುತ್ತದೆ.

**7 ಆಗಸ್ಟ್ 1934**

ನನಗೆ ಏಕಾಗ್ರತೆಗೊಳ್ಳಲಾಗುವುದಿಲ್ಲಾ ಮತ್ತು ಧ್ಯಾನಮಾಡಲಾಗುವುದಿಲ್ಲಾ, ನಾನು ಸುಮ್ಮನೆ ಶಾಶ್ವತವಾಗಿ ಶ್ರೀಮಾತೆಯ ಮಡಿಲಿನಲ್ಲಿ ಮಲಗಿದ ಹಾಗೆ ಮತ್ತು ಅಲ್ಲಿಂದ ಆಕೆ ಕಳುಹಿಸಿದಾಗ ಹೊರಹೋದ ಹಾಗೆ.

ಇದು ಒಂದು ಒಳ್ಳೆಯ ಏಕಾಗ್ರತೆಯ ವಿಧಾನದ ಸಾಧ್ಯತೆ.

**12 ಆಗಸ್ಟ್ 1935**

*

ಎಲ್ಲವನ್ನೂ ಶ್ರೀಮಾತೆಗೆ ಬಿಟ್ಟುಕೊಡುವುದೇ ನಿಜವಾದ ನಿಲುವು ಮತ್ತು ಆಕೆಯಲ್ಲಿ ಸಂಪೂರ್ಣವಾದ ನಂಬಿಕೆ ಇರಬೇಕು ಮತ್ತು ಗುರಿಯ ದಾರಿಯಲ್ಲಿ ಮುನ್ನಡೆಸಲು ಆಕೆಗೆ ಒಪ್ಪಿಸಿಕೊಳ್ಳಬೇಕು.

**2 ಮಾರ್ಚ್ 1936**

*

ನೀನು ನನಗೆ ಕೇಳಿದ್ದಿಯಾ "ಅಂತರಾತ್ಮದ ಕ್ರಿಯೆಯ ಬಗ್ಗೆ ಅರಿವಿಲ್ಲದಿದ್ದಾಗ ಅದಕ್ಕೆ ಹೇಗೆ ಶರಣಾಗತವಾಗಬೇಕು"?

ಮೇಲಿನ ಶಕ್ತಿಗೆ ಶರಣಾಗತ ಆದ ಹಾಗೆ ಇದನ್ನು ನಾನು ಮಾಡುತ್ತೇನೆ. ನಾನು ಸುಮ್ಮನೆ ಒಂದು ಶಕ್ತಿ ಮೇಲಿದೆಯೆಂದು ಕಲ್ಪನೆ ಮಾಡುತ್ತೇನೆ ಅಥವಾ

ಒಂದು ಅಂತರಾತ್ಮದ ಸತ್ತೆ ಹೃದಯ ಕೇಂದ್ರದಲ್ಲಿ ಆ ರೀತಿ ಕಲ್ಪಿಸಿಕೊಂಡು, ನನ್ನನ್ನು ಅದಕ್ಕೆ ಶರಣಾಗಿಸಿಕೊಳ್ಳುತ್ತೇನೆ.

ನಂತರ ಅದೊಂದು ಶರಣಾಗತಿಯ ಸಂಕಲ್ಪ. ಆದರೆ ಶರಣಾಗತಿಯು ಶ್ರೀಮಾತೆಗೆ ಮಾತ್ರ ಶಕ್ತಿಗೂ ಕೊಡಲಿಲ್ಲಾ, ಆದರೆ ಶ್ರೀಮಾತೆಗೆ ಮಾತ್ರ ಆದರೆ ಈಗ ಸದ್ಯಕ್ಕೆ ಅಂತರಾತ್ಮಕ್ಕೆ ಶರಣಾಗುವುದು ಅವಶ್ಯಕತೆ ಇದೆಯೆನೂ ಅಂತ ನನಗೆ ಗೊತ್ತಿಲ್ಲಾ ನನ್ನ ಸತ್ಯೆ ಶಕ್ತಿಗೆ ಮತ್ತು ಅಂತರಾತ್ಮಕ್ಕೆ ಏಕಕಾಲದಲ್ಲಿ ಶರಣಾಗತವಾಗುವಷ್ಟು ಇನ್ನೂ ಸಮರ್ಥವಾಗಿಲ್ಲಾ.

ಈ ಎಲ್ಲಾ ಗೊಂದಲಗಳ ಅವಶ್ಯಕತೆಯಿಲ್ಲಾ ಅಂತರಾತ್ಮ ಪ್ರಕಟಗೊಂಡರೆ, ಅದು ನಿಮ್ಮನ್ನು ಅದಕ್ಕೆ ಶರಣಾಗತಿ ಆಗಲೆಂದು ಬಯಸುವುದಿಲ್ಲಾ, ಆದರೆ ಶ್ರೀಮಾತೆಗೆ ಶರಣಾಗಲಿ ಎನ್ನುತ್ತದೆ.

**4 ಅಕ್ಟೋಬರ್ 1936**

**ಏನಾದರು ಕೆಟ್ಟದ್ದು ಘಟಿಸಿದರೆ ಒಂದು ಸಲ ನನ್ನ ಹೆಸರನ್ನು ಪುನರಾವರ್ತಿಸಿರಿ – "ಮಾ" "ಮಾ" ಅದು ಒಂದು ತರಹದ ಧ್ಯಾನವೇ ಹೌದು ನೀವು ಯಾವಾಗಲಾದರು ದೈವದ ಹೆಸರನ್ನು ಪುನರಾವರ್ತಿಸಿದರೆ, ನೀವು ಆವಾಗಲೆಲ್ಲಾ ದೈವವನ್ನು ನಿಮ್ಮ ಹೃದಯದಲ್ಲಿ ಸಂವೇದಿಸಬೇಕು, – ಅಲ್ಲಿ ನೀವು ಮಧುರತೆಯನ್ನು ಮತ್ತು ಶಾಂತಿಯನ್ನು ಸಂವೇದಿಸಬಹುದು.**

**ಶ್ರೀಮಾತೆಯೆ ಗುರು ಮತ್ತು ಮಾರ್ಗದರ್ಶಕಿ**

ಮಾನವನ ಆತ್ಮ ಮತ್ತು ಸ್ವಭಾವವನ್ನು ಒಂದು ಮಾನಸಿಕ ನಿಯಮಗಳ ಮೂಲಕ ಎಲ್ಲರನ್ನು ಒಂದೇ ರೀತಿಯಾಗಿ ವ್ಯವಹರಿಸಲು ಬರುವುದಿಲ್ಲ; ಹಾಗಿದ್ದರೆ ಗುರುವಿನ ಅವಶ್ಯಕತೆ ಇರುತ್ತಿರಲಿಲ್ಲಾ, ಎಲ್ಲರೂ ತಮ್ಮ ಯೋಗದ ನಿಯಮಗಳ ಪಟವನ್ನು ಹಾಕಿಕೊಂಡು ಅವುಗಳನ್ನು ತಾಲಿಮು ಮಾಡುತ್ತಾ ಪರಿಪೂರ್ಣ "ಸಿದ್ದ"ರಾಗುತ್ತಿದ್ದರು, ಯಾವ ರೀತಿ ಸಾಂಡೋವನ ಸಾಮುವಿನ ನಿಯಮಗಳನ್ನು ಪಾಲಿಸಿದ ಹಾಗೆ.

*

ನಾನು ನಿಮ್ಮೊಳಗಿನ ಬಾಗಿಲನ್ನು ಬಹಳ ಜಾಗರುಕತೆಯಿಂದ ತೆಗೆಯುತ್ತೇನೆ. ಇದರಿಂದ ನಿಮ್ಮೊಳಗಿನ ಒಂದು ಸಣ್ಣ ಪ್ರಜ್ಞೆಯ ಚಲನೆಗಾಗಿ, ಮುಚ್ಚಿದ ಬಾಗಿಲಿನ

ಮುಂದೆ ಬಹಳ ಸಮಯದವರೆಗೆ ನೀವು ಕಾಯಬೇಕಾಗಿಲ್ಲಾ, ಆ ಬಾಗಿಲಿನ ಕೀಲಿ ನಿಮ್ಮ ಬಳಿ ಇಲ್ಲಾ ಮತ್ತು ಹೇಗೆ ತೆಗೆಯಬೇಕೆಂದು ಗೊತ್ತಿಲ್ಲಾ ಬಾಗಿಲು ತೆಗೆದಿದೆ, ನೀವು ಆ ದಿಕ್ಕನೆಡೆಗೆ ನೋಡಬೇಕಷ್ಟೆ ನೀವು ಅದಕ್ಕೆ ಬೆನ್ನು ತಿರುಗಿಸಬಾರದು ಯಾರದೇ ಗುರುವಾಗಲು ನಾನು ಉತ್ಸುಕವಾಗಿಲ್ಲಾ. ನನಗೆ ಎಲ್ಲರ ಮಾತೆಯೆಂಬ ಸಂವೇದನೆ ಬಹಳ ಸಹಜ ಸ್ವಭಾವವೆನ್ನಿಸುತ್ತದೆ ಮತ್ತು ಅವರನ್ನೆಲ್ಲಾ ಪ್ರೀತಿಯ ಶಕ್ತಿಯಿಂದ ಶಾಂತವಾಗಿ ಪ್ರಗತಿಯೆಡೆಗೆ ಕರೆದೊಯ್ಯುವುದು.

*ನನ್ನ ಮತ್ತು ನಿಮ್ಮ ಸಂಬಂಧವನ್ನು ಹೇಗೆ ಕಲ್ಪಿಸುತ್ತಿರಿ?*

ನೀನು ವಿಶ್ವಮಾತೆಯ ಮಗುವಲ್ಲವೆ?

*

ನಾನು ಯಾರಿಗಾದರು ಧೀಕ್ಷೆ ಕೊಟ್ಟಿದ್ದೆನೆಂದು ಹೇಳಿದರೆ, ನಾನು ಆ ಮನುಷ್ಯನಿಗೆ ನನ್ನನ್ನು ನೋಡಲು, ಸಂವೇದಿಸಲು ಮತ್ತು ನಾನು ಏನಿದ್ದೇನೊ ಅದನ್ನು ತಿಳಿಯಲು ಸಮರ್ಥನಿದ್ದಾನೆ.

*

**ಭೌತಿಕ ಸಾಮಿಪ್ಯತೆ ಮತ್ತು ಅಂತರಂಗದ ಸಾಮಿಪ್ಯತೆ**

ನಾನು ನಿನ್ನನ್ನು ನೋಡಲಿ ಅಥವಾ ನೋಡದಿರಲಿ ಅದೇನು ಸಹಾಯ ಮಾಡಲು ವ್ಯತ್ಯಾಸವಾಗುವುದಿಲ್ಲಾ. ಅದು ಯಾವಾಗಲೂ ಇರುತ್ತದೆ.

*

ನೀನು ಎರಡು ಹುಸಿತನಗಳನ್ನು ನಿನ್ನ ಮನಸ್ಸಿನಿಂದ ತೆಗೆದು ಹಾಕಲೇಬೇಕು.

1) ನೀನು ಏನನ್ನು ನನ್ನಿಂದ ಪಡೆಯತ್ತಿಯೋ ಅದು ಬೇರೆಯವರಲ್ಲಿ ಇದೆಯೋ ಅಥವಾ ಇಲ್ಲವೋ ಅದೇನು ಅಲ್ಲಾ. ನನ್ನ ಸಂಬಂಧ ನಿನ್ನ ಮೇಲೆ ಮಾತ್ರ ಆಧಾರವಾಗಿರುತ್ತದೆ; ಬೇರೆಯಾರಾದರು ಇದ್ದರೂ ಕೂಡ ನೀನು ಹೆಚ್ಚಿಗೇನು ಪಡೆಯುವುದಿಲ್ಲಾ.

2) ಭೌತಿಕ ಸಾಮಿಪ್ಯತನ ಮಾತ್ರ ಪ್ರಗತಿಗಾಗಿ ಒಂದು ಅನಿವಾರ್ಯತೆ–ಯೆನ್ನುವುದು ಬಹಳ ತಪ್ಪು ತಿಳುವಳಿಕೆ. ಅಂತರಂಗದ ಸಂಪರ್ಕ ಸ್ಥಾಪನೆ, ನಿಮ್ಮಿಂದ ಮಾಡಲಾಗದಿದ್ದರೆ ನಿಮಗೆ ಏನೂ ಆಗಲಾರದು, ಆ ಸಂಪರ್ಕ ಸಾಧಿಸದೆ ಹೋದರೆ ನೀವು ಬೆಳಗಿನಿಂದ ರಾತ್ರಿಯವರೆಗೂ ನನ್ನೊಟ್ಟಿಗೆ ಇದ್ದರೂ

ಮತ್ತು ಕೂಡ ನನ್ನನ್ನು ನೀವು ನಿಜವಾಗಿ ಭೇಟಿಯಾಗಿಲ್ಲವೆಂದು ಅರ್ಥ. ಅದು ಅಂತರಂಗದ ತೆರೆಯುವಿಕೆಯಿಂದ ಮತ್ತು ಸಂಪರ್ಕದಿಂದ ನಿಮಗೆ ನನ್ನ ಸಾನಿಧ್ಯದ ಅರಿವಾಗುತ್ತದೆ.

*

*ಈಗಾಗಲೆ ಆಕೆಯ ಮತ್ತು ಆಶ್ರಮವಾಸಿಗಳ ನಡುವೆ ಇರುವ ಭೌತಿಕ ದೂರವನ್ನು ಇನ್ನಷ್ಟು ವಿಶಾಲಗೊಳಿಸುತ್ತದೆಯೋ? ಆಕೆಯ ನಿರಂತರ ಮಾರ್ಗದರ್ಶನವಿಲ್ಲದೆ ಆಶ್ರಮದ ಕೆಲಸಗಳು ನಿಭಾಯಿಸಲ್ಪಡುವವೇ? ಸಾಧಕರ ನಿಜ ಹಿತಕ್ಕೆ ಆಕೆಯ ನಿವೃತ್ತಿಯಿಂದ ಧಕ್ಕೆ ಬರುವುದಿಲ್ಲವೇ? ಆಕೆ ಮೊದಲು ತೆಗೆದುಕೊಳ್ಳುತ್ತಿದ್ದ ಕಾಳಜಿಯಂತೆ ಈಗಲೂ ಕೂಡಾ ಅದೇ ರೀತಿಯ ಕಾಳಜಿ ತೆಗೆದುಕೊಳ್ಳುತ್ತಾರೋ?*

ಪ್ರತಿಯೊಬ್ಬರೂ ತಾವು ಏನಾಗಿದ್ದಾರೋ ಅದನ್ನೇ ವ್ಯಕ್ತಪಡಿಸುತ್ತಾರೆ ಎಂಬುದನ್ನು ನೀವು ಮರೆಯಬಾರದು. ಅನುಗ್ರಹ ಮತ್ತು ಆಶೀರ್ವಾದ ಈಗಾಗಲೆ ನಿಮ್ಮೊಟ್ಟಿಗೆ ಇವೆ. ಯಾರು ನನ್ನ ಶಕ್ತಿಯ ಮೇಲೆ ಆಧಾರವಾಗಿದ್ದಾರೋ ಅವರಿಂದ ಒಂದು ದಿನ ಕೂಡಾ ನನ್ನ ಸಾಮಾನ್ಯ ಕಾಳಜಿಯನ್ನು ನಿಲ್ಲಿಸಿಲ್ಲ.

**22 ಮೇ 1962**

*

ಕೆಲಸ ಮಾಡಿರಿ – ನನ್ನ ಸ್ಫೂರ್ತಿ ಮತ್ತು ಮಾರ್ಗದರ್ಶನ ಯಾವಾಗಲೂ ನಿಮ್ಮ ಜೊತೆ ಇರುತ್ತದೆ ಮತ್ತು ಯಾವಾಗ ಅವಶ್ಯಕತೆ ಇದೆ. ಆಗ ಭೌತಿಕವಾಗಿ ನಿನ್ನನ್ನು ನೋಡುತ್ತೇನೆ. ಆದರೆ ಈ ಅವಶ್ಯಕತೆಯನ್ನು ಕಡಿಮೆ ಮಾಡಲು ನಾನು ಕೆಲಸ ಮಾಡುತ್ತಿದ್ದೇನೆ. ಏಕೆಂದರೆ ಪರಿಪೂರ್ಣವಾದ ಕೆಲಸಕ್ಕಾಗಿ ಅಂತರಂಗದ ಮಾರ್ಗದರ್ಶನ ಪಡೆದುಕೊಳ್ಳುವುದು ಅನಿವಾರ್ಯವಾಗಿದೆ.

**21 ಡಿಸೆಂಬರ್ 1964**

ನೀವು ಈಗ ಇಲ್ಲಿದ್ದೀರಿ. ನೀವು ಒಂದೇ ಕೆಲಸ ಮಾಡಬೇಕೆಂದರೆ ಹಿಂದಿನದನ್ನು ಮರೆತುಬಿಡುವುದು ಮತ್ತು ನಿಮ್ಮ ಇಲ್ಲಿನ ಕೆಲಸದ ಮೇಲೆ ಏಕಾಗ್ರತೆ ವಹಿಸಿ ಈ ಕ್ಷಣಕ್ಕೆ ನಿಮ್ಮನ್ನು ನಿಯಮಿತವಾಗಿ ನೋಡಲಾಗುವುದಿಲ್ಲ. ಆದರೆ ನೀವು ಅಂತರಂಗದ ಸಂಪರ್ಕ ಸಾಧಿಸಲು ಕಲಿಯಬೇಕು (ನಾನು ನಿವೃತ್ತಿ ಹೊಂದಲು

ಇದು ಒಂದು ಮುಖ್ಯ ಕಾರಣ) ಮತ್ತು ನಾನು ಯಾವಾಗಲೂ ನಿಮ್ಮ ಜೊತೆ ಇದ್ದು ನಿಮಗೆ ಮಾರ್ಗದರ್ಶನ ಮಾಡುತ್ತಾ, ನಿಮಗೆ ಸಹಾಯ ಮಾಡುತ್ತಾ ಮತ್ತು ಸರಿಯಾದ ರೀತಿಯಲ್ಲಿ ಇಲ್ಲಿ ಸಾಧನೆ ಮಾಡಲು ಇದಕ್ಕಿಂತ ಉತ್ತಮವಾದ ಸ್ಥಿತಿ ನಿಮಗೆ ಸಿಗಲಾರದು.

*

ಕೆಲವೊಂದು ಆಲೋಚನೆಗಳು, ಕೆಲವೊಂದು ಅನಿಸಿಕೆಗಳು ಮತ್ತು ಕ್ರಿಯೆಗಳು ಜನರನ್ನು ನನ್ನಿಂದ ದೂರ ಕೊಂಡೊಯ್ಯುತ್ತವೆ ಅಥವಾ ನನ್ನ ಮತ್ತು ಕೆಲವೊಬ್ಬರ ಮಧ್ಯೆ ಭಿನ್ನತೆಯನ್ನು ಸೃಷ್ಟಿ ಮಾಡುತ್ತವೆ ಭೌತಿಕ ಸಾಮಿಪ್ಯ ಇದ್ದರೂ ಕೂಡ ಎಂದು ಹೇಳುವುದು ಬಹಳ ಸರಿ ಎನಿಸುತ್ತದೆ.

*

*ನಾವು ನಿಮ್ಮ ಸಾನಿಧ್ಯದಿಂದ ಬೇರೆಯಾಗಿದ್ದೇವೆಂಬ ಸಂವೇದನೆಯಾಗುತ್ತಿದೆ; ಆದರೆ ಈ ಭಿನ್ನತೆ ಒಂದು ಭ್ರಮೆ ಮಾತ್ರವೆ, ಹೌದಲ್ಲವೆ ನನ್ನ ಶ್ರೀಮಾತೆ?*

ಅಲ್ಲಿ ಸತ್ಯವಾದ ಭಿನ್ನತೆಯಿಲ್ಲಾ, ಆದರೆ ಪ್ರಜ್ಞೆ ತಪ್ಪು ನಿಲುವನ್ನು ತಾಳಿದರೆ, ಅದು ತನ್ನನ್ನು ಒಂದು ಸ್ಥಿತಿಗೆ ತಲುಪಿ ಅಲ್ಲಿ ಅದಕ್ಕೆ ನಾನು ಬೇರೆಯಾಗಿದ್ದೆನೆಂಬ ಸಂವೇದನೆ ಉಂಟಾಗುತ್ತದೆ.

*

*ನಿನ್ನ ಜೊತೆ ಭೌತಿಕ ಸಂಪರ್ಕವನ್ನು ತಪ್ಪಿಸಿಕೊಳ್ಳಲು ಹೇಗೆ ಸಾಧ್ಯ?*

ನಿನ್ನ ಜೊತೆ ಭೌತಿಕ ಸಂಪರ್ಕ ಅನಿವಾರ್ಯವೇನಲ್ಲಾ ಯಾರಿಗೆ ನಿಜವಾದ ನಿಲುವು ಇರುತ್ತದೆಯೋ ಅವರಿಗೆ ಖಚಿತವಾಗಿ, ಭೌತಿಕ ಸಂಪರ್ಕ ರೂಪಾಂತರದ ಕ್ರಿಯೆಗಳನ್ನು ದೇಹ ಅನುಸರಿಸಲು ಸಹಾಯ ಮಾಡುತ್ತದೆ, ಆದರೆ ಇದರಿಂದ ದೇಹಕ್ಕೆ ಕೆಲವೆ ಸಲ ಲಾಭವಾಗುವ ಸ್ಥಿತಿಯಲ್ಲಿರುತ್ತದೆ ಸಾಮಾನ್ಯವಾಗಿ ಜನ್ಮ ದಿನದಂದು ಅದು–ಹೆಚ್ಚು ಸ್ವೀಕರಿಸುತ್ತದೆ.

*

ನಾನೀಗ ಹೆಚ್ಚಾಗಿ ಕ್ರೀಯಾತ್ಮಕ ಜೀವನ ಜೀವಿಸುತ್ತಿಲ್ಲ; ನೀವು ತೆರೆದುಕೊಂಡದ್ದೆ ಆದರೆ, ಸಹಾಯ ಬಂದೇ ಬರುತ್ತದೆ.

**14 ಡಿಸೆಂಬರ್ 1972**

ಶತಮಾನ ಕಂಡ **"ಶಂ.ಬಾ. ಜೋಶಿ"**ಯವರ ಪ್ರಥಮ ಕೃತಿ

## "ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು"

2

### 'ವಂದೇ ಮಾತರಂ'

**ಯನ್ಮನಸಾ ವ್ಯಾಪತಿ ತದ್ವಾಚಾ ವದತಿ ।**
**ಯದ್ವಾಚಾ ವದತಿ ತತ್ ಕರ್ಮಾಣಾ ಕರೋತಿ ।**
**ಯತ್ ಕರ್ಮಣಾ ಕರೋತಿ ತದಭಿ ಸಂಪದ್ಯತೆ ।**

**– ಶ್ರುತಿ**

ಮನಸ್ಸಿನ ಶಕ್ತಿಯು ಅತ್ಯದ್ಭುತವಿರುತ್ತದೆ. ಬ್ರಹ್ಮನು ಸೃಷ್ಟಿಯನ್ನು ಸೃಜಿಸಬೇಕೆಂದು ಮನಸ್ಸಿನಲ್ಲಿ ತಂದನು; ಸೃಷ್ಟಿಯು ಉತ್ಪನ್ನವಾಯಿತು **"ಮನ ಏವ ಮನುಷ್ಯಾಣಾಮ್ ಕಾರಣಮ್ ಬಂಧಮೋಕ್ಷಯೋಃ"** ಎಂಬ ವಚನವಾದರೂ ಮನಸ್ಸಿನ ಮಹತ್ವವನ್ನೇ ಸೂಚಿಸುತ್ತದೆ. ಈ ಪ್ರಕರಣದ ಶಿರೋಭಾಗದಲ್ಲಿ ಉಧೃತವಾದ ಶ್ರುತಿಯಾದರೂ ಮನಸ್ಸಿನಲ್ಲಿ ಅದ್ಭುತ ಶಕ್ತಿಯುಂಟೆಂದೇ ಹೇಳುವದಿಲ್ಲವೇ? ಅಷ್ಟು ದೂರ ಏತಕ್ಕೆ, ಜನರ ನಿತ್ಯ ವ್ಯವಹಾರಗಳು ಏನನ್ನು ಬೋಧಿಸುತ್ತವೆ. ಮನುಷ್ಯನ ಶರೀರವು ಮುಂಜಾವಿನಿಂದ ಸಂಜೆಯವರೆಗೆ ಮನಸ್ಸಿನ ದಾಸವಾಗಿರುತ್ತದೆ, ಮನಸ್ಸು ಆಜ್ಞಾಪಿಸಿದ ಶರೀರವು ಒಂದು ಕುಲ್ಲಕ ಯಂತ್ರದೋಪಾದಿಯಲ್ಲಿ ತಿರುಗುತ್ತಿರುತ್ತದೆ. ಮನಸ್ಸು ಏಳೆನ್ನುತ್ತಲೆ ಅದು ಏಳುವದು, ಕುಳ್ಳಿರೆಂದೊಡನೆ ಕುಳಿತುಕೊಳ್ಳುವದು. ಅಂತೂ ಶರೀರವೆಂದರೆ, ಅದೊಂದು ಮನಸ್ಸಿನ ಕೈಯೊಳಗಿನ ಆಟಕೆಯ ಜೀನಸಿ(ವಸ್ತು)ನಂತಿರುತ್ತದೆ.

ಈ ದೃಷ್ಟಿಯಿಂದ ವಿಚಾರಿಸಿದರೆ ಜಗತ್ತಿನ ಎಲ್ಲ ಘಡಾಮೋಡಿ(ಸದ್ದು–ಗದ್ದಲಗಳು)ಗಳಿಗೂ ಮನಸ್ಸಿನ ಅಧಿಷ್ಠಾನವಿದ್ದೇ ಇರುತ್ತದೆಂದು ಹೇಳಬಹುದು. ಪ್ರತಿಯೊಬ್ಬನು ಮಾಡುವ ಪ್ರತಿಯೊಂದು ಕಾರ್ಯಕ್ಕೆ ಉಚ್ಚ ಅಥವಾ ನೀಚ ಹೇತು(ಉದ್ದೇಶ)ವು ಇರುತ್ತದೆ.ಪ್ರತಿಯೊಬ್ಬನು ಸರ್ವೇಶನನ್ನು ತನ್ನ ಕರ್ಮಮಯ ಪುಷ್ಪಗಳಿಂದ ದಿನಾಲು ಅರ್ಚಿಸುತಿರುತ್ತಾನೆ. ಈ ಕರ್ಮ–ಕುಸುಮಗಳಿಗೆ ಇರುವ ಹೇತುರೂಪಿಯಾದ ಗಂಧವು ಸುಷ್ಟ–ದುಷ್ಟ(ಶುಭ ಮತ್ತು ಅಶುಭ)ವಾಗಿದ್ದಂತೆ ಪೂಜೆಯ ಫಲವು ಸಿಕ್ಕುತ್ತಿರುತ್ತದೆ. ಜಗಚ್ಚಾಲಕನಿಗೆ ಎಲ್ಲಿಯವರೆಗೆ ಸತ್ಕರ್ಮ

ಸುಗಂಧಿತ ಪುಷ್ಪಗಳು ಸಿಗುವವೋ ಅಲ್ಲಿಯವರೆಗೆ ಆತನು ಸಿಟ್ಟಾಗಲು ಕಾರಣವೇ ಇಲ್ಲ. ಆದರೆ ಇದಕ್ಕೆ ವಿಪರೀತವಾಗಿ, ಆಚರಣಕ್ಕೆ ಆರಂಭವಾಗುವದೋ ಆಗ ಪರಮಾತ್ಮನ ಅವಕೃಪೆಗೆ ಆರಂಭವಾಯಿತೆಂದೇ ತಿಳಿಯತಕ್ಕದ್ದು ಎಂದು ಪರ್ಯಂತರ (ಎಲ್ಲಿಯವರೆಗೂ) ಭಾರತೀಯರು ಭಾರತ ಜನನಿಯನ್ನು ಸತ್ಕ್ರಿಯ ಕುಸುಮಗಳಿಂದ ಅನನ್ಯ ಭಾವದಿಂದ ಅರ್ಚಿಸುತ್ತಿದ್ದರೋ ಅಂದು ಪರ್ಯಂತರ(ಅಲ್ಲಿಯವರೆಗೂ) ಅವರು ಐಶ್ವರ್ಯ ಶಿಖರದಲ್ಲಿಯೇ ಇದ್ದರು. ಎಲ್ಲಿಯವರೆಗೆ ಬ್ರಾಹ್ಮಣರು ತಮ್ಮ ಬೌದ್ಧಿಕ ತಪಶ್ಚರ್ಯದಿಂದಲೂ, ನಿಸ್ವಾರ್ಥಿಯಾದ ನಿಸ್ಪೃಹ ವೃತ್ತಿಯಿಂದಲೂ ಭಾರತ ಜನನಿಯನ್ನು ಸೇವಿಸಿದರೋ, ಕ್ಷತ್ರಿಯರು ತಮ್ಮ ಅತುಲ ಪರಾಕ್ರಮದಿಂದ ಪರರಿಂದ ಮಾತೃಭೂಮಿಯನ್ನು ಉಳಿಸಿದರೋ, ವೈಶ್ಯರು ಅನುಪಮೇಯ(ಹೋಲಿಸಲಾಗದ, ಅಪಾರ) ವೈಭವದಿಂದ ಪ್ರಾಮಾಣಿಕ ವ್ಯವಹಾರಗಳಿಂದ ಜಗತ್ತಿನ ಯೋಗಕ್ಷೇಮವನ್ನು ಸಾಗಿಸಿದ್ದರೋ, ಎಲ್ಲಿಯವರೆಗೆ ಭಾರತೀಯರು ಕುದ್ರ ದೃಷ್ಟಿಯವರಾಗಿ ಅಂತಃಕಲಹಗಳಿಗೆ ಈಡಾಗಿದ್ದಿಲ್ಲವೋ, ಅಲ್ಲಿಯವರೆಗೆ ಹಿಂದುಸ್ತಾನವು ಐಶ್ವರ್ಯದ–ಸುಖ ಸಮಾಧಾನದ ತವರುಮನೆಯಾಗಿತ್ತು, ಹಿಂದುಸ್ಥಾನವೆಂದರೆ ಬುದ್ಧಿವಂತರ ಆಗರ, ಶೌರ್ಯಶಾಲಿಗಳ ನಿಧಾನ, ವ್ಯವಹಾರ ಚತುರರ ಖನಿಯಾಗಿತ್ತು. ಭಾರತೀಯರಿಂದ ಪ್ರಜ್ವಲಿತವಾದ ಜ್ಞಾನಜ್ಯೋತಿಯ ಪ್ರಕಾಶದಲ್ಲಿ ಗ್ರೀಸ್–ರೋಮ್ ದೇಶಾದಿಗಳು ತಮ್ಮ ವ್ಯವಹಾರಗಳನ್ನು ನಡೆಸುತ್ತಿದ್ದವು.

'ಈ ಸ್ಥಿತಿಯು ಎಂದಿನದು? ಯಾವಾಗ ಜನರು ತಮ್ಮ ಸುಮನ ಪರಿಮಳಯುಕ್ತ ಪುಷ್ಪಗಳನ್ನು ಪರಮಾತ್ಮನಿಗೆ ಅರ್ಪಿಸುತ್ತಿದ್ದರೋ ಆ ಅವಧಿಯದು. ಆಗ ಹಿಂದುಸ್ಥಾನದಲ್ಲಿ ಬಂಗಾರದ ಹೊಗೆ ಹಾಯುತ್ತಿತ್ತು. ಆದರೆ ಇಂದು ಏನು? ಈ ಹೊತ್ತಿಗೆ ಕಟ್ಟಿಗೆಯ ಹೊಗೆ ಹಾಯುವದೂ ದುಸ್ತರವಾಗಿದೆ! ಹೀಗೆ ಯಾಕೆ ಆಯಿತು' ಯಕ್ಷನ ಮಾಟದಿಂದ ಹಿಂದುಸ್ಥಾನದೊಳಗಿನ ಜನರೇನು ದನ ಕುರಿ–ಆದರೆ? – ಅಥವಾ ಮನುಷ್ಯರೂಪಿ ಮೃಗಗಳಾದರೋ? ಆದುದಾದರೂ ಏನು? ಯಾಕೆ ಈ ಈಶ ಕೋಪ? ಆ ನಿಸ್ವಾರ್ಥಿಗಳೂ, ನಿಗ್ರಹಾನುಗ್ರಹ ಸಾಮರ್ಥ್ಯವುಳ್ಳವರೂ ಆದ ಆ ಬ್ರಾಹ್ಮಣರು ಎಲ್ಲಿ ಹೋದರು? ಜ್ಞಾತ ಜಗತ್ತನ್ನು ಗೆದ್ದು ಮತ್ತೆ ತೋಳತಿಂಡಿ(ಹೋರಾಟದ ಮನೋಭಾವ) ತೀರದೆ ಇದ್ದುದರಿಂದ ಶೌರ್ಯದಿಂದ ಮುಸಗುಡುವ(ಉಸಿರಾಡುವ) ಆ

ಕ್ಷತ್ರಿಯರು ಎಲ್ಲಿ ಅಡಗಿದರು. ಜಗತ್ತಿನ ಬೇರೆ ಬೇರೆ ಭಾಗಗಳೊಡನೆ ವ್ಯಾಪಾರ ನಡೆಸಿ ಅಪಾರ ಸಂಪತ್ತು ಗಳಿಸಿ ಭರತ ಭೂಮಿಗೆ ಸುವರ್ಣಭೂಮಿ ಎಂಬ ಸಾರ್ಥಕ ನಾಮ ಮಾಡಿದ ಆ ಕುಶಲ ವೈಶ್ಯರು ಎಲ್ಲಿ ಅದೃಶ್ಯರಾದರು?[1] ಏನು ಮಾಟವಿದು! ಅಸದೃಶವಾದ ಬೌದ್ಧಿಕ ತೇಜಸ್ಸಿನಿಂದ ಜಗತ್ತಿನ ವಿಶ್ವಜನರ ಕಣ್ಣು ಕುಕ್ಕಿಸಿದ ಆ ಬ್ರಾಹ್ಮಣರ– ನಿಸ್ವಾರ್ಥಿಯಾದ ಹಾಗೂ ಲೋಕೋಪಕಾರಕ್ಕೆಯೇ ದೇಹಧಾರಣೆಯನ್ನು ಮಾಡಿದ ಆ ಬ್ರಾಹ್ಮಣರ ವಂಶಜರು ಇವರೇ ಏನು? ಇಂದು, ಈ ಗೇಣು ಹೊಟ್ಟೆ ತುಂಬಿಸಿಕೊಳ್ಳಲಿಕ್ಕೆ ಅಲವತ್ತುಕೊಂಡ(ಹಪಹಪಿಸುವ ಹಂತ) ಆ ಮಂದಿ(ಜನರು), ಈ ಅಧಿಕಾರದಲ್ಲಿರುವ ಹವಾಲದಾರರ ಬೂಟು ಒರೆಸುತ್ತ ತಿರುಗುವ ಇಂದಿನ ನಾಮಧಾರಿ ಬ್ರಾಹ್ಮಣರು! ತೋಳದ ನಾತ ಬಡಿಯುತ್ತಲೇ ಕೈಕಾಲು ಬಿಡುವ ಕುರಿಯಂತೆ ರಣ–ಹೇಡಿಗಳಾದ ಸುಖಲೋಲುಪರಾದ ಇಂದಿನ ಕ್ಷತ್ರಿಯ ಕುಲದವರು! ಇವರು ಆ ಮಹಾ ಪ್ರತಾಪಶಾಲಿಗಳಾದ ಆ ಕ್ಷತ್ರಿಯರ ರಕ್ತದವರೇ ಏನು? ಚುಟ್ಟ ಬೀಡಿಯ ಅಂಗಡಿಗಳನ್ನು ಅಥವಾ ಪರದೇಶೀ ಮಾಲಿನ ದಲಾಲಿ ಮಾಡಿ, ವೈಶ್ಯರೆಂದು ಹೇಳುವ ವಣಿಕ್ಕರು, ಆ ವೈಭವಶಾಲಿ ವ್ಯಾಪಾರಿಗಳ ಗೋತ್ರದವರೇ ಏನು?[1] ಅಯ್ಯೋ! ಎಷ್ಟು ಹೃದಯಭೇದಕ ಅಭ್ಯಂತರವಿದು' ಭರತ ತಂಡದ ನಿವಾಸಿ ಎಂಬ ಬಗ್ಗೆ ಅಭಿಮಾನ ಪಡುವಂಥ ಐಶ್ವರ್ಯದ ದಿನಗಳೆತ್ತ ಹೋದವು! ಮತ್ತು ಇಂದಿನ ಹಿಂದೂ ಎಂದೆನಿಸಿಕೊಳ್ಳಲಿಕ್ಕೆ ಮಾನಸಾಲದ(ಅರ್ಹತೆ ಹೊದಿರದ) ಈ ದುರ್ದಿನಗಳತ್ತ! ಓ ಮಾತೆ, ಯಾಕೆ ಇಷ್ಟು ಕೋಪಗೊಂಡೆ? ಛೇ, ನೀನಾದರು ಏನು ಮಾಡೀ(ಮಾಡುತ್ತೀ), ಯಥಾಪ್ರಕಾರ ನಿನ್ನ ಪೂಜೆಯೂ ಆಗದಾಯಿತು.

ಆನರ ಪ್ರತಿಯೊಂದು ವ್ಯವಹಾರವು ಉದಾತ್ತ ಸ್ವರೂಪದಲ್ಲಿರಲಿಕ್ಕೆ ಅವರ ಮನಸ್ಸು ಉದಾತ್ತವಿರಲಿಕ್ಕೆ ಬೇಕು. ಉದಾತ್ತ ಮನಸ್ಸು ಇದ್ದರೆ ಉದಾತ್ತ ಕೃತಿ. ಉದಾತ್ತ ಕೃತಿ ಕುಸುಮಗಳು ಭಾರತ ಮಾತೆಗೆ ಬರಬರುತ್ತ ಸಿಗದಾದವು; ಅವಕೃಪೆಗೆ ಆರಂಭವಾಯಿತು. ಮೊದಲಿನ ಪೂಜೆಯಿಂದ ಸಿಕ್ಕ ಫಲದ ಅನುಭವ ತಕೊಳ್ಳುವದರಲಿ(ಪಡೆದುಕೊಳ್ಳುವದರಲ್ಲಿ) ಜನರು ಗುಂಗು(ಹುಚ್ಚರಂತಾದರು) ಆದರು. ಬ್ರಾಹ್ಮಣನು ತನ್ನ ಪೂರ್ವಜರ ವಿದ್ವತ್ತೆಯ ಪ್ರತಿಫಲವನ್ನು ಅನುಭವಿಸುವದರಲ್ಲಿ, ಕ್ಷತ್ರಿಯನು ತನ್ನ ಹಿರಿಯರ, ಶೌರ್ಯದಿಂದ ದೊರಕಿಸಿದ ಐಶ್ವರ್ಯದ ವಿಲಾಸದಲ್ಲಿ, ವೈಶ್ಯನು ತನ್ನ ವಂಶಜರು ಗಳಿಸಿದ ಸಂಪತ್ತಿನ

ಉಪಭೋಗಗಳಲ್ಲಿ ಆನಂದಿಸಹತ್ತಿದರು. ಸ್ವಾತಂತ್ರ್ಯ ವೃತಿಯು ಕಡಿಮೆಯಾಗಹತ್ತಿತು. ಸ್ವಾವಲಂಬನವು ನಷ್ಟವಾಯಿತು. ಖಡ್ಗವು ಎಷ್ಟು ತೀಕ್ಷ್ಣವಿದ್ದರೂ ಅದನ್ನು ಆಗಾಗ್ಗೆ ಉಪಯೋಗಿಸದಿದ್ದರೆ ಅದು ಜಂಗು ತಿನ್ನುವದು ಸ್ವಾಭಾವಿಕ. ಬುದ್ಧಿ, ಶೌರ್ಯ ಮತ್ತು ಚಾತುರ್ಯಗಳು ನಿತ್ಯದ ವ್ಯವಹಾರದ ಸಾಣೆಕಲ್ಲಿನ(ಮಸೆಯುವ ಕಲ್ಲು) ಮೇಲೆ ಮಸೆಯದಿದ್ದರೆ ಜಂಗು ತಿನ್ನುತ್ತವೆ. ಹಿರಿಯರು ಗಳಿಸಿದ್ದರ ಮೇಲೆ ತೃಪ್ತಿ ಪಟ್ಟು, ಅದರ ಉಪಭೋಗದಲ್ಲಿ ಮಗ್ನರಾದ ಭಾರತೀಯರು ದಿನೇ ದಿನೇ ಹೀನ ಮನಸ್ಕರಾಗ ಹತ್ತಿದರು ಅಧಃಪತನಕ್ಕೆ ಆರಂಭವಾಯಿತು. ಇಳಿಜಾರಿಗೆ ಒಮ್ಮೆ ಸಿಕ್ಕ ಕಲ್ಲು ಉರುಳುತ್ತ ಉರುಳುತ್ತ ತಳ ಕಾಣುವದು. ವೈಭವ ಶಿಖರದಿಂದ ಚ್ಯುತ(ಜಾರಿದ)ವಾದ ಹಿಂದುಸ್ತಾನವು ಗಡಗಡನೆ ಉರುಳುತ್ತ ಅನೇಕ ಮುಸಲ್ಮಾನೀ ಮನೆತನಗಳೆಂಬ ಬಂಡೆಗಲ್ಲುಗಳ ಮೇಲೆ ಅಪ್ಪಳಿಸಿತ್ತು. ಕೆಲವು ಯುರೋಪಿಯ ಪ್ರಸ್ತ(ಹಾಸಿನ)ಗಳ ಮೇಲೆ ಧಕ್ಕೆ ತಿಂದಿತು. ಯುರೋಪೀಯ ಪ್ರಸ್ತಗಳಲ್ಲಿ ಇಂಗ್ಲಂಡವು ದೊಡ್ಡದಿದ್ದುದರಿಂದ, ಅದರ ಸಂಯೋಗವಾಗಿ ಬಹು ದೊಡ್ಡ ಆಘಾತಪ್ರತ್ಯಾಘಾತಗಳನ್ನು ಹೊಂದಿತು.

ಹಿಂದುಸ್ತಾನವು ತನ್ನ ಪ್ರಾಚೀನ ವೈಭವವನ್ನು ಕಳಕೊಂಡಿತು. ಜನರು ಉದಾತ್ತ ಧ್ಯೇಯದಿಂದ ಚ್ಯುತರಾದರು. ಬದುಕುವದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಎಂದು ಬಗೆಯಹತ್ತಿದರು. ಬಹು ಸಂಖ್ಯಾಕರು ಹೀನ ಮನಸ್ಸಿನವರಾದ ಬಳಿಕ ದೇಶವು ಹೀನದೆಶೆಗೆ ಬಂದದ್ದರಲ್ಲಿ ಏನು ಅಶ್ಚರ್ಯ? ಯಾಕೆಂದರೆ ದೇಶದೊಳಗಿನ ಜನರೆಂದರೇ ಆ ದೇಶ, ಶಾರೀರಿಕ ಅಧಃಪಾತದ ಮೊದಲು ಮಾನಸಿಕ ಅಧಃಪಾತವಾಗುತ್ತಿರುತ್ತದೆ. ಮನಸ್ಸಿದ್ದರೆ ಶಾರೀರಿಕ ದಾಸ್ಯದೊಳಗಿಂದ ಪಾರಾಗಬಹುದು. ಆದರೆ ಮಾನಸಿಕ ದಾಸ್ಯವೇ ಇದ್ದುದಾದರೆ ಅದರೊಳಗಿಂದ ದಾಟುವದು ಅಸಾಧ್ಯವು. ತಾನು ಕುರಿಯೆಂದು ನಂಬಿ ಸಿಂಹವು ಒಂದು ಕುರಿ ಹಿಂಡಿನೊಳಗೆ ವಾಸವಾಗಿತ್ತಂತೆ. ಓಡಿಹೋಗಬೇಕೆಂದು ನಿಶ್ಚಯಿಸಿದ ಪ್ರಾಣಿಯನ್ನು ಅರ್ಥಾತ ಮನಸ್ಸಿನಿಂದ ಒಪ್ಪದ ಪ್ರಾಣಿಯನ್ನು ಬಂಧಿಸುವದು ಅಸಾಧ್ಯವು. ಅಂತೇ ಅದನ್ನು ಒಲಿಸಿಕೊಳ್ಳಲಿಚ್ಛಿಸುವವರು ಮೊದಲು ಅದು ತನ್ನನ್ನು ನಂಬುವಂತೆ(ವಿಶ್ವಾಸವಿಡುವಂತೆ) ಮಾಡುತ್ತಾರೆ ಇದರ ರಹಸ್ಯವೇನು?

ಬಾಬರನಿಗೆ ತನ್ನ ಸಾಮ್ರಾಜ್ಯದ ಸ್ಥಿರತ್ವದ ಬಗ್ಗೆ ಅವಿಶ್ವಾಸವಿತ್ತು. ಯಾಕೆಂದರೆ ಆಗ ಇನ್ನೂ ಮನಸ್ಸಿನಿಂದ ಜನರು ಆತನಿಗೆ ಅಂಕಿತರಾಗಿದ್ದಿಲ್ಲ. ಆದರೆ ಅಕ್ಬರನ

ಕಾಲಕ್ಕೆ ಅದಕ್ಕೆ ಸ್ಥಿರತ್ವವು ಬಂತು. ಯಾಕೆಂದರೆ ಮಾನಸಿಂಹನಂಥ ರಣಧುರಂಧರರು ಮನಸ್ಸಿನಿಂದ ಆತನ ಗುಲಾಮರಾದರು. ಅಫಘಾನರ ಒಂದು ಗೇಣು ದೇಶವು ಮನಸ್ಸಿನಿಂದ ಇಂಗ್ಲೀಶರ ಅಧಿಕಾರಕ್ಕೆ ಒಲ್ಲದುದರಿಂದ (ಒಪ್ಪದೇ ಇದ್ದುದರಿಂದ) ಬ್ರಿಟಿಶರು ಎರಡು ಸಾರೆ ಮಾಡಿದ ಪ್ರಯತ್ನಗಳೂ ನಿಷ್ಫಲವಾದವು. ಆದರೆ 31 ಕೋಟಿಯ (1921ರ ಸಮಯಕ್ಕೆ ಅಖಂಡ ಭಾರತದ ಜನಸಂಖ್ಯೆ)[2] ಅವಾಢವ್ಯ(ಅಖಂಡ) ಹಿಂದುಸ್ತಾನವು[2] ಬ್ರಿಟಿಶರನ್ನು ಮನಸಾ–ಮನಸ್ಸಿನಿಂದ ಆದರಿಸಿದ್ದರಿಂದ ಅವರ ವಿಯೋಗಕ್ಕೆ ಭೀತಿಪಡುತ್ತದೆ! ಇಂಗ್ಲಿಶರು ಬಹು ದೊಡ್ಡ–ಮಾಟ(ಮೋಡಿ) ಮಾಡಿದ್ದೆಂದರೆ, ಅವರು ಹಿಂದೂ ಜನರ ಮನಸ್ಸನ್ನು ನಾನಾ ವಿಧದಿಂದ ಗುಲಾಮನಾಗಿ ಮಾಡಿದುದು. ಅವರ ರೇಲ್ವೆ, ಅವರ ತಾರ–ಯಂತ್ರ ಟೆಲಿಗ್ರಾಫ್, ಅವರ ಕೋರ್ಟು, ಅವರ ಕಚೇರಿ, ಅವರ ಅಚ್ಚುಕಟ್ಟುತನ ಇವೆಲ್ಲವುಗಳೂ ಸಾದಾ ಭೋಳೆ ಹಿಂದೂ ಜನರ ಚಿತ್ತವನ್ನು ಆಕರ್ಷಿಸಿದವು. ಇಂಗ್ಲಿಶರೇ ತಮ್ಮ ಉದ್ಧಾರಕರ್ತರೆಂದು ಜನಗಳು ನಂಬಿದವು. 1857ನೆಯ ಇಸವಿಯ ಗಂಡಾಂತರದಲ್ಲಿ (ಸೈನಿಕ ದಂಗೆ) ಇಂಗ್ಲಿಶರು ಇಲ್ಲಿಂದ ಕಾಲು ಕಿತ್ತುವ ಹೊತ್ತು ಬಂದರೂ, ನಮ್ಮ ಜನರು ಅವರನ್ನು ಆಗ್ರಹದಿಂದ ಇಟ್ಟುಕೊಂಡರು!

ಇಷ್ಟು ಮಾನಸಿಕ ದಾಸ್ಯವಿದ್ದ ಬಳಿಕ ಸ್ವಾತಂತ್ರದ ಆಶೆಯಾದರೂ ಹೇಗೆ? ಸಾಮಾನ್ಯ ಜನರು ರಾಜಕರ್ತರ ಮೋಹಿನಿಗೆ ಹೀಗೆ ಬಲೆ ಬಿದ್ದುದು ನಿಜ. ಆದರೆ ಮಾತೃಭೂಮಿಯ ಪುಣ್ಯದಿಂದ ಎಲ್ಲರೂ ಮೋಹವಶರಾಗಲಿಲ್ಲ. ದೇಶದಲ್ಲಿ ಎಲ್ಲಿಯಾದರೂ ಒಂದೊಂದು ಸಂದಿ–ಮೂಲಿಯಲ್ಲಿ ಆಶೆಯ ಕಿರಣಗಳು ಮಿನುಗುತ್ತಿದ್ದವು. ಇವುಗಳು ಇದ್ದುದರಿಂದಲೇ ಇಂದಿನ ಗಾಢವಾದ ತಮವು ನಷ್ಟವಾದೀತೆಂಬ ಆಶೆ, ಆಲದ ಬೀಜವು ಕಸಕಸಿ ಕಾಳಿನಗಿಂತಲೂ ಸಣ್ಣದಾಗಿದ್ದರೂ ಅದು ಪೆರ್ಮರ(ದೊಡ್ಡ ಮರ)ವಾಗುವದೆಂಬುದರಲ್ಲಿ ಸಂದೇಹವೇನು?

ಸೂರ್ಯೋದಯದ ಮುಂಚೆ ಸ್ವಲ್ಪ ಕಾಲ ಕಣ್ಣೊಳಗೆ ಬೊಟ್ಟು(ಬೆರಳು) ಹಾಕಿದರೂ ಕಾಣದಷ್ಟು ಕಗ್ಗತ್ತಲೆಯು ಎಲ್ಲ ಕಡೆಗೆ ವ್ಯಾಪಿಸಿರುತ್ತದೆ. ಅದರಂತೆ ಹಿಂದುಸ್ತಾನದ ಭಾಗ್ಯಸೂರ್ಯನ ಉದಯವಾಗುವ ಮುಂಚೆ ಎಲ್ಲ ಕಡೆಗೂ ಅಂಧಕಾರವು ಪಸರಿಸಿತ್ತು. ಬ್ರಿಟಿಶರು ಮಾಡಿದ ಪ್ರತಿಯೊಂದು ಕಾರ್ಯವು ಕೇವಲ ಲೋಕೋಪಯೋಗಕ್ಕಾಗಿಯೇ ಇರುತ್ತದೆಂದು ಜನರು ತಿಳಿದಿದ್ದರು.

ರೇಲ್ವೆಗಳು ಸೈನ್ಯದ ವಾಹನಕ್ಕೂ, ಜನರ ಪ್ರವಾಸಕ್ಕೂ ಕೂಡಿಯೇ ಉಪಯೋಗವಾಗುತ್ತಿದ್ದು, ಜನರು ಅವು ಕೇವಲ ತಮ್ಮ ಹಿತಕ್ಕೆ ಕಟ್ಟಿರುವರೆಂದು ತಿಳಿದರು! ತಮ್ಮ ಕಚೇರಿ–ಕಟ್ಟಿ(ಕಾರ್ಯಾಲಯ)ಗಳಲ್ಲಿ ನೌಕರರು ಬೇಕೆಂದು ಶಾಲೆಗಳನ್ನು ಸ್ಥಾಪಿಸಿದ್ದು ಮರೆತು, ಜನರು ಅವು ತಮ್ಮ ಕಲ್ಯಾಣಕ್ಕಾಗಿಯೇ ಇರುತ್ತವೆಂದು ಕಲ್ಪಿಸಿದರು. ರಾವಸಾಹೇಬ, ರಾವಬಹಾದ್ದೂರಾದಿ ಪದವಿಗಳನ್ನು, ಅಧಿಕಾರಿ ವರ್ಗಕ್ಕೆ ಜನರು ಸಹಾಯಮಾಡಬೇಕು, ಮತ್ತು ಅನುಕೂಲರಾಗಿರ–ಬೇಕೆಂದು ಕೊಡುವರೆಂಬುದನ್ನು ಮರೆತು, ಅವು ಕೇವಲ ತಮ್ಮ ಅಮೌಲ್ಯ ಗುಣಗಳನ್ನು ಕಂಡು ಲುಬ್ದರಾಗಿ ಅರ್ಪಿಸುವರೆಂದು ಗ್ರಹಿಸಹತ್ತಿದರು. ಸ್ವಲ್ಪದರಲ್ಲಿ ಹೇಳುವದೆಂದರೆ, ಇಂಗ್ಲಿಶರು ಹಿಂದುಸ್ತಾನಕ್ಕೆ ರಾಜ್ಯ ಮಾಡಿ ತಮ್ಮ ಜನಾಂಗದ ಹಿತ ಸಾಧಿಸಿಕೊಳ್ಳಲಿಕ್ಕೆ ಬಂದಿರುವರೆಂಬುದನ್ನು ಮರೆತು, ಅವರು ಇಲ್ಲಿ ಹಿಂದೂ ಜನರ ಹಿತಕ್ಕಾಗಿಯೇ ತಮ್ಮ ಆಯುಷ್ಯ, ಬುದ್ಧಿ, ಧನಗಳನ್ನೆಲ್ಲ ಅರ್ಪಿಸಿ ಮೋಕ್ಷ ಸಂಪಾದಿಸಲಿಕ್ಕೆ ಬಂದಿರುವರೋ ಏನೋ ಎಂಬ ಭಾವನೆ ಮಾಡಿಕೊಂಡರು.

ಹೀಗೆ ಜನರು ವಿಪರೀತ ಬುದ್ಧಿಯುಳ್ಳವರಾಗಿರಲು, ಅವರಿಗೆ ಸತ್ಯ–ಜ್ಞಾನವನ್ನು ಮಾಡಿಕೊಡುವದು ಬಲು ಬಿಗಿಯಾಗಿತ್ತು(ಕಠಿಣವಾಗಿತ್ತು). ಜನರನ್ನು ಜಾಗ್ರತ ಮಾಡಲು ಹೋದರೆ ಜನರಂತೂ ಮುಪ್ಪಿನಲ್ಲಿರುವದರಿಂದ ಏಳಲಿಕ್ಕೆ ಒಲ್ಲರು; ಅಮಲಿನಲ್ಲಿಯೇ ಇರಲಿಕ್ಕೆ ಇಚ್ಛಿಸುವಂಥವರು, ಜನರು ಜಾಗ್ರತರಾದರೆ ತಮ್ಮ ಅಸ್ತಿತ್ವಕ್ಕೆ ಭಂಗ ಬಂದೀತೆಂಬ ಭೀತಿ ಸರಕಾರಕ್ಕೆ. ಆದುದರಿಂದ ಜನರ ಪೂರ್ಣ ಸಹಾಯವಿಲ್ಲದ ಈ ಜಾಗ್ರತ ಮನುಷ್ಯನನ್ನು ತನ್ನ ಕಾರ್ಯದಲ್ಲಿ ಅಡ್ಡಿಯಾಗಬಾರದೆಂದು ಸರಕಾರದವರಿಂದ ತಡೆಯಲ್ಪಡುವದು ಸ್ವಾಭಾವಿಕವಿದೆ. ಇಂಥ ಇಕ್ಕಟ್ಟಾದ ಮಾರ್ಗವನ್ನು ಕ್ರಮಿಸುವದು ಬಹಳ ಸಾಹಸದ ಕೆಲಸವಾಗಿದೆ. ಜನರನ್ನು ಎಚ್ಚರಿಸಲಿಕ್ಕೆ ರಾಮಬಾಣ ಔಷಧವೆಂದರೆ ಅವರ ಮನಸ್ಸು ಜಾಗ್ರತ ಪಡಿಸುವದು, ತಾನು ಯಾರು? ಮೊದಲು ಏನಿದ್ದೆ? ಈಗ ಇದ್ದ ಸ್ಥಿತಿಯಾವುದು? ಇರಬೇಕಾದ ಸ್ಥಿತಿ ಎಂಥದು! ಎಂಬ ಜ್ಞಾನವು ಜನರಿಗೆ ಆಯಿತೆಂದರೆ ಅರ್ಥಾತ ಮಾನಸಿಕ ಗುಲಾಮತನವು ನಷ್ಟವಾಯಿತೆಂದರೆ ಇಷ್ಟ ಸಾಧ್ಯವಾಗಲಿಕ್ಕೆ ತಡ ಹತ್ತುವದಿಲ್ಲ(ವಿಳಂಬವಾಗುವದಿಲ್ಲ). ಸ್ವಾತಂತ್ರ್ಯಾರ್ಥವಾಗಿ ಹೆಣಗುವ ರಾಷ್ಟ್ರಗಳಿಗೆ ಶಸ್ತ್ರಾಸ್ತ್ರಗಳಿಗಿಂತ ಮುಂಚೆ ಅದಕ್ಕಿಂತ ಎಷ್ಟೋಪಾಲು ಮಹತ್ವದ ಜೀವಂತ ಮನಸ್ಸು ಬೇಕು "ನಾನು ಸ್ವತಂತ್ರನಾಗಲಿಕ್ಕೆ ಬೇಕು." ಎಂದು ತ್ರಿಕರಣಪೂರ್ವಕವಾಗಿ

ದಿನಾಲು ಅಂತಃಕರಣದಲ್ಲಿ ಜಪಿಸುವಾತನಿಗೆ ಸ್ವಾತಂತ್ರವು ಸಿಗದೆ ಎಂದೂ ನಿಲ್ಲಲಿಕ್ಕಿಲ್ಲ, ಅಹಂ ಬ್ರಹ್ಮಾಸ್ಮಿ ಮಂತ್ರದ ಜವ(ವೇಗೋತ್ಕರ್ಷ)ದಿಂದ ದೇವತ್ವವನ್ನು ಹೊಂದುತ್ತಿರಲು ಸ್ವಾತಂತ್ರ್ಯದಂತಹ ಸೊಟ್ಟ(ಸಣ್ಣ) ಕೆಲಸವು ಸಾಧ್ಯವಾಗಲಿಕ್ಕೆ ಏನು ತಡ? ದೇಶದ ಹೀನ ಸ್ಥಿತಿಯಲ್ಲಿ ಜನರ ಮನಸ್ಸು ನಿರ್ಜೀವವಾಗಿರುತ್ತದೆ. ಅವುಗಳನ್ನು ಸಜೀವ ಮಾಡುವದೇ ರಾಷ್ಟ್ರೋದ್ಧಾರಕನ ಮೊದಲನೇ ಕರ್ತವ್ಯವಿವೆ. ಇದೇ ಕರ್ತವ್ಯವನ್ನು ಫ್ರಾನ್ಸ ದೇಶದ ರೂಸೋ, ವಾಲ್ಟೇರಾದಿಗಳು ಮಾಡಿದರು; ಇದೇ ಕಾರ್ಯವನ್ನು ಟಾಲಸ್ಟಾಯ್ ಸಹಿತ ರಶಿಯಾದಲ್ಲಿ ಮಾಡಿದರು; ಇದೇ ಕಾರ್ಯವನ್ನು ಮ್ಯಾಜಿನಿ ಕಾವ್ಹರ್ ಇಟಲಿಯಲ್ಲಿ ಮಾಡಿದರು.

ಇಂಥಹ ಪವಿತ್ರತಮವಾದ ಹಾಗೂ ಮಹತ್ವದ ಕಾರ್ಯವನ್ನು ಮಾಡಲಿಕ್ಕೆ ಭರತ ಖಂಡದ ಒಂದೊಂದು ಭಾಗವೂ ಅನೇಕರಿಗೆ ಅನೇಕ ಸಾರೆ ಜನ್ಮ ಕೊಟ್ಟಿದೆ ಪಂಜಾಬವು ಗುರುನಾನಕ, ರಣಜಿತ ಸಿಂಹ, ಲಾಲಾ ಲಜಪತರಾಯರುಗಳಿಗೆ, ರಜಪೂತಾನವು(ರಾಜಸ್ಥಾನವು) ಪ್ರತಾಪಸಿಂಹನಿಗೆ, ಬಂಗಾಲವು ರಾಜಾ ರಾಮಮೋಹನರಾಯ, ರವೀಂದ್ರನಾಥ, ಬಿಪಿನಚಂದ್ರಪಾಲರಿಗೆ. ಗುಜರ ದೇಶವು (ಗುಜರಾತವು) ಮಹಾತ್ಮಾ ಗಾಂಧಿ ಮೊದಲಾದವರಿಗೆ, ಮಹಾರಾಷ್ಟ್ರವು ರಾಮದಾಸ, ತುಕಾರಾಮ ಮತ್ತು ತಿಲಕರಿಗೆ, ಕರ್ನಾಟಕವು ವಿದ್ಯಾರಣ್ಯಾದಿಗಳಿಗೆ ಜನ್ಮ ಕೊಟ್ಟಿದೆ. ಇತ್ತಲಾಗಿ ಇಂಥ ಅಸಾಧಾರಣ ಚರಿತರಿಗೆ ಜನ್ಮ ಕೊಡುವ ಭಾಗ್ಯವು ವಂಗ ದೇಶಕ್ಕಿದ್ದಷ್ಟು ಬೇರೆ ಯಾವ ಪ್ರಾಂತಗಳಿಗೆ ಇರುವಂತೆ ತೋರುವದಿಲ್ಲ. ನಗಾಧಿರಾಜ(ಹಿಮಾಲಯ ಪರ್ವತ)ದ ಪಾದಸನ್ನಿಧಿಯಲ್ಲಿದ್ದಂಥ ಭಗೀರಥನ ದೀರ್ಘತಪಶ್ಚರ್ಯದಿಂದ ಭೂಲೋಕಕ್ಕೆ ಬಂದ ಪವಿತ್ರತಮಳಾದ ಭಾಗೀರಥಿಯವರ ಕೃಪೆಗೆ ಪಾತ್ರವಾದಂಥ, ಬ್ರಹ್ಮಪುತ್ರನ[3] (ನದ–ಗಂಡು ನದಿಗೆ ನದ ಎನ್ನುತ್ತಾರೆ) ಕೃಪಾದೃಷ್ಟಿಯುಳ್ಳಂಥ ಈ ಪವಿತ್ರವಾದ ಭೂಮಿಯಲ್ಲಿ ಅನೇಕ ಮಹಾತ್ಮರು ಹುಟ್ಟಿ, ಅವರು ತಮ್ಮ ಕವಿತ್ವ, ವಕ್ತೃತ್ವ, ಚಿತ್ರಕೌಶಲ್ಯ, ಭೌತಿಕ ಶೋಧ ಮುಂತಾದವುಗಳಿಂದ ಇಡೀ ಜಗತ್ತಿಗೆ ಅಚ್ಚರಿಗೊಳಿಸಿದರೂ ಆಶ್ಚರ್ಯವಲ್ಲ. ಪರಮಹಂಸ ಶ್ರೀರಾಮಕೃಷ್ಣರ ಆಶೀರ್ವಾದ ಪಡೆದ ಬಂಗಾಲಿಗಳು ಮುಂದೆ ಬರದೆ ಮತ್ತಾರು ಬರಬೇಕು? ಶ್ರೀಮತ್ ವಿದ್ಯಾರಣ್ಯ ಸ್ವಾಮಿಗಳ ವರ ಪಡೆದ ಕರ್ನಾಟಕವೂ, ರಾಮದಾಸ ಸ್ವಾಮಿಗಳ ಪ್ರಸಾದ ಗ್ರಹಣ ಮಾಡಿದ ಮಹಾರಾಷ್ಟ್ರವೂ, ಒಮ್ಮೊಮ್ಮೆ ತಮ್ಮ ಅದ್ಭುತ ಕಾರ್ಯವನ್ನು ಈ ಜಗತ್ತಿನ ರಂಗಭೂಮಿಯ ಮೇಲೆ ಮಾಡಿ ತೋರಿಸಲಿಲ್ಲವೇ?

ಜನರು ರಾಜಕೀಯ ಮಾಯೆಯಲ್ಲಿ ಸಿಕ್ಕಿಕೊಂಡಾಗ, ಆ ಮಾಯೆಯಿಂದ ದೂರವಿದ್ದು ಜನರನ್ನೂ ಮಾಯಾಪಾಶದಿಂದ ಬಿಡಿಸಲಿಕ್ಕೆ ಹೆಣಗಿದ ಬಂಗಾಲದ ಶ್ರೇಷ್ಠ ಪ್ರರುಷರಲ್ಲಿ ಶ್ರೀ ಬಾಬು ಅರವಿಂದ ಘೋಷ ಎಂಬವರು ಅಗ್ರಣಿಗಳಾಗಿದ್ದಾರೆ. ಯಾವ ಮಹಾತ್ಮನು ತನ್ನ ಪವಿತ್ರ ಕಾರ್ಯವನ್ನು ಯಾರ ಸ್ತುತಿ–ನಿಂದೆಗಳಿಗೆ ಅಥವಾ ಬೆದರಿಕೆಗೆ ಸೊಪ್ಪು ಹಾಕದೇ ಮಾಡುತ್ತಿರುವನೋ, ತನ್ನ ಅದ್ಭುತ ಚಾರಿತ್ರದಿಂದ ಜಗತ್ತಿನ ಚಿತ್ರವನ್ನು ತನ್ನ ಕಡೆಗೆ ಆಕರ್ಷಿಸಿರುವನೊ, ಅವನ ಅಲ್ಪ ಚರಿತ್ರವನ್ನಾದರೂ ತಿಳಿಯಬೇಕೆಂಬ ಕುತೂಹಲವು ಯಾರಿಗಾಗಲಿಕ್ಕಿಲ್ಲ?

(ಸಶೇಷ)

---

**ಟಿಪ್ಪಣಿ:** ಒಂದು ನೂರು ವರ್ಷದ ಹಿಂದಿನ ಭಾಷಾ ವ್ಯವಸ್ಥೆಯಲ್ಲಿ ಇದ್ದ ಶಬ್ದಗಳಿಗೆ ಆಧುನಿಕ ಪರಿಭಾಷೆಯ ಅರ್ಥವನ್ನು ಆಯಾ ಶಬ್ದದ ಮುಂದೆಯೇ ಆವರಣದಲ್ಲಿ ಕೊಡಲಾಗಿದೆ. ಇದು ಓದುಗರಿಗೂ ತಕ್ಷಣವೇ ಸಹಾಯಕವಾಗುವದು.

1. 1921ರ ಸಮಯಕ್ಕೆ ಭಾರತದಲ್ಲಿ ಇದ್ದ ಸಾಮಾಜಿಕ ನಿರ್ವಿಣ್ಣತೆಯ ಬಗೆಗೆ ಬರೆದ ಈ ಸಾಲುಗಳು ತುಂಬ ಕುತೂಹಲಕಾರಿಯಾಗಿವೆ. ಇದೇ ಭಾವದಲ್ಲಿಯೇ ಶ್ರೀ ಅರವಿಂದರೂ ಸಹಿತ ತಮ್ಮ ಏಕೈಕ ಸಂಸ್ಕೃತ ಕಾವ್ಯವಾಗಿರುವ "ಭವಾನೀ ಭಾರತೀ"ಯಲ್ಲಿ ಬರೆದಿದ್ದಾರೆ. ಆದರೆ, ಶ್ರೀ ಅರವಿಂದರು ಬರೆದ ಸಂಸ್ಕೃತ ಕಾವ್ಯವು 1980ರ ವರೆಗೂ ಪೊಲೀಸ್ ವಶದಲ್ಲಿ ಇತ್ತು. 1909ರಲ್ಲಿಯೇ ಅದು ಹಸ್ತಪ್ರತಿ ಇದ್ದಾಗಲೇ (ಪ್ರಾಯಃ ಅಪೂರ್ಣವಾಗಿದ್ದಂತೆ – ಏಕೆಂದರೆ ಅದು ಶತಕದ ಹಾಗೆ ಪೂರ್ತಿ ನೂರು ಶ್ಲೋಕಗಳಿಲ್ಲ. ಕೇವಲ 99 ಶ್ಲೋಕಗಳಿವೆ – ತೋರುತ್ತದೆ. ಶ್ರೀ ಅರವಿಂದರ ಭವಾನೀ ಭಾರತೀಯ ಶ್ಲೋಕ ಸಂಖ್ಯೆ 16 ರಿಂದ 19 ಗಮನಿಸಿದರೆ, ಶಂ.ಬಾ. ಅವರ ಅಭಿಪ್ರಾಯಕ್ಕೆ, ಬಹುಶಃ ಬಂಗಾಲಿಯಲ್ಲೋ ಅಥವಾ ಅವರ ಶ್ರೀ ಅರವಿಂದರ ಇನ್ನಿತರ ಬರಹಗಳಲ್ಲಿ, ಭಾರತದ ಮಾನಸಿಕ ವಿಷಣ್ಣತೆಯ ಬಗೆಗೆ ಇರುವ ಸಾತ್ವಿಕ ಆಕ್ರೋಷದ ಬಗೆಗೆ ಲೇಖನಗಳು ಇರಬಹುದು ಎನಿಸುತ್ತದೆ. 1857ರ ಮ್ಯುಟಿನಿ (ಸೈನಿಕರ ದಂಗೆ) ಯಿಂದ ಇಡೀ ಭಾರತವು ಸ್ವಾತಂತ್ರ್ಯದ ಸಲುವಾಗಿ ಹೋರಾಟ ಮಾಡಲು ಸನ್ನದ್ಧಗೊಳ್ಳುತ್ತಿತ್ತು

ಎನ್ನುವದನ್ನು, ಶ್ರೀ ಅರವಿಂದರ "ಭವಾನೀ ಭಾರತೀ" ರೂಪುಗೊಂಡಿದ್ದರೆ, ದೇಶಾದ್ಯಂತ ವಿದ್ವತ್ ವಲಯದಲ್ಲಿಯೂ ಈ ಹೋರಾಟ ಯಾವ ಹಂತದಲ್ಲಿ ಬೀಜಗೊಳ್ಳುತ್ತಿತ್ತು ಎನ್ನುವದನ್ನು ಕಾಣಬಹುದು. ಭಾರತದ ಈ ನಿರ್ವಿಣ್ಣ ಮನೋಸ್ಥಿತಿಯ ಬಗೆಗೆ ಶ್ರೀ ಅರವಿಂದರ 'ಪ್ರಾರಂಭಿಕ ಲೇಖನಗಳಲ್ಲಿ' ಹಾಗೂ ಅವರ 'ಕವಿತೆ'(ಸಾನೆಟ್)ಗಳಲ್ಲಿ ಈ ದೇಶ ಪ್ರೇಮದ ಬಗೆಗೆ ತೀವ್ರ ಅಭೀಪ್ಸೆ ಇರುವದನ್ನು ಕಾಣುತ್ತೇವೆ. ಜನರಲ್ಲಿ ಜಾಗ್ರತಿ ತರುವದರ ಸಲುವಾಗಿ, ಅವರು ಇದೇ ಸಂದರ್ಭದಲ್ಲಿ "ತೀವ್ರಗಾಮೀ ಪಂಥ"ವನ್ನು ಅನುಸರಿಸಿದ್ದರಿಂದ, ಆಗಿನ ಕಾಂಗ್ರೆಸ್ ವ್ಯವಸ್ಥೆಯಲ್ಲಿಯೂ ಎರಡು – ಮಂದಗಾಮಿ ಹಾಗೂ ತೀವ್ರಗಾಮಿ – ನಿರ್ಮಾಣಗೊಂಡಿದ್ದವು.

2. ಭಾರತದ ಜನಸಂಖ್ಯೆ 1920ರ ಸಮಯಕ್ಕೆ 30 ಕೋಟಿ. ಇಲ್ಲಿ ಭಾರತವೆಂದರೆ ಅಖಂಡ ಭಾರತ. ಆಗ ಪಾಕಿಸ್ತಾನ–ಬಾಂಗ್ಲಾ ದೇಶಗಳು ಇರಲೇ ಇಲ್ಲ. ಜೊತೆಗೆ ಬ್ರಹ್ಮದೇಶದ ಭಾಗವೂ ಸಹಿತ ಬ್ರಿಟೀಶ್ ಭಾರತವಾಗಿಯೇ ಇತ್ತು. ಇಲ್ಲಿ ಅವಾಢವ್ಯ ಎನ್ನುವದು ಪ್ರಚಂಡ, ಅಖಂಡ ಎನ್ನುವ ಅರ್ಥದಲ್ಲಿದೆ. ಅದೇ ರೀತಿಯಲ್ಲಿ "ಘಡಾಮೋಡಿ" ಎನ್ನುವದೂ ಸಹಿತ ಘಟಿಸಿದ ಘಟನಾವಳಿಗಳು ಎಂದಾಗುತ್ತದೆ.

3. ಸಾಮಾನ್ಯವಾಗಿ ನದಿಗಳನ್ನು ಸ್ತ್ರೀವಾಚಕವಾಗಿಯೇ ರೂಪಿಸಲಾಗಿದೆ. ಆದರೆ ಅಪರೂಪವೆನ್ನುವಂತೆ 'ಗಂಡು ನದಿ' (ಇದನ್ನು ನದ ಎನ್ನುತ್ತಾರೆ) – ನದವಾಗಿ ಕೆಲವು ಹೆಸರುಗಳಿವೆ. ಉದಾ: ಬ್ರಹ್ಮಪುತ್ರ, ಕರ್ನಾಟಕದಲ್ಲಿ ಧರ್ಮ, ಉತ್ತರ ಭಾರತದಲ್ಲಿ ಶೋಣ ಇತ್ಯಾದಿಗಳು 'ನದ'ಗಳೆಂದೇ ಪ್ರಸಿದ್ಧವಿವೆ. [ಸಂ]

# ದಿವ್ಯ ಜೀವನ

## ಅಧ್ಯಾಯ ಮೂರು

## ಎರಡು ಬಗೆಯ ನಿರಾಕರಣೆಗಳು

**– ಅನುವಾದಕರು: ಜಾನ್ವಿ**

**ಸನ್ಯಾಸಿಯ ನಿರಾಕರಣೆ**

ಹಿಂದಿನ ಅಧ್ಯಾಯದಲ್ಲಿ ಭೌತವಾದಿಯ ಅಥವಾ ನಾಸ್ತಿಕವಾದದ ಬಲಾಬಲಗಳನ್ನು ನೋಡಿದ್ದಾಯಿತು. ಈ ಅಧ್ಯಾಯದಲ್ಲಿ ಸನ್ಯಾಸಿಯ ಅಥವಾ ಅತಿರೇಕದ ಆಧ್ಯಾತ್ಮವಾದದ ಬಲಾಬಲಗಳನ್ನು ನೋಡೋಣ.

ಈ ಅಧ್ಯಾಯದಲ್ಲಿ ಆರಂಭದ ವಾಕ್ಯ ತುಂಬ ಗೂಢವಾಗಿದೆ. Still there is a beyond. ಏಕೆಂದರೆ beyond ಆಚೆಗೆ ಅಥವಾ ವಿಶ್ವದಾಚೆಗೆ ಅನ್ನುವುದು ಒಂದು ಜಾಗ, ಜಗತ್ತು, ಲೋಕ ಅಲ್ಲ; ಅಲ್ಲಿರುವುದು ಅವ್ಯಕ್ತ, ಮೌನ, ನಿರಾಕಾರ. ಆಚೆಗೆ ಇರುವ ಯಾವುದೂ ಮಾನವನ ಗ್ರಹಿಕೆಗೆ ನಿಲುಕಲಾರದ್ದು. ಆದರೂ ಅಲ್ಲಿ 'ಮಾನವನ ಅರಿವಿಗೆ ಮೀರಿದ ಏನೋ ಒಂದು ಇದು; ಅದು ಸತ್ಯ' ಎಂದು ಖಚಿತವಾಗಿ ಹೇಳುವುದರ ಮೂಲಕ ಶ್ರೀ ಅರವಿಂದರು ಈ ಅಧ್ಯಾಯವನ್ನು ಆರಂಭ ಮಾಡುತ್ತಾರೆ.

ಇಂದ್ರಿಯ ಗ್ರಾಹ್ಯ ಪ್ರಪಂಚವೊಂದೇ ಸತ್ಯ; ಇಂದ್ರಿಯಾಣಾಮ–ಗೋಚರವಾದದ್ದು ಸ್ವೀಕಾರಾರ್ಹವಲ್ಲ, ಏಕೆಂದರೆ ಅದು ವೈಚಾರಿಕ ಭ್ರಮೆ ಎಂದು ಭೌತವಾದವು ಅಧ್ಯಾತ್ಮವನ್ನು ನಿರಾಕರಿಸಿತು. ಆದರೆ ಇತ್ತೀಚಿನ ಅನೇಕ ಸಂಶೋಧನೆಗಳು ಕೇವಲ ಅತಿರೇಕದ ಭೌತಿಕವಾದವನ್ನು ಸಮರ್ಥಿಸುತ್ತಿಲ್ಲ; ಇಂದ್ರಿಯಗಳಿಗೆ ಗೊತ್ತಿರದ ಅನೇಕ ಸಂಗತಿಗಳು ಬ್ರಹ್ಮಾಂಡದಲ್ಲಿ ಇವೆ, ಪ್ರತಿ ನಿತ್ಯ ಅಂಥ ಘಟನೆಗಳು ನಡೆಯುತ್ತಿರುತ್ತವೆ, ಅವುಗಳನ್ನು ಭ್ರಮೆ ಎಂದು ಅಲ್ಲಗಳೆಯಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿವೆ. ಕೇವಲ ನಿಸರ್ಗದತ್ತ ಸ್ಥೂಲ ಇಂದ್ರಿಯಗಳಿಗೆ ಅರಿವಾಗದಿದ್ದರೂ ನಮ್ಮೊಳಗೆಯೇ, ನಾವೇ ಬೆಳೆಸಿಕೊಳ್ಳಲೂಬಹುದಾದ ಸೂಕ್ಷ್ಮ ಇಂದ್ರಿಯಗಳಿಂದ ಅಂಥ ಅಲೌಕಿಕ ಸಂಗತಿಗಳ ಅರಿವನ್ನು ಪಡೆಯಲು ಸಾಧ್ಯ ಎಂಬುದನ್ನು ವಿಜ್ಞಾನ ದೃಢಪಡಿಸಿದೆ.

'ಪುರಾಣಮಿತ್ಯೇವ ಸಾಧು ಸರ್ವಂ' ಎಂದು ಕಣ್ಣು ಮುಚ್ಚಿ ಕುಳಿತವರಿಗೆ, ಕೇವಲ ತರ್ಕ ಮತ್ತು ಬುದ್ಧಿಯನ್ನೇ ನಂಬಿದ ಬುದ್ಧಿ ಜೀವಿಗಳಿಗೆ ಈ 'ಆಚೆಗಿನ' ಸತ್ಯದ ಅಭ್ಯಾಸ ಆಗಲಿಕ್ಕಿಲ್ಲ; ಅವರು ಒಂದು ರೀತಿಯ ಮತಾಂಧತೆ(ಬುದ್ಧಿಯ ಅಥವಾ ಬುದ್ಧಿಹೀನತೆಯ)ಯಲ್ಲಿ ಬದುಕುವವರಾಗಿರುತ್ತಾರೆ. ತರ್ಕ ಅಥವಾ ಯುಕ್ತಿ ಎರಡು ಅಲುಗುಗಳಿರುವ ಕತ್ತಿ ಇದ್ದಂತೆ; ಅದರ ಸಹಾಯದಿಂದ ಒಂದು ವಿಷಯವನ್ನು ಅಲ್ಲಗಳೆಯಲೂಬಹುದು, ಸಮರ್ಥಿಸಲೂಬಹುದು. ಆದರೆ ಅನುಭವವನ್ನು ಅಲ್ಲಗಳೆಯುವ ತರ್ಕವನ್ನು ದೂರವಿಡುವುದು ಅತಿ ಮುಖ್ಯ. ಅನುಭವವನ್ನು, – ಸರಿಯಾದ ಅನುಭವವನ್ನು ಸಮರ್ಥಿಸುವ, ವಿವರಿಸುವ ತರ್ಕ ನಮಗೆ ಬೇಕು. ಅಂದಾಗ ಮಾತ್ರ ಜ್ಞಾನದ ಬಾಗಿಲು ತೆರೆಯುವುದು.

ಇಂದ್ರಿಯಗಳಿಗೆ ನಿಲುಕದ ಅತಿಭೌತಿಕ ಸಂಗತಿಗಳನ್ನು ಸತ್ಯವೆಂದು ನೋಡುವ ನಮ್ಮ ವಿಧಾನ ಅಪರಿಪೂರ್ಣವಾಗಿರಬಹುದು, ಆ ಮಾತು ಬೇರೆ. ವಿಧಾನ ಅಥವಾ ಉಪಕರಣಗಳು ದೋಷಯುಕ್ತವಾಗಿದೆ ಎಂದ ಮಾತ್ರಕ್ಕೆ ಅತಿಭೌತಿಕ ಸಂಗತಿಯೇ ಭ್ರಮೆ ಎಂದು ತಳ್ಳಿಹಾಕುವುದು ಬಹು ದೊಡ್ಡ ತಪ್ಪಾಗುತ್ತದೆ. ನಮ್ಮ ವಿಧಾನವನ್ನು, ಉಪಕರಣಗಳನ್ನು, ಅವು ನೀಡಿರುವ ಪುರಾವೆಗಳನ್ನು, ಪುನಃ ಪರಿಶೀಲನೆಮಾಡಿ, ಸುಧಾರಣೆ ಮಾಡುವುದು ಅವಶ್ಯವಿದೆ ಅನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಅನುಭವವನ್ನು ಅಸತ್ಯ, ಮಿಥ್ಯೆ ಎಂದು ಸಾರಸಗಟಾಗಿ ನಿರಾಕರಿಸುವುದು ಮಾತ್ರ ಸರಿಯಾದ ಕ್ರಮ ಅಲ್ಲ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಹಸಿವು, ಪ್ರೀತಿ, ಪ್ರೇಮ ಮುಂತಾದ ಭಾವನೆಗಳಿಗೆ ಭೌತಿಕ ಪುರಾವೆಗಳಿಲ್ಲ ಎಂಬ ಕಾರಣಕ್ಕೆ ನಿರಾಕರಿಸಲು ಸಾಧ್ಯವಾಗದು; ಪರಮಾಣುವಿನ ಆಂತರಿಕ ಘಟಕಗಳ ವಿಜ್ಞಾನವನ್ನು ಈಗ ಭೌತಿಕ ವಿಜ್ಞಾನವೆಂದೇ ಅಂಗೀಕರಿಸಲಾಗಿದೆ. ಒಟ್ಟಿನಲ್ಲಿ ಇಂದ್ರಿಯಗಳ ಗ್ರಹಿಕೆಗೆ 'ಆಚೆಗಿರುವ' ಸಂಗತಿಗಳನ್ನು, ಘಟಕಗಳನ್ನು, ಘಟನೆಗಳನ್ನು ಮಿಥ್ಯೆ, ಭ್ರಮೆ ಎಂದು ತಳ್ಳಿಹಾಕುವುದು ಸರಿಯಾದ ಕ್ರಮವಲ್ಲ ಎಂಬುದನ್ನು ನಾವು ತಿಳಿದುಕೊಳ್ಳಬೇಕು.

ನಮ್ಮ ಭೌತಿಕ ಇಂದ್ರಿಯಗಳಿಗೆ ನಿಲುಕದ ಪದಾರ್ಥಗಳು ಮತ್ತು ಸಂಗತಿಗಳಿವೆ ಎನ್ನುವದನ್ನು ಒಪ್ಪಿದ ಮೇಲೆ, ಅವುಗಳ ಪ್ರಭಾವ ನಮ್ಮ ಜಗತ್ತಿನ ಮೇಲೆ ಆಗುವುದೇ? ಆಗುವುದಿಲ್ಲ ಅನ್ನುವುದಾದರೆ, ಅವುಗಳ ಬಗ್ಗೆ

ತಿಳಿದುಕೊಳ್ಳುವ ಪ್ರಯತ್ನ ವ್ಯರ್ಥವಾಗುತ್ತದೆ. ಇದು ಆಗುತ್ತದೆ ಅನ್ನುವುದಾದರೆ ಅದು ಹೇಗೆ? ಎಷ್ಟರ ಮಟ್ಟಿಗೆ? ಅನ್ನುವುದನ್ನು ವಿಶದೀಕರಿಸಬೇಕಾಗುತ್ತದೆ. ವಿಶ್ವಾತೀತವಾದ ಪದಾರ್ಥಗಳು, ಸಂಗತಿಗಳು ಇವೆ; ಅವುಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುವ ಕ್ರಮವೂ ಇದೆ. ಅವುಗಳ ಪ್ರಭಾವ ನಮ್ಮ ಜಗತ್ತಿನ ಮೇಲೆ ಆಗುತ್ತದೆ, ನಮ್ಮ ಮೇಲೆ ಆಗುತ್ತದೆ; ನಾವು ತುಸು ಜಾಗ್ರತೆ ವಹಿಸಿದರೆ ಇದು ನಮ್ಮ ಅರಿವಿಗೆ ಬರುತ್ತದೆ. ನಮ್ಮ ಲೋಕ ಹಾಗೂ ಇತರ ಎಲ್ಲ ಲೋಕಗಳೂ ನಮ್ಮ ಅನುಭವದ ಚೌಕಟ್ಟು ಇದ್ದಂತೆ; ಇಂದ್ರಿಯಗಳು ಅನುಭವದ ಸಾಧನಗಳು ಮಾತ್ರ.

ಮೂಲದಲ್ಲಿ ಇರುವುದು ಪ್ರಜ್ಞಾಶಕ್ತಿಯೇ. ಈ ವಿಶ್ವ, ಬ್ರಹ್ಮಾಂಡ ಅದರ ಕಾರ್ಯಕ್ಷೇತ್ರ. ಅದರ ಎದುರಿನಲ್ಲಿ ಇಡೀ ವಿಶ್ವ, ವಿಶ್ವದಲ್ಲಿರುವ ಎಲ್ಲ ಘಟಕಗಳು ತಮ್ಮ ತಮ್ಮ ಸಾಕ್ಷ್ಯ ಒದಗಿಸುತ್ತವೆ. 'ಪ್ರಜ್ಞೆ'ಯೊಂದೇ ಎಲ್ಲದರ ಸಾಕ್ಷಿ. ಮಾನವನು ಈ ಜಗತ್ತನ್ನು ಯಾವ ರೀತಿ ನೋಡುತ್ತಾನೆ ಎಂಬುದು ಮಹತ್ವದಲ್ಲ; ಏಕೆಂದರೆ ಅದು ಅವನ ವ್ಯಕ್ತಿನಿಷ್ಠ–ನೋಟ. ವಸ್ತುನಿಷ್ಠ ಅನುಭವ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುವ ಸಾಧ್ಯತೆ ಇದೆ. ಆದರೆ ವ್ಯಕ್ತಿಯೇ ಕರ್ತೃವಾಗಿರುವುದರಿಂದ ಅವನ ವಿವರಣೆ ಪ್ರಾಮುಖ್ಯ ಪಡೆಯುತ್ತದೆ, ಅದರ ಹೊರಲಾಗಿ ಬೇರೆ 'ಸತ್ಯ' ವಸ್ತುಗಳಿಗೆ, ಜಗತ್ತಿಗೆ ಇಲ್ಲ. ಈ ವಾದವೂ ಸತ್ಯವೇ. ಆದರೆ ಪ್ರಪಂಚಕ್ಕೆ ಬಾಹ್ಯ ತೋರಿಕೆ ಮತ್ತು ಅಂತರಂಗದ ಇರುವಿಕೆ ಹೀಗೆ ಎರಡು ವಿಭಿನ್ನ ಸತ್ಯಗಳು ಏಕಕಾಲದಲ್ಲಿ ಇವೆ. ಅಂತರಂಗದ ಸತ್ಯ ಬದಲಾಗುವುದಿಲ್ಲ. ಬಾಹ್ಯ ಸ್ವರೂಪ ಮಾತ್ರ ಬದಲಾಗುತ್ತ ಇರುತ್ತದೆ. ಎರಡೂ ಸತ್ಯಗಳೂ ನಿಜವೇ, ಎರಡೂ ವಾಸ್ತವಿಕವೇ. ಯಾವುದನ್ನೂ ಸುಳ್ಳೆಂದು ಹೇಳಲು ಬರುವುದಿಲ್ಲ. ಆದರೆ ಆಂತರಿಕ ಸತ್ಯವು, ಈ ಬಾಹ್ಯ ಪ್ರಕಟನೆಯ ಮೊದಲೂ ಇತ್ತು, ಆನಂತರ ಅಂದರೆ ಬಾಹ್ಯ ತೋರಿಕೆ ನಾಶವಾದನಂತರವೂ ಇರುತ್ತದೆ. ಬಾಹ್ಯದ ಮೇಲೆ ಆಂತರಿಕ ಸತ್ತೆ ಅವಲಂಬಿತವಾಗಿಲ್ಲ; ಬಾಹ್ಯವು ಮಾತ್ರ ಈ ಆಂತರಿಕ ಸತ್ತೆಯ ಮೇಲೆ ಅವಲಂಬಿತವಾಗಿದೆ. ನಮಗೆ, ಅಂದರೆ ಮಾನವನಿಗೆ ಬಾಹ್ಯವೇ ಮುಖ್ಯ, ಅದರ ಮೇಲಿಂದ ಜೀವನ ವ್ಯಾಪಾರ ಬಾಹ್ಯದ ಮೇಲೆಯೇ.

ಭೌತಿಕವಾದವನ್ನು, ಅಥವಾ ಬಾಹ್ಯವಾದುದನ್ನೇ ಅತಿಶಯವಾಗಿ ಬೆಳೆಸಿದರೆ ವ್ಯಕ್ತಿಗತ ಜೀವನಕ್ಕೆ ಬೆಲೆ ಏನೂ ಉಳಿಯುವುದಿಲ್ಲ. ನೈತಿಕ ಮಟ್ಟವೇ ಕುಸಿದು

ಹೋಗುತ್ತದೆ. ತಿನ್ನು, ಕುಡಿ, ಮೋಜುಮಾಡು ಎಂಬ ಅಭಿಪ್ರಾಯಕ್ಕೆ ಪ್ರಾಧಾನ್ಯತೆ ಒಂದು ಜೀವನದ ಉದ್ದೇಶವೇ ಕಳೆದು ಹೋಗುತ್ತದೆ. ಪ್ರಾಣಿಕ ತೃಪ್ತಿ ಮುಖ್ಯ, ನೈತಿಕತೆ ಎಂಬುದೇ ಒಂದು ಭ್ರಮೆ ಎಂಬ ಅಭಿಪ್ರಾಯ ಎಲ್ಲೆಡೆ ಹರಡುತ್ತದೆ. ಇದೂ ಸಹ ಒಂದು ರೀತಿಯಲ್ಲಿ 'ವಿಪರೀತ ಅದ್ವೈತ' ವಾದವೇ! ಎಲ್ಲವೂ ತಾತ್ಕಾಲಿಕ, ನಾನು, ನೀನು, ಜಗತ್ತು, ಸೃಷ್ಟಿ ಎಲ್ಲವೂ ತಾತ್ಕಾಲಿಕ ಎಂಬ ವಾದವೇ ಪ್ರಬಲವಾದರೆ ಬದುಕಿನ ಸಮತೋಲನ ಹಾಳಾಗುತ್ತದೆ. ಇನ್ನೊಂದು ಬದಿಯಲ್ಲಿ ವಸ್ತುನಿಷ್ಠ ಜಗತ್ತನ್ನು ಸಂಪೂರ್ಣ ನಿರಾಕರಿಸುವ ಮಟ್ಟಕ್ಕೆ, ಅದು ವಾಸ್ತವದಲ್ಲಿ ಇಲ್ಲವೇ ಇಲ್ಲ ಎಂಬ ಮೊಂಡು ವಾದವನ್ನು ಅತಿಯಾಗಿ ಬೆಳೆಸಿದರೆ ಅಹಂನ ಮಿಥ್ಯಾಗುಣ, ಮಾನವನ ಬದುಕಿನ ಅರ್ಥಹೀನತೆ, ಕೊನೆಗೆ ಅಸತ್‌ನಲ್ಲಿ ಕರಗಿಹೋಗುವುದೇ ಏಕೈಕ ಉಪಾಯವೆಂದು ಭಾಸವಾಗುತ್ತದೆ. ಶ್ರೀ ಅರವಿಂದರು ಎರಡೂ ವಾದಗಳ ಅತಿರೇಕತೆಯಿಂದ ಆಗುವ ಪರಿಣಾಮವನ್ನು ಕೂಡ ಚರ್ಚಿಸುತ್ತಾರೆ. ಪೌರ್ವಾತ್ಯ ಮತ್ತು ಪಾಶ್ಚಾತ್ಯ ರಾಷ್ಟ್ರಗಳ ಜನ ಜೀವನದ ಮೇಲೆ ಆಗಿರುವ ಪರಿಣಾಮವನ್ನು ನಿದರ್ಶನವಾಗಿ ತೆಗೆದುಕೊಂಡು ಅದರ ವಿಮರ್ಶೆ ಮಾಡುತ್ತಾರೆ.

ಭೌತವಾದದ ಮುಖ್ಯ ಪರಿಣಾಮವೇ? ಹೇಗಿದೆ ಎಂದು ಶ್ರೀ ಅರವಿಂದರು ಇದನ್ನು ತುಂಬ ಸುಂದರವಾದ ರೀತಿಯಲ್ಲಿ ಹೇಳುತ್ತಾರೆ. "A FEVERISH EFFORT OF THE INDIRIDENAL TO SUDTCT WHAT HE MAY FROM A TRANSEEAT EXISTENCE" ನಶ್ವರವಾದ ತನ್ನ ಅಸ್ತಿತ್ವದಲ್ಲಿ(ಬದುಕಿನಲ್ಲಿ) ಸಾಧ್ಯವಿದ್ದಷ್ಟನ್ನು ಅವಸರವಸರವಾಗಿ ಬಾಚಿಕೊಳ್ಳುವ ಪ್ರವೃತ್ತಿ ವ್ಯಕ್ತಿಯಲ್ಲಿ ಬೆಳೆಯುತ್ತದೆ. ಒಂದು ವೇಳೆ ಭೌತವಾದಿಗೆ ತುಸು ಉನ್ನತ ಆದರ್ಶವಿದ್ದರೆ "ನಿರುದ್ವಿಗ್ನತೆಯಿಂದ ಸ್ವಾರ್ಥವನ್ನು ಬಿಟ್ಟು ಸಮಾಜ ಸೇವೆಗೆ" ತೊಡಗಬಹುದು. ಇದನ್ನು ಮಾನವೀಯತೆ ಎಂದು ಕರೆಯುವುದುಂಟು. ಸಾಯುವಾಗ ನಾನೇನೂ ಜೊತೆಗೆ ಒಯ್ಯುವುದಿಲ್ಲ, ನನ್ನಲ್ಲಿರುವುದರಲ್ಲಿ ತುಸು ಇತರರಿಗೆ ಹಂಚಿದರಾಯಿತು ಎಂಬ ಮನೋಭಾವ ಅದು. ಒಬ್ಬ ವಿಜ್ಞಾನಿ, ಧಾರ್ಮಿಕ ವ್ಯಕ್ತಿ, ದೇಶಪ್ರೇಮಿ ಯಾರಾದರೂ ಸರಿ, ಈ ಮನೋಧರ್ಮದಿಂದ ಸಮಾಜ ಸೇವೆಗೆ ತೊಡಗಬಹುದು. ಇದೇ ರೀತಿ, ಇದಕ್ಕೆ ತೀರ ವಿರುದ್ಧವಾಗಿ, ಸನ್ಯಾಸಿಯಾದವನು ಸಾಕ್ಷಾತ್ಕಾರ ಹೊಂದಿದ ನಂತರ ಪರಬ್ರಹ್ಮ ಮಾತ್ರ, ಈ

ಜಗತ್ತು ಸುಳ್ಳು ಇದು ಭ್ರಮೆ ಎಂಬ ನಿರ್ಣಯಕ್ಕೆ ಬರುವುದುಂಟು. ಆ ಪರವಸ್ತುವನ್ನು ತಿಳಿಯುವಾಗ ಹಾಗೂ ತಿಳಿದ ಮೇಲೆ ಈ ಜಗದಲ್ಲಿ ವ್ಯರ್ಥ ಕಾಲಹರಣ ಏಕೆ ಮಾಡಬೇಕು? ಇಂಥ ಮನೋಧರ್ಮ ಬೆಳೆಯುತ್ತದೆ. ಭಾರತದಲ್ಲಿ ಇಂಥ ಮನೋಧರ್ಮ ಈಗಲೂ ಸಹ ಅಲ್ಲಲ್ಲಿ ನಮಗೆ ನೋಡಲು ಸಿಗುತ್ತದೆ. ಇದರಿಂದಾಗಿಯೇ ನಮ್ಮಲ್ಲಿ ಭೌತಿಕ ಬಡತನ ತಲೆದೋರಿದೆ.

ಕೇವಲ ಭೌತಿಕ ಸಾಕ್ಷಿಗಳ ಆಧಾರದ ಮೇಲೆ ನಾವು ನಮ್ಮ ಸಿದ್ಧಾಂತ ಕಟ್ಟಬಾರದು. ಏಕೆಂದರೆ ಭೌತಿಕ ಸಾಕ್ಷ್ಯಗಳು, ತರ್ಕ ಮತ್ತು ಅನುಭವ ಇವುಗಳ ನಡುವೆ ಅಪಾರ ಅಂತರವಿದೆ. ದೊಡ್ಡ ಕಂದಕವಿದೆ. ಶ್ರೀ ಅರವಿಂದರು ಹೇಳುವಂತೆ, ಮೂಲಭೂತವಾಗಿ ಮೂರು ಬಗೆಯ ಪ್ರಜ್ಞೆಗಳಿರುತ್ತವೆ; ವಿಶ್ವಾತೀತ, ವಿಶ್ವಂಭರ ಮತ್ತು ವೈಯಕ್ತಿಕ. ವೈಯಕ್ತಿಕ ಸ್ತರದಲ್ಲಿ ನಾವು (ಅಥವಾ ಮಾನವನು) ಸಮನ್ವಯ ಮಾಡಲಾರೆವು. ವಿಶ್ವಾತ್ಮಕ ಸ್ತರದಲ್ಲಿ ನಾವು ಅಸ್ತಿತ್ವದ ಏಕತೆಯನ್ನು ಕಾಣಬಹುದು. ಆದರೆ ವಿಶ್ವಾತೀತ(ಆಚೆಗೆ) ಸ್ತರದಲ್ಲಿ ನಾವು ಕಾಣುವ ಏಕತೆಗೂ ಈ ವಿಶ್ವಾತ್ಮಕ ಸ್ತರದಲ್ಲಿನ ಏಕತೆಗೂ ಬಹಳ ಅಂತರವಿದೆ. ವಿಶ್ವಪ್ರಜ್ಞೆಯಲ್ಲಿ ಎಲ್ಲ (ಎಲ್ಲರ) ವಿಚಾರಗಳು, ಅನಿಸಿಕೆಗಳು, ಸಂವೇದನೆಗಳು, ಅಷ್ಟೇ ಪ್ರತಿ ವ್ಯಕ್ತಿಯ ಶಾರೀರಕ ಪ್ರತ್ಯೇಕತೆಯು ಒಂದೇ 'ಮೂಲದಿಂದ' ಬಂದಿವೆ ಎಂಬುದನ್ನು ವಿಜ್ಞಾನಿ ಕೂಡ ಒಪ್ಪುತ್ತಾರೆ.

ವಿಶ್ವ–ಮಾನಸ ಸ್ಪಂದನೆಗಳನ್ನು ಗ್ರಹಿಸುವ, ಸ್ವೀಕರಿಸುವ ಕೇಂದ್ರಗಳೆಂದರೆ ನಮ್ಮ ನಮ್ಮ ಮನಸ್ಸು. ನಾವು ಬೇರೆ ಬೇರೆ ಮನಸ್ಸುಳ್ಳವರಲ್ಲ. ನಾವು ಅಂದರೆ ಮಾನವರಾಗಿ ನಾವು ಒಂದೇ ವಿಶ್ವ–ಮಾನಸದ ಅನೇಕ ಆಕಾರ(ಜೀವಿ)ಗಳು. ವಿಶ್ವ ಭೌತಿಕ ಪದಾರ್ಥ ಹೇಗೆ ಒಂದೇ ಎಂಬುದು ನಮಗೆ ತಿಳಿದಿದೆಯೋ, ಅದೇ ರೀತಿಯಲ್ಲಿ ನಾವೆಲ್ಲ ವಿಶ್ವಮಾನಸದ ಸಣ್ಣ ಸಣ್ಣ ಕೇಂದ್ರಗಳಿದ್ದಂತೆ. ಅದೇ ರೀತಿ ಭೌತಿಕ ಪದಾರ್ಥ ಕೂಡ. ಬೆಲ್ ಎಂಬ ವಿಜ್ಞಾನಿಯು ಸಿದ್ಧಪಡಿಸಿ ತೋರಿಸಿದಂತೆ, ಭೌತಿಕ ಪದಾರ್ಥವೆಲ್ಲವೂ ಒಂದೆ, ಅವಿಭಾಜ್ಯವಾಗಿ ಒಂದೇ. ಇದನ್ನೇ ಆಧ್ಯಾತ್ಮವಾದಿಯೂ ಹೇಳುತ್ತಾನೆ, ಎಲ್ಲ ಭೌತಿಕ ಪದಾರ್ಥವೂ ಒಂದೇ ವಸ್ತು, ಎಲ್ಲ ಬೇರೆ ಬೇರೆ ಶರೀರಗಳು ಅದರೊಳಗೆ ಹುಟ್ಟುತ್ತವೆ, ಅಸಂಖ್ಯವಾಗಿ ಬೆಳೆಯುತ್ತವೆ – ಇದೊಂದು ನಿರಂತರವಾದ ಚಕ್ರ. ಶ್ರೀ ಅರವಿಂದರು ಸ್ಪಷ್ಟವಾಗಿ ಹೇಳುವಂತೆ, ಆಧುನಿಕ ಮನಃ–ಶಾಸ್ತ್ರವು ನಿಧಾನವಾಗಿ ವಿಶ್ವಪ್ರಜ್ಞೆಯನ್ನು

ಒಪ್ಪುತ್ತಲಿದೆ. ಕೆಲವು ಸಲ ಭ್ರಮೆ, ಮನೋವಿಕಲ್ಪ ಎಂದು ತಳ್ಳಿಹಾಕಲು ಪ್ರಯತ್ನಿಸಿದರೂ ವಿಶ್ವಪ್ರಜ್ಞೆಯ ಅಧ್ಯಯನದ ಬಗ್ಗೆ ವೈದ್ಯ ಹಾಗೂ ಮನೋತಜ್ಞರಲ್ಲಿ ಒಲವು ಮೂಡುತ್ತಿದೆ. ಪೌರ್ವಾತ್ಯ ಅಂದರೆ ಭಾರತದಂಥ ರಾಷ್ಟ್ರಗಳಲ್ಲಿ ಇದನ್ನು ಎಂದೋ ಒಪ್ಪಿಕೊಂಡಿದ್ದಲ್ಲದೇ, ವೈಯಕ್ತಿಕ ಬೆಳವಣಿಗೆಗೆ ಅದೇ 'ಗುರಿ' ಎಂದೂ ನಿಗದಿಪಡಿಸಿದೆ. ವಿಶ್ವಪ್ರಜ್ಞೆಯ ಸಿದ್ಧಿಯಾದಾಗ ನಾವು ವಿಶ್ವಾತ್ಮಕ ಅಸ್ತಿತ್ವದಲ್ಲಿ ನೆಲೆಸುತ್ತೇವೆ; ನಮ್ಮ ನಮ್ಮ ವೈಯಕ್ತಿಕ ನೆಲೆಯಿಂದ ವಿಶ್ವಾತ್ಮಕ ನೆಲೆಗೆ ನಮ್ಮ ಆಲಾಸ ಬದಲಾಗುತ್ತದೆ. ನಮ್ಮ ವೈಯಕ್ತಿಕ ಪ್ರಜ್ಞೆಯ ಮಿತಿಗಳು, ಕಟ್ಟು ಪಾಡುಗಳು, ನಿಯಮಗಳು, ಮೌಲ್ಯಗಳು, ಆದರ್ಶಗಳು ಎಲ್ಲ ಬದಲಾಗುತ್ತದೆ. ನಮ್ಮ ಸಂವೇದನಾತ್ಮಕ ಪ್ರತಿಕ್ರಿಯೆ ಕೂಡ ಬದಲಾಗುತ್ತದೆ. ವಿಶ್ವಪ್ರಜ್ಞೆ ಪ್ರಾಪ್ತಿಯಾದಾಗ ನಮ್ಮ ವೈಯಕ್ತಿಕ ಅಸ್ತಿತ್ವಕ್ಕೇನೂ ಧಕ್ಕೆಯಾಗುವುದಿಲ್ಲ; ನಮ್ಮ ಮೊದಲಿನ ವೈಯಕ್ತಿಕ ಅಹಂ ಪ್ರಜ್ಞೆಯಲ್ಲಿ ನಾವು ಹೇಗಿದ್ದೆವೋ ಹಾಗೆಯೇ ಇರುತ್ತೇವೆ. ನಾವು ಕ್ರಿಯಾಶೀಲರಾಗಿ, ಸಂವಹನಶೀಲರಾಗಿ, ಪ್ರತಿಸ್ಪಂದನಾಶೀಲರಾಗಿ ಮೊದಲಿನಂತೆಯೇ ಇರುತ್ತೇವೆ. ಆದರೆ ಈ ಸಂವೇದನೆ, ಕ್ರಿಯಾಶೀಲತೆ, ಪ್ರತಿಸ್ಪಂದನೆ ನೂರಾರು ಪಟ್ಟು ಹೆಚ್ಚಾಗಿರುತ್ತದೆ, ಅವ್ಯಾಮಿಶ್ರಿತವಾಗಿರುತ್ತದೆ.

ವಿಶ್ವಪ್ರಜ್ಞೆಯಲ್ಲಿ ಪ್ರವೇಶಿಸಿದಾಗ ಅತಿಮಾನಸದ ಅರಿವು ಬರುತ್ತದೆ. ಇಡೀ ವಿಶ್ವವು ಅತಿಮಾನಸದ ಪ್ರಕಟನೆಯೇ ಆಗಿದೆ ಎಂದೂ, ಅದರ ಮೂಲಕವೇ ಕೆಲಸ ಮಾಡುವುದೆಂದೂ ಅರಿವಾಗುತ್ತದೆ. ಪ್ರಜ್ಞೆಯುಳ್ಳ ಪ್ರತಿ ಜೀವಿಯೂ ಅತಿಮಾನಸದ ರೂಪವೇ; ಅದೇ ಸಾಮರಸ್ಯ, ಅದೇ ಏಕತೆಯ ಆಧಾರದ ಮೇಲೆಯೇ ಜೀವಿ(ಅಥವಾ ಮಾನವ) ಬದುಕಿದೆ, ಇಡೀ ವಿಶ್ವದ ಅಸ್ತಿತ್ವವು ಅತಿಮಾನಸದ ಮೇಲೆಯೇ ಆಧಾರಿತವಾಗಿದೆ ಎಂಬ ವಿಶ್ವೋತ್ತರ ಸತ್ಯದ ಅರಿವಾಗುತ್ತದೆ. ವಿಶ್ವಪ್ರಜ್ಞೆಯಲ್ಲಿ ಪ್ರವೇಶಿಸುವುದು ಹೇಗೆ ಸಾಧ್ಯಯವಾಗುವುದೋ ಹಾಗೆ ವಿಶ್ವಾತೀತ ಪ್ರಜ್ಞೆಯಲ್ಲಿ ಪ್ರವೇಶಿಸುವುದೇ? ಎಂಬ ಪ್ರಶ್ನೆ ಸಹಜ. ಹೌದು, ಸಾಧ್ಯವಿದೆ. ವಿಶ್ವಾತೀತದೆಡೆಗೆ ಹೋಗಲು ಸಾಧ್ಯವಿದೆ ಅನ್ನುವುದಾದರೆ ಅದು ವಿಶ್ವ ಸನ್ಯಾಸಕ್ಕೆ ಸಮನಲ್ಲವೇ? ವಿಶ್ವ ಸನ್ಯಾಸವೆಂದರೆ, ವಿಶ್ವವನ್ನೂ ಮೀರಿ, ಅಥವಾ ಅದನ್ನು ಬಿಟ್ಟು ಹೋಗುವುದು ಎಂದರ್ಥವಲ್ಲವೇ? ಎಂದು ಕೇಳಬಹುದು. ಇದನ್ನು ಶ್ರೀ ಅರವಿಂದರು ಸ್ಪಷ್ಟಪಡಿಸಿದ್ದು ಹೀಗೆ: ತಾವು ಈಗಾಗಲೇ ಬಹು ವರ್ಷದಿಂದ ವಿಶ್ವಾತೀತ ಪ್ರಜ್ಞೆಯಲ್ಲಿ ಅಥವಾ ಪರಬ್ರಹ್ಮ ಪ್ರಜ್ಞೆಯಲ್ಲಿ ಇರುವುದಾಗಿ

ಹೇಳಿದ್ದಾರೆ. ಹಾಗಿದ್ದರೂ ಅವರೆಂದಿಗೂ ವಿಶ್ವವನ್ನು ಭ್ರಮೆ ಎಂದು, ಮಾಯೆಯೆಂದು ನಿರಾಕರಿಸಲಿಲ್ಲ. ವ್ಯಕ್ತಿಗತ ನೆಲೆಯಿಂದ ನೇರವಾಗಿ ಒಮ್ಮೆಲೇ ವಿಶ್ವಾತೀತ ಪ್ರಜ್ಞೆಗೆ ಜಿಗಿತ ಸಾಧಿಸಿದರೆ ವಿಶ್ವವೊಂದು ಕನಸಿನಂತೆ, ಭ್ರಮೆಯಂತೆ, ಮಿಥ್ಯೆ ಎಂಬಂತೆ ತೋರಬಹುದು. ಆದರೆ ಶ್ರೀ ಅರವಿಂದರು ನಿಧಾನವಾಗಿ, ಹಂತ ಹಂತವಾಗಿ, ಬಹು ಪ್ರಜ್ಞಾಪೂರ್ವಕವಾಗಿ ವಿಶ್ವಾತೀತ ಪ್ರಜ್ಞೆಗೆ ತಲುಪಿದ್ದರಿಂದ ಅವರು ಭ್ರಮಗೆ ಒಳಗಾಗಲಿಲ್ಲ. ಮಾನಸದಿಂದ ಅತಿಮಾನಸದವರೆಗಿನ ಹಂತಗಳನ್ನು ಪ್ರಜ್ಞಾಪೂರ್ವಕವಾಗಿ ದಾಟುತ್ತ ಹೋಗುವುದೇ ಶ್ರೀ ಅರವಿಂದರ ಪೂರ್ಣ ಯೋಗದ ರಹಸ್ಯವಾಗಿದೆ. ಈ ಮಧ್ಯಂತರ ಹಂತಗಳನ್ನು ಸಂಶೋಧನೆ ಮಾಡಿ, ವಿವರಿಸಿರುವುದು ಶ್ರೀ ಅರವಿಂದರ ಮಹಾನ್ ಕೊಡುಗೆಯಾಗಿದೆ.

ಈ ಮಧ್ಯಂತರದ ಹಂತಗಳ ಪರಿಚಯವಿಲ್ಲದೇ, ನೇರವಾಗಿ ವಿಶ್ವೋತ್ತೀರ್ಣ ಪ್ರಜ್ಞೆಗೆ ತಲುಪಿದರೆ ಪ್ರಪಂಚದ ವಿಷಯದಲ್ಲಿ ಬಹುದೊಡ್ಡ ಆತಂಕ ಎದುರಾಗುತ್ತದೆ. ಅದು ವ್ಯಕ್ತಿಯನ್ನು ಜೀವನ ವಿಮುಖನನ್ನಾಗಿಸುತ್ತದೆ. ಬೌದ್ಧವಾದವು ಪ್ರಾಚೀನ ಆರ್ಯರ ಸಾಮರಸ್ಯದ ಜೀವನವನ್ನು ಹದಗೆಡಿಸಿದ ಎರಡು ಸಾವಿರ ವರ್ಷಗಳ ನಂತರವೂ ಭಾರತೀಯರಲ್ಲಿ ಅದರ 'ಜೀವನ ಸನ್ಯಾಸ'ದ ಪ್ರಭಾವ ಹಾಗೆಯೇ ಉಳಿದಿದೆ. ಭಾರತದಲ್ಲಿ ಜಗನ್‌ಮಿಥ್ಯಾ–ವಾದವೊಂದೇ ಏಕೈಕ ತತ್ವಶಾಸ್ತ್ರವಲ್ಲ; ಇನ್ನೂ ಅನೇಕ ತಾತ್ವಿಕ ಚಿಂತನೆಗಳು, ನಂಬಿಕೆಗಳು, ಧಾರ್ಮಿಕ ಮತಪಂಥಗಳು ಪ್ರಚಲಿತದಲ್ಲಿವೆ. ಹಾಗೆಂದು ನಾಸ್ತಿಕ ಹಾಗೂ ಆಸ್ತಿಕ ಎರಡೂ ವಾದಗಳ ಅತಿರೇಕತೆಯ ಅಂತರವನ್ನು ಕಡಿಮೆ ಮಾಡುವ ಪ್ರಯತ್ನ ಈ ಹಿಂದೆ ನಡದೇ ಇಲ್ಲವೆಂತಲ್ಲ: ಆಗಿವೆ, ಅನೇಕ ಪ್ರಯತ್ನಗಳಾಗಿವೆ. ಆದರೆ ಅವು ಕೂಡ ಈ ಮಿಥ್ಯಾ ಆರೋಪದ ನೆರಳಿನಲ್ಲೇ ಬೆಳದಿವೆ. ಅದರಿಂದ ಭಾರತದ ಜೀವನದ ಮೇಲೆ ತುಂಬ ಕೆಟ್ಟ ಪರಿಣಾಮವುಂಟಾಗಿದೆ. ಕರ್ಮ ಸಿದ್ಧಾಂತ, ಪಾಪಪುಣ್ಯಗಳ ಕಲ್ಪನೆ, ಭವಬಂಧನ, ಮೋಕ್ಷ, ಈ ಬಂಧನದಿಂದ ಪಾರಾಗಿ ಹೋಗುವುದು, ಜನನ–ಮರಣಗಳನ್ನೇ ಇಲ್ಲವಾಗಿಸಿಬಿಡುವುದು ಮುಂತಾದ ನಿಷೇಧಕರ ಅಥವಾ ಋಣಾತ್ಮಕ ಆದರ್ಶಗಳು ಭಾರತದ ಅವನತಿಗೆ ಕಾರಣವಾಗಿರುವುದು ಇತಿಹಾಸ.

ಈ ಕಠೋರ ಸಿದ್ಧಾಂತವು ಇತ್ತೀಚಿಗೆ ತುಸು ಹಿನ್ನೆಲೆಗೆ ಸರಿಯುತ್ತಿರುವುದು ಸಂತಸದ ಸಂಗತಿ. ವೈಜ್ಞಾನಿಕ ಬೆಳವಣಿಗೆ, ಮಾನವನ ಬೌದ್ಧಿಕ ಮತ್ತು ಮಾನಸಿಕ

ವಿಕಾಸ ಅವನನ್ನು ಪರಿಪೂರ್ಣತೆಯೆಡೆಗೆ ಕರೆದೊಯ್ಯುತ್ತದೆ. ಸನ್ಯಾಸದ ವೈರಾಗ್ಯದ ಸಿದ್ಧಾಂತವನ್ನು ಅಲ್ಲಗಳೆಯುವುದಲ್ಲ ಇದರ ಉದ್ದೇಶ; ವೈರಾಗ್ಯವನ್ನು ಈ ನಿಟ್ಟಿನಲ್ಲಿ ಉಪಯೋಗಿಸಿ ಹೊಸದಾರಿಯತ್ತ ಹೆಜ್ಜೆ ಹಾಕುವುದು ಈಗ ಅವಶ್ಯವಾಗಿದೆ. ನಮಗೆ ಬೇಕಾಗಿರುವುದು ವಿಶಾಲವಾದ, ಉದಾತ್ತವಾದ, ಉದಾರವಾದ, ಪೂರ್ಣತತ್ವ. ಸರ್ವಂ ಖಲ್ವಿದಂ ಬ್ರಹ್ಮ ಎಂಬ ಸತ್ಯದ ಹಿನ್ನಲೆಯಲ್ಲಿ ನಾವೀಗ ನಮ್ಮ ಬದುಕಿನ ರೂಪರೇಷೆ ಬರೆಯಬೇಕಿದೆ. ಹೊಸದಾಗಿ ಬರೆಯಬೇಕಿದೆ. ಮಾನವನಲ್ಲಿರುವ ಪರಮಾತ್ಮನ ಬಗೆಗಿರುವ ಊರ್ಧ್ವಮುಖಿ ಹಂಬಲವನ್ನು, ಪರಮಾತ್ಮನ ಕೃಪೆಯು ಕೆಳಗಿಳಿದು ಬಂದು ವಿಶ್ವ ವಿಕಾಸಕ್ಕೆ ಪುಟ ನೀಡುವ ಶಕ್ತಿ ಪ್ರಯೋಗಿಸುತ್ತಿರುವುದಕ್ಕೆ ಸರಿಯಾಗಿ ಸಮನೀಕರಿಸಿ ನೋಡಬೇಕಾಗಿದೆ. ಸಮನ್ವಯ ಸಾಧಿಸಬೇಕಾಗಿದೆ.

ಕೇವಲ ಆಸ್ತಿಕವಾದ ಮಾತ್ರ ಅಲ್ಲ, ನಾಸ್ತಿಕವಾದ ಅಥವಾ ಭೌತಿಕವಾದವೂ ಪರಮಾತ್ಮನ ಉದ್ದೇಶವನ್ನು ಈಡೇರಿಸಲು ಸಹಾಯ ಮಾಡಿದೆ. (ಪರಮಾತ್ಮನ ಉದ್ದೇಶವೆಂದರೆ ವಿಕಾಸವೇ) ಅದೇ ರೀತಿ ಆಸ್ತಿಕವಾದವೂ ಸಹ, ಭೌತಿಕವಾದಕ್ಕಿಂತ ತುಸು ಹೆಚ್ಚೇ ಪ್ರಜ್ಞಾವಿಕಾಸದ ಉದ್ದೇಶದ ಈಡೇರಿಕೆಗೆ ಸಹಾಯ ಮಾಡಿದೆ. ನಾವು ಭೌತಿಕ ವಿಜ್ಞಾನ ಅಥವಾ ಸಿದ್ಧಾಂತದ ಸತ್ಯಗಳನ್ನು ಕಾಪಾಡುವುದರ ಜೊತೆ ಅವುಗಳ ಉಪಯೋಗವನ್ನು ತೆಗೆದುಕೊಳ್ಳಬೇಕು. ಸದ್ಯದ ವ್ಯವಸ್ಥೆಗಳನ್ನು ಬದಲಿಸುವ ಪ್ರಸಂಗ ಬಂದರೂ, ಅವಶ್ಯವಿದ್ದರೆ ಹೊಸ ವ್ಯವಸ್ಥೆ ರೂಪಿಸುವ ಪ್ರಸಂಗ ಬಂದರೆ, ಅದಕ್ಕೂ ಕಟಿಬದ್ಧರಾಗಿ ಆಸ್ತಿಕ ಮತ್ತು ನಾಸ್ತಿಕ ಎರಡೂ ವಾದಗಳ ಸಮನ್ವಯ ಸಾಧಿಸಬೇಕು; ಅಂದಾಗಲೇ ಪ್ರಜ್ಞಾ ವಿಕಾಸದ ದಾರಿ ಸುಗಮವಾಗುವುದು ಎಂದು ಶ್ರೀ ಅರವಿಂದರು ಸ್ಪಷ್ಟವಾಗಿ ಹೇಳುತ್ತಾರೆ. ಮತ್ತು ಇದೇ ನಮ್ಮ ಪೂರ್ವಜರ, ಆರ್ಯರ ಜೀವನಯೋಗ ದೃಷ್ಟಿ ಎಂದು ಹೇಳುತ್ತಾರೆ.

*

**ಕೆಲ ವಿಶಿಷ್ಟ ಶಬ್ದಗಳ ಅರ್ಥಕೋಶ:**

Abstraction of thought – ಅಮೂರ್ತ ವಿಚಾರ, ವೈಚಾರಿಕ ಅಮೂರ್ತತೆ

Illusion – ಭ್ರಮೆ, ಅಭಾಸ, ಅವಿದ್ಯೆ, ಹುಸಿನಂಬಿಕೆ

Hallucination – ಭ್ರಮೆ, ಮನೋವಿಕಲ್ಪ, ಹುಸಿತೋರ್ಕೆ

Infinitidue – ಅನಂತತೆಯ ಗುಣ ವಿಶೇಷತೆ

Coroporeal sense organs – ಭೌತಿಕ (ದೈಹಿಕ) ಇಂದ್ರಿಯಗಳು

Cogent logic – ನಂಬಬಲ್ಲ ತರ್ಕ

Cognisance – ಅರಿವು, ತಿಳುವಳಿಕೆ

Supra sensible – ಸಂವೇದನಾತೀತ

Supra physical – ಅತಿಭೌತಿಕ

cognate phenomena – ಒಂದೇ ಮೂಲದ, ಸಜಾತೀಯ

Super mind – ಅತಿಮಾನಸದ (ಕೆಲವರು ಶ್ರೀಮನ (ಗೋಕಾಕ) ಸುಪ್ರಮಾನಸ, ಉನ್ಮನೀ–ಮನ (ಪುಟ್ಟು ಕುಲಕರ್ಣಿ) ಎಂದು ಕರೆಯುತ್ತಾರೆ. ಆದರೆ ಎಲ್ಲರಿಗೂ ಪರಿಚಿತವಿರುವ ಸರಳ ಶಬ್ದ ಅತಿಮಾನಸ.

(ಮನಸ್ಸು–ಉನ್ನತ ಮನಸ್ಸು–ಪ್ರಕಾಶಿತ ಮನಸ್ಸು–ಅಂತರ್ಬೋಧೆಯ ಮನಸ್ಸು–ಅಧಿ ಮಾನಸ–ಅಧಿ ಮಾನಸದ ಮೇಲಿನ ಹಂತ ಅತಿಮಾನಸ)

Sinews of energy – ಕಸುವು

Anehorite – ವಿರಕ್ತ, ಸನ್ಯಾಸಿ

Scrupple – ಪೂರಕ

(ಸಶೇಷ)

## ಶ್ರೀ ಅರವಿಂದರ
## “ಭವಾನೀ ಭಾರತೀ”

**– ಅನುವಾದ: ಪುಟ್ಟು ಕುಲಕರ್ಣಿ**

ನಾನಿರುವೆ ನಿನ್ನ ಮಾತೆ, ಓ ಪುತ್ರ, ಭಾರತದ ಕ್ಷಾತ್ರ ವೀರ್ಯ
ಶಾಶ್ವತದ ನೆಲೆಯ ಪ್ರೇಮ–ಕೃಪೆ ಪಡೆದು ದೇವರಿಗು ನಿತ್ಯ ಪ್ರೀಯ
ವಿಧಿ–ವೈರಗಣವು ಘಾತಿಸಲು ಬರದು, ಓ ಪುತ್ರ ನಿನ್ನ ದೇಶ
ಯಮನ ಜೊತೆ ಕಾಲ ಎಂದಿಗೂ ಬೀಸಲಸಮರ್ಥ ತಮ್ಮ ಪಾಶ ॥12॥

ಪರಿಶುದ್ಧ ವೀರ್ಯದುಂಬಿರುವ ಬ್ರಹ್ಮಚರ್ಯದಿಂದೀಗ ಜ್ಞಾನ
ಭೀಮತಪದಲ್ಲಿ ನೇಮ–ನಿಷ್ಠೆಯಲಿ ನೀನಾಗು ಆರ್ಯ ಮಾನ್ಯ
ಸಾವಿರದ–ಸೂರ್ಯ–ತೇಜ–ಕಾಂತಿಯಲಿ ಬೆಳಗುಗೊಂಡು ಕಾಯ
ಸಮೃದ್ಧಿಯೊಳಗೆ ಪರಿಶೋಭೆಗೊಳಿಸು ಈ ರತ್ನಗರ್ಭ ಬುವಿಯ ॥13॥

ವೀರತ್ವಪೂರ್ಣ ಕೆಚ್ಚೆದೆಯಲೀಗ ಎಚ್ಚರದಿ ಭೀಮಭಾವ,
ಲವಶೇಷದಲ್ಲು ಶತ್ರುಗಣ ಪಂಥ ತಾ ಸಹಿಸದಂತೆ ಇರುವ
ಕತ್ತರಿಸಿ ಎಸೆದು ರಿಪುಗಳನು ಹೊಸೆದು ನಿರ್ಮೂಲಗೊಳಿಸಿ ಇಂತು
ಅವರ ರಕ್ತದಲಿ ಅಭಿಷೇಕಗೊಂಡ ದೇಹದಲಿ ಶೋಭಿಸಿಂತು ॥14॥

ಯಾರಿವರು ದೀನ–ದಾರಿದ್ರ್ಯಪೂರ್ಣ ಪಾಪಾತ್ಮಭರಿತರಿವರು
ಗಣಿಕೆಯರ ಮಣಿಸಿ ಭ್ರಮೆಯ ಸುಖ–ಶಾಂತಿ ಕಾಣುತಿಹ ಅಂಧರಿವರು
ಮೂಢತನದಲ್ಲಿ ಆಲಿಂಗಗೊಂಡು ಪತಿತ–ಕಾಪುರುಷರಿವರು
ಮೃತ್ಯುವನು ಅಪ್ಪಿ ಮುದಿತಗೊಂಡಿರುವ ಉನ್ಮಾದ ಚರಿತರಿವರು ॥15॥

ನಿರ್ವೀರ್ಯನಾಗಿ ಅದು ಎಂತು ದೀರ್ಘ ಕಾಲದಲಿ ಬದುಕಲಿರುವೆ
ಘಾತಗಳ ಸತತ ಭರತದುಬ್ಬರದ ಹೊಡೆತಗಳ ಸಹಿಸಲಿರುವೆ
ಅಪಮಾನಗೊಳಿಸಿ ಅಪಹಾಸ್ಯಗೈವ ಚಿರದ್ವೇಷಿ ವೃಂದದಿಂದ
ಮನ–ಧನದ ಸರ್ವ ಶೋಷಣೆಗೆ ಸಿಲುಕಿ ನೆಮ್ಮದಿಯ ಕೊಳ್ಳುತಿಹೆಯಾ ॥16॥

ಬರ್ಬರದ ಮ್ಲೇಚ್ಛ ಪಾದಾಭಿಷೇಕ ತೀರ್ಥವನು ಸವಿಯುತಿರುವೆ
ಅದು ಎಂತು ಗರ್ವ ನಿನಗೀಗ ನೀನೆ ದ್ವಿಜನೆಂದು ಉಬ್ಬುತಿರುವೆ
ಶೂದ್ರಾತಿಶೂದ್ರ ಪಂಚಮಗೂ ಕಡೆಯು ಪತಿತರಲಿ ಪತಿತನಿರುವೆ
ನರಕದಾ ಪಥದಿ ವೃತಬಂಧವಾಗಿ ಸಾಗಿರಲು ಅರ್ಥವಿಹುದೆ ॥17॥

ಏಳು ನೀ ಏಳು ಜಾಗ್ರತಿಗೆ ಅಗ್ನಿ ಪ್ರಜ್ವಲನಗೊಳಲಿ ಬೇಗ
ಆ ಪರಮತೇಜದಾ ದಿವ್ಯ ಪುರುಷ ಪ್ರತ್ಯಕ್ಷ ನೀನೆ ಈಗ
ಅನಂತಾನಂತ ವಕ್ಷದಲಿ ಸಾಂತ ದಿವ್ಯಾಗ್ನಿ ಪುಟಿತಗೊಂಡು
ಶತ್ರುಗಳನೀಗ ಆಹುತಿಗೆ ಇತ್ತು, ಹೊಂಬೆಳಗು ಉದಿತಗೊಂಡು ॥18॥

ಅರಮನೆಯಲಡಗಿ ಗೂಢವಾಗಿರುವ ಇವನಾವ ಕ್ಷಾತ್ರ–ತೇಜ
ಮದ್ಯ–ಮಾನಿನಿಯ ಮೋಹ–ದೃಷ್ಟಿಯಲಿ ಮುಳುಗಿರುವ ಶೂರ–ಬೀಜ
ಧರ್ಮ ರಕ್ಷಣೆಯ ಯಶದ ಘೋಷಣೆಯ ಮರೆತಿರುವ ಹೇಡಿ ನೀನು
ವಂಚಕನೆ ಏಳು, ಯುದ್ಧ ಸನ್ನದ್ಧ, ರಕ್ಷಿಸಿಕೊ ನಿನ್ನ ನೀನು ॥19॥

ಬಲು ಕಠಿಣ ಮೋಹ ಪರದೆಯಿದೆ ಮತ್ತೆ ಬಲು ಹರಿತ ಖಡ್ಗವಿಹುದು
ರಣದ ಮತ್ತೇರಿ ಹೂಂಕಾರದಲ್ಲಿ, ಆ ಕ್ರೂರ–ದಂಡು ಬಂದು
ಏಕಿನಿತು ಶಸ್ತ್ರ ಚೆಲ್ಲಿರುವೆ ಸೋತು, ಹೆಣಬದುಕ ಬದುಕಲೆಳಲಸಿ
ರಕ್ಷಿಸಿಕೊ ನಿನ್ನ ಅಸ್ಮಿತೆಯ, ಜೊತೆಗೆ ಆರ್ಯನೊಲು ಉಸಿರನಿರಿಸಿ ॥20॥

ನೀನಾವ ವಣಿಜ ಸಮೃದ್ಧಿಯಲ್ಲಿ ಒಟ್ಟಿರುವೆ ವಸ್ತುಗಳನು?
ಹೂಡಿರುವ ಧನದ ಗಳಿಕೆಯಿದು ನಿನ್ನ ಆದಾಯ ಮೂಲವೇನು?
ಆ ಕ್ಷುದ್ರ ಮ್ಲೇಚ್ಛ ಶೋಷಣೆಯ ಫಲಿತ ಸಂಗ್ರಹದ ಭಾಂಡವಿದುವೆ
ಓ ಮಾತೃದ್ರೋಹಿ, ಕಾಳಿಯನು, ನನ್ನ, ಕಂಗಾಲು ಮಾಡುತಿರುವೆ? ॥21॥

ಆಹುತಿಗೆ ಹಾಕು ಆ ಮ್ಲೇಚ್ಛ ಗಳಿಕೆ ಅರ್ಪಿಸುತ ಈಗ ನೀನು
ಮಾತೆ ಕಾಳಿಯಾ ರೋಷಾಗ್ನಿ ಜ್ವಾಲೆಯಂಜಿಕೆಯು ಇಲ್ಲವೇನು?
ಹೃತ್ಕಮಲದಿಂದ ನೀ ಪೂಜೆ ಮಾಡು, ಭವಾನೀ ಮಾತೆಯನ್ನು
ಶ್ರೀಮಂತಗೊಳಿಸು ಈ ಮಾತೃಭೂಮಿಯನ್ನೀಗ ಸತತ ನೀನು ॥22।

(ಸಶೇಷ)

## ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |



ಓ ದೇವಮಾತೆ ಸಾವಿತ್ರಿ, ನಿನ್ನ ಆ ಗುಪಿತ ಆತ್ಮದಿಂದ
ನಾವೀಗ ಇಲ್ಲಿ ಉದಿತಗೊಂಡಿಹೆವು ನಿನ್ನಾತ್ಮ ಸ್ಪಂದದಿಂದ
ನಿನ್ನ ಸಂದೇಶವಾಹಕರು ನಾವು, ಚಿದ್ಗುಹೆಯ ದೇವ–ಗಣವು
ತಡೆಯುತಲಿ ಇನ್ನು ಮಾನವರ ಪತನ ಅಜ್ಞಾನ ಬದುಕು–ಸಾವು
ಸೌಂದರ್ಯಕೀಗ ಜಾಗ್ರತಿಯ ಬೆರುಗು ಅಚ್ಚರಿಯ ನಿಚ್ಚ ವಸ್ತು
ದಿವ್ಯತ್ವ ಮತ್ತೆ ತೋಷದಲಿ ಅವರ ಸ್ಪರ್ಶಿಸುತ ತರಲು ಶಿಸ್ತು;
ಅಜ್ಞಾನದಲ್ಲಿ ನಿಂತಿರುವ ಪಥದ ಸರಣಿಗಳ ಮೇಲೆ ಹೀಗೆ
ನಾವಿಹೆವು ನಿನ್ನ ಸಂಕಲ್ಪ–ಶ್ರೇಷ್ಠ ಸತತದಲಿ ಜ್ಯೋತಿಯೆಡೆಗೆ

**– ಪುಟ್ಟು ಕುಲಕರ್ಣಿ**

**(ಸಾವಿತ್ರಿ; ದಳ 6 ರೇಣು 3 ಪುಟ 501)**

Photo: Imaging Savitri

**RNI No. 22511/1971**
No. of Pages **64 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಏನೋ ಒಂದಿನಿತು ಮನಸು ಕೊಟ್ಟೆ
ಮನಸಾದರೂ ನಾ ಪೂರ್ಣ ಅರ್ಪಿಸಲಿಲ್ಲ !
ಆ ಮನವಾದರೂ ನನ್ನದೇ ಅಲ್ಲ
ನಿನ್ನ ಚೈತನ್ಯಾಬ್ಧಿಯಲ್ಲೊಂದು ಬಿಂದು
ಆ ಬಿಂದುವನ್ನಾದರೂ ಪೂರ್ಣ ಕೊಡಲಿಲ್ಲ !
ಅದರೊಳೂ ಜಿಪುಣತನ ಒಂದರೆ ನಿಮಿಷ !
ಕಣ್ಮುಚ್ಚಿ ತೆರೆವನಕ ನೆನೆದಿತ್ತು ಮನ !
ಆದರೂ ನೀ ಕಣ್ಮುಚ್ಚದೆ ಎಲ್ಲವನೂ ಕೊಟ್ಟೆ
ನಿನ್ನ ಕಾರುಣ್ಯಕೆಣೆಯುಂಟೆ ತಾಯಿ.

**– ಕೋ ಚೆನ್ನಬಸಪ್ಪ**
**(ಚೈತನ್ಯಮಯಿ ಶ್ರೀಮಾತಾ – 1988)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.